ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 24 | ಜೂನ್ 11–17, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ಆರ್‌ಎಸ್‌ಎಸ್ ಕೇಂದ್ರದಲ್ಲಿ ಕಾಂಗ್ರೆಸ್ಸಿಗ ಪ್ರಣವ್ ಮುಖರ್ಜಿ



ವಂಚಕ ಪ್ರಧಾನಿ ಯೋಜನೆಗಳೂ

ಭ್ರಷ್ಟಾಚಾರದ ವಿರುದ್ಧ ಸಮರ ಎಂಬ ಬೊಗಳೆಯೂ...



1

Four Years of Modi Govt Misrule

Why it has to end


Economy in Shambles

Courtesy : The Times of India

A CPI (M) PUBLICATION

ಸಾಲ ಮನ್ನಾ ಹೇಗೆ ಆಗಬೇಕು?





ಕಾಲಾ ಮತ್ತು ಕಾವೇರಿ

ತ್ರಿಪುರ SFI ಅಧ್ಯಕ್ಷೆ ಮೇಲೆ ದಾಳಿ





ಫ್ರಾನ್ಸ್: ಮತ್ತೆ ಮೇ 68ರ ಸ್ಫೂರ್ತಿ

ದೌರ್ಜನ್ಯ ತಡೆ ಕಾಯ್ದೆ: ಸುಗ್ರಿವಾಜ್ಞೆ ತರಲು ಕೇಂದ್ರ ಸರಕಾರದ ನಿರಾಕರಣೆ-

ಒರಟು ದಲಿತ–ವಿರೋಧಿ ನಿಲುವು ಮತ್ತೊಮ್ಮೆ ಬಯಲು : ಸಿಪಿಐ(ಎಂ) ಪೊಲಿಟ್‌ಬ್ಯುರೊ

ಪರಿಶಿಷ್ಟ ಜಾತಿಗಳ/ಬುಡಕಟ್ಟುಗಳು ದೌರ್ಜನ್ಯ ತಡೆ ಕಾಯ್ದೆಯ ವಿಧಿಗಳನ್ನು ನಿಷ್ಪ್ರಯೋಜಕಗೊಳಿಸಿದ ಸುಪ್ರಿಂ ಕೋರ್ಟಿನ 'ತೀರ್ಪಿನ ಪರಿಣಾಮಗಳನ್ನು ಇಲ್ಲವಾಗಿಸಲು ಒಂದು ಸುಗ್ರೀವಾಜ್ಞೆಯುನ್ನು ಹೊರಡಿಸುವುದಿಲ್ಲ ಎಂದು ಕೇಂದ್ರ ಸರಕಾರ ಪ್ರಕಟಿಸಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿರೋಧಿಸಿದೆ. ಪರಿಸ್ಥಿತಿಯನ್ನು ಸರಿಪಡಿಸಲು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಒಂದು ಮಸೂದೆಯನ್ನು ಮಂಡಿಸುವ ಬಗ್ಗೆ ಯಾವುದೇ ಸಾರ್ವಜನಿಕ ಆಶ್ವಾಸನೆ ಕೊಡಲು ಕೇಂದ್ರ ಸರಕಾರ ನಿರಾಕರಿಸಿರುವ ಹಿನ್ನೆಲೆಯಲ್ಲಿ ಇದು ಇನ್ನಷ್ಟು ಆಕ್ಷೇಪಣಾರ್ಹ ಸಂಗತಿ ಎಂದು ಅದು ಹೇಳಿದೆ. ಈ ಹಿಂದೆ ಅದು ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸುವ ಬಗ್ಗೆ ಆಶ್ವಾಸನೆ ನೀಡಿತ್ತು. ಈಗ ತನ್ನ ನಿಲುವನ್ನು ಸಂಪೂರ್ಣವಾಗಿ ಬದಲಿಸಿದೆ ಎಂದು ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಈಗಾಗಲೇ ಸುಪ್ರಿಂ ಕೋರ್ಟ್ ತೀರ್ಪು ಬಂದು ಎರಡೂವರೆ ತಿಂಗಳುಗಳಾಗಿವೆ. ಈಗಿರುವ ಕಾಯ್ದೆ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟು ಸಮುದಾಯಗಳಿಗೆ ಯಾವುದೇ ಪರಿಹಾರ ಕೊಡುವಲ್ಲಿ ವಿಫಲವಾಗಿದೆ. ಈ ಸಮುದಾಯಗಳು ಹೀನ ಅತ್ಯಾಚಾರಗಳಿಗೆ ಒಳಗಾಗುತ್ತಲೇ ಇದ್ದಾರೆ. ಇದು ಎನ್‌ಡಿಎ ಸರಕಾರದ ಒರಟು ದಲಿತ–ವಿರೋಧಿ ನಿಲುವನ್ನು ಇನ್ನಷ್ಟು ಬಯಲಿಗೆ ತಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ತಕ್ಷಣವೇ ಸುಪ್ರಿಂ ಕೋರ್ಟಿನ ತೀರ್ಪಿನ ಮೊದಲಿದ್ದ ಸ್ಥಿತಿ ನೆಲೆಗೊಳ್ಳುವಂತೆ ಮಾಡಲು ಹಾಗೂ ತಮ್ಮ ಸಂವಿಧಾನಿಕ ಹಕ್ಕುಗಳನ್ನು ಮನ್ನಿಸಲಾಗುತ್ತದೆ ಎಂಬ ವಿಶ್ವಾಸವನ್ನು ಈ ಸಮುದಾಯಗಳಲ್ಲಿ ಮೂಡಿಸಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಭೀಮ ಕೊರಗಾಂವ್: ಹಿಂಸಾಚಾರ ನಡೆಸಿದವರ ವಿರುದ್ಧ ಕ್ರಮದ ಬದಲು, ಪೀಡಿತರ ರಕ್ಷಣೆಗೆ ಬಂದವರ ಮೇಲೆ ಸ್ವೇಚ್ಛಾಚಾರಿ ಕ್ರಮ

ಪ್ರತಿಭಟನೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ

ಭೀಮ–ಕೊರೆಗಾಂವ್ ಸಮರದ ವಾರ್ಷಿಕೋತ್ಸವ ಆಚರಣೆಯ ಸಂದರ್ಭದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದ ದಲಿತರ ಮೇಲೆ ವ್ಯಾಪಕ ಹಿಂಸಾಚಾರದ ಪ್ರಕರಣದ ನಂತರ ಮಹಾರಾಷ್ಟ್ರ ಪೋಲೀಸರು ಈಗ ಕೈಗೊಂಡಿರುವ ಕ್ರಮಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿರೋಧ ವ್ಯಕ್ತಪಡಿಸಿದೆ. ಸ್ವತಃ ಡಾ.ಬಿ.ಆರ್. ಅಂಬೇಡ್ಕರ್ ಅವರೇ ಈ ಆಚರಣೆಯನ್ನು ಆರಂಭಿಸಿದ್ದರು. ಅದು ಈಗ ಮಹಾರಾಷ್ಟ್ರದಾದ್ಯಂತ ದಲಿತ ಸಮುದಾಯದ ಸ್ವಾಭಿಮಾನದ ಸಂಕೇತವಾಗಿ ಬಿಟ್ಟಿದೆ.

ಆ ದಿನ ನೆರೆದವರ ಮೇಲೆ ಹಿಂಸಾಚಾರ ನಡೆಸಿದವರನ್ನು ಹಿಡಿದು ಶಿಕ್ಷಿಸುವ ಬದಲು ಬಿಜೆಪಿ ನೇತೃತ್ವದ ಸರಕಾರ ಹಿಂಸಾಚಾರಕ್ಕೆ ಒಳಗಾದವರನ್ನು ರಕ್ಷಿಸಲು ಹೊರಟವರ ಮೇಲೆಯೇ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ)ಯಂತಹ ಕಠಿಣ ಕಾನೂನನ್ನೂ ಪ್ರಯೋಗಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ.

ಸರಕಾರದ ಇಂತಹ ಸ್ವೇಚ್ಛಾಚಾರದ ಕ್ರಮಗಳು ಅನ್ಯಾಯವನ್ನು ಅನುಭವಿಸುತ್ತಿರುವವರಲ್ಲಿ ಮತ್ತಷ್ಟು ಪರಕೀಯ ಭಾವ ಉಂಟಾಗಲು, ಸರಕಾರದ ಇಬ್ಬಗೆ ನೀತಿಯಿಂದ ಮತ್ತಷ್ಟು ನೋವುಣ್ಣುವಂತೆ ಮಾಡಲು ಕಾರಣವಾಗುತ್ತವೆ. ಇದನ್ನು ಪ್ರಜಾಪ್ರಭುತ್ವ ಮನೋಭಾವದ ಮತ್ತು ನ್ಯಾಯದ ಆಶಯ ಇಟ್ಟುಕೊಂಡಿರುವ ಎಲ್ಲರೂ ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ ಮಾಡಿದೆ. ಮಹಾರಾಷ್ಟ್ರ ಸರಕಾರ ಇಂತಹ ಸೇಡಿನ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಎಸ್ ಎಫ್ ಐ ತ್ರಿಪುರಾ ರಾಜ್ಯಾಧ್ಯಕ್ಷೆಯ ಮೇಲೆ ಬಿಜೆಪಿ ಗೂಂಡಾ ದಾಳಿ–ಜನವಾದಿ ಮಹಿಳಾ ಸಂಘಟನೆಯ ಖಂಡನೆ



ಜೂನ್ 4 ರಂದು ಬಿಜೆಪಿಯ ಗೂಂಡಾಗಳ ಒಂದು ದೊಡ್ಡ ಗುಂಪು ತ್ರಿಪುರಾ ಎಸ್‌ಎಫ್‌ಐನ ರಾಜ್ಯ ಅಧ್ಯಕ್ಷೆಯಾಗಿರುವ ನೀಲಾಂಜನಾ ರಾಯ್ ಅವರ ಮನೆಯ ಒಳಗೇ ಬಂದು ಅವರ ಮೇಲೆ ಹಲ್ಲೆ ಮಾಡಿದ್ದಾರೆ, ಅವರನ್ನು ಬಡಿಗೆಗಳಿಂದ ಸಿಕ್ಕಾಪಟ್ಟೆ ಥಳಿಸಿರುವುದಲ್ಲದೆ, ಆಕೆಯ ರಕ್ಷಣೆಗೆ ಬಂದ ತಂಗಿ, ಅವರ ಹಾಸಿಗೆ ಹಿಡಿದಿರುವ ತಾಯಿ ಮತ್ತು ಸೋದರ ಸಂಬಂಧಿಯ ಮೇಲೆ ಕೂಡ ಹಲ್ಲೆ ನಡೆಸಿದರು. ಇದೊಂದು ಅತ್ಯಂತ ನೀಚ ಕೃತ್ಯ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ನೀಲಾಂಜನಾ ರಾಯ್ ಎಸ್ ಎಫ್ ಐ ನ ಒಬ್ಬ ಅಖಿಲ ಭಾರತ ಉಪಾಧ್ಯಕ್ಷರೂ ಆಗಿದ್ದಾರೆ.

ನೀಲಾಂಜನಾ ಹೇಗೋ ಹಲ್ಲೆಕೋರರಿಂದ ತಪ್ಪಿಸಿಕೊಂಡು ಆಸ್ಪತ್ರೆಗೆ ತಲುಪುವ ಮೊದಲೇ ಮತ್ತೆ ಆಳುವ ಪಕ್ಷದ ಗೂಂಡಾಗಳು ಅಡ್ಡಗಟ್ಟಿ ಆಕೆಯನ್ನು ಮತ್ತೆ ಥಳಿಸಿದ್ದಾರೆ. ನೆರೆಯ ಒಬ್ಬರು ಮಹಿಳೆ ಸಹಾಯಕ್ಕೆ ಧಾವಿಸಿ ಬಂದು ಆಕೆಯನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಿದರು. ಆಸ್ಪತ್ರೆಯಿಂದ ಚಿಕಿತ್ಸೆ ಪಡೆದ ನಂತರ ಮನೆಗೆ ಮರಳಲು ಆಕೆಗೆ ಸಾಧ್ಯವಾಗುತ್ತಿಲ್ಲ. ಈ ಹೀನ ಕೃತ್ಯ ಎಸಗಿದವರನ್ನು ತಕ್ಷಣವೇ ಬಂಧಿಸಬೇಕು, ಈ ಕಾನೂನುಬಾಹಿರತೆಯನ್ನು ನಿಲ್ಲಿಸಬೇಕು ಎಂದು ತ್ರಿಪುರಾದ ಬಿಜೆಪಿ ನೇತರತ್ವದ ಸರಕಾರವನ್ನು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಜೂನ್ 5ರಂದು ಈ ಹಲ್ಲೆಕೋರತನದ ವಿರುದ್ಧ ಅಗರ್ತಲಾದಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ. "ಎದುರಿಸುತ್ತೇವೆ, ಹೋರಾಡುತ್ತೇವೆ– ನೀವೂ–ನಾವೂ" ಎಂಬರ್ಥದ ಘೋಷಣೆಗಳನ್ನು ಕೂಗುತ್ತ ಸಾವಿರಾರು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಕಾರ್ಯಕರ್ತರು ಈ ಮೆರವಣಿಗೆಯಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.



ದೇಶಾದ್ಯಂತ ಮಂದಸೌರ್ ಗೋಲೀಬಾರಿನಲ್ಲಿ ರೈತರ ಬಲಿದಾನದ ಮೊದಲ ವಾರ್ಷಿಕದ ಆಚರಣೆ

ಜೂನ್ 6 ರಂದು ದೇಶಾದ್ಯಂತ ರೈತಾಪಿ ಜನಗಳು ಒಂದು ವರ್ಷದ ಹಿಂದೆ ಮಧ್ಯಪ್ರದೇಶದ ಮಂದಸೌರ್‌ನಲ್ಲಿ ಬಿಜೆಪಿ ಸರಕಾರದ ಪೋಲೀಸ್ ಗುಂಡುಗಳಿಗೆ ಬಲಿಯಾದ ಆರು ರೈತರ ಬಲಿದಾನವನ್ನು ನೆನಪಿಸಿಕೊಂಡರು.

ಜುಲೈ 5 ರಂದು ಬುದ ಗ್ರಾಮದಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಅಖಿಲ ಭಾರತ ಕಿಸಾನ್ ಸಂಘರ್ಷ ಸಮಿತಿಯ ಮುಖಂಡರು ಮತ್ತು ರಾಜ್ಯ ಮುಖಂಡರು ಇದರಲ್ಲಿ ಭಾಗವಹಿಸಿದರು.

ಜೂನ್ 6 ರ ಮುಂಜಾವಿನಲ್ಲೇ ಈ ಮುಖಂಡರು ಪಿಪ್ಲಾಯ ಗ್ರಾಮದಲ್ಲಿ ರೈತ ಹುತಾತ್ಮ ಕನ್ಹೈಯಾಲಾಲ್ ಪಾತಿದಾರ್ ಪ್ರತಿಮೆಯ ಎದುರು ಒಂದು ದಿನದ ಉಪವಾಸ ಮುಷ್ಕರ ಆರಂಭಿಸಿದರು. ಅತ್ತ ಮಂಡಿಗಳಲ್ಲಿ ಒಂದು ದಿನದ ಮುಷ್ಕರವೂ ಆರಂಭವಾಯಿತು.


ಇನ್ನೊಂದೆಡೆಯಲ್ಲಿ ಬಿಜೆಪಿ ಸರಕಾರವೂ ತನ್ನದೇ ರೀತಿಯಲ್ಲಿ ಈ ದಿನವನ್ನು ನೆನಪಿಸಿಕೊಂಡಿತು. ರೈತರ ಬೇಡಿಕೆಗಳನ್ನು ಸ್ವೀಕರಿಸುವುದು ಬಿಟ್ಟು ಮತ್ತೆಲ್ಲವನ್ನೂ ಅದು ಮಾಡಿತು, ಇಡೀ ರಾಜ್ಯದಲ್ಲಿ 350 ಹೊಸ ವಾಹನಗಳನ್ನು, 36 ಸಾವಿರ ಪೋಲಿಸ್ ಬ್ಯಾಟನ್‌ಗಳನ್ನು ಮತ್ತು 6000 ಹೊಸ ಲಾಠಿಗಳನ್ನು ಬುಕ್ ಮಾಡಿತು ಎಂದು ಮಧ್ಯಪ್ರದೇಶದ ಹಿರಿಯ ಕಮ್ಯುನಿಸ್ಟ್ ಮುಖಂಡ ಬಾದಲ್ ಸರೋಜ್ ವ್ಯಂಗ್ಯವಾಡಿದ್ದಾರೆ. ಕಳೆದ ವರ್ಷ ಗೋಲೀಬಾರಿನ ನಂತರ ಮೊಸಳೆ ಕಣ್ಣೀರು ಸುರಿಸಿ ಒಂದು ದಿನದ ಉಪವಾಸ ಮಾಡಿ ರೈತರ ಬೆಳೆಗಳನ್ನು ಕನಿಷ್ಟ ಬೆಂಬಲ ಬೆಲೆಗಳಿಗಿಂತ ಕಡಿಮೆ ಬೆಲೆಗಳಲ್ಲಿ ಖರೀದಿಸುವುದನ್ನು ಅಪರಾಧವಾಗಿ ಮಾಡಲಾಗುವುದು, ಸಾಲ ಮನ್ನಾ ಮಾಡಲಾಗುವುದು, ಗೋಲೀಬಾರಿನ ಬಗ್ಗೆ ತನಿಖೆ ಮಾಡಲಾಗುವುದು ಎಂಬ ಭರವಸೆಗಳಲ್ಲಿ ತನಿಖೆಯ ಆಯೋಗವನ್ನು ನೇಮಿಸುವುದನ್ನು ಬಿಟ್ಟು ಯಾವುದನ್ನೂ ಮಾಡದ ಮುಖ್ಯಮಂತ್ರಿ ರೈತರ ಪ್ರತಿಭಟನೆಯ ಭಯದಿಂದ ಇಡೀ ರಾಜ್ಯವನ್ನು ಪೊಲಿಸ್ ಕೋಟೆಯಾಗಿ ಮಾಡಿದ್ದರು. ಹಲವೆಡೆ ಅಧಿಕೃತವಾಗಿ, ಇನ್ನು ಹಲವೆಡೆ ಅನಧಿಕೃತವಾಗಿ ಸೆಕ್ಷನ್ 144 ಜಾರಿ ಮಾಡಲಾಗಿತ್ತು. ಆದರೂ ಪ್ರತಿಭಟನೆ ನಡೆಯುವುದನ್ನು ತಡೆಯಲಾಗಲಿಲ್ಲ. ಅಥವ ಇದು ಒಂದು ದಿನದಲ್ಲೇ ಮುಗಿದು ಹೋಗುತ್ತದೆ ಎಂಬ ಬಿಜೆಪಿ ಸರಕಾರದ ನಿರೀಕ್ಷೆಯೂ ಈಡೇರಿಲ್ಲ.

ಈ ಕಾರ್ಯಕ್ರಮದಲ್ಲಿ ಎಐಕೆಎಸ್‌ಸಿಸಿಯ ವಿ.ಎನ್.ಸಿಂಗ್, ಯೋಗೇಶ್ ಯಾದವ್, ಎಐಕೆಎಸ್ ಮುಖಂಡ ಕೃಷ್ಣ ಪ್ರಸಾದ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಸ್ವಂತರ್ ಸಿಂಗ್, ಸಿಪಿಐ ಮುಖಂಡ ಅತುಲ್ ಅಂಜನ್, ರಾಜ್ಯದ ಹಿರಿಯ ರೈತ ಮುಖಂಡ ಡಾ.ಸುನೀಲಂ ಮತ್ತಿತರರು ಭಾಗವಹಿಸಿದರು.

ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ರೈತರು ಮೋದಿಯವರ ಕಾರ್ಪೊರೇಟ್ ಆಳ್ವಿಕೆಯನ್ನು ಕೊನೆಗೊಳಿಸುತ್ತಾರೆ ಎಂದು ಸಾರಿದರು.

ಜೂನ್ 10ರ ಭಾರತ್ ಬಂದ್‌ಗೆ ಕರೆ ನೀಡಿಲ್ಲ–ಎಐಕೆಎಸ್

ರಾಷ್ಟ್ರೀಯ ಕಿಸಾನ್ ಮಜ್ದೂರ್ ಮಹಾಸಂಘ್ ಎಂಬ ಸಂಘಟನೆ ಜೂನ್ 10 ರಂದು ಭಾರತ್ ಬಂದ್‌ಗೆ ಕರೆ ನೀಡಿರುವುದಾಗಿ ವರದಿಯಾಗಿದೆ. ಈ ಸಂಘಟನೆ ಈ ಬಗ್ಗೆ ಎಐಕೆಸ್, ಭೂಮಿ ಅಧಿಕಾರ್ ಆಂದೋಲನ್, ಅಥವ ಸಂಘರ್ಷ ಸಮಿತಿಯೊಡನಾಗಲೀ ಮಾತನಾಡಿಲ್ಲ. ಆದ್ದರಿಂದ ಎಐಕೆಎಸ್ ಇದರಲ್ಲಿ ಭಾಗವಹಿಸುತ್ತಿಲ್ಲ ಎಂದು ಸ್ಪಷ್ಟೀಕರಿಸಿದೆ.



ಚುನಾವಣಾ ಫಲಿತಾಂಶದ ವಿಶ್ಲೇಷಣೆ ಮತ್ತು ಮುಂದಿನ ಕರ್ತವ್ಯಗಳ ಬಗ್ಗೆ ಸಿಪಿಐ(ಎಂ)

“ಮೈತ್ರಿಕೂಟ ಸರಕಾರಕ್ಕೆ ಸ್ವಾಗತ, ಆದರೆ ಭ್ರಮೆಗಳು ಬೇಡ”

ಜೂನ್ 5–6 2018 ರಂದು ಸಭೆ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ವಿಧಾನ ಸಭಾ ಚುನಾವಣೆ ಫಲಿತಾಂಶದ ವಿಶ್ಲೇಷಣೆ ಮತ್ತು ಅದರ ಹಿನ್ನೆಲೆಯಲ್ಲಿ ಮುಂದಿನ ಕರ್ತವ್ಯಗಳ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಅದರ ಮುಖ್ಯಾಂಶಗಳು :

ಪ್ರಮುಖ ಪಕ್ಷಗಳ ಸ್ಥಿತಿ – ಕಾರಣಗಳು

ಬಿಜೆಪಿ ಈ (ಅಂದರೆ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ, ಆದರೆ ಬಹುಮತ ಪಡಯಲು ವಿಫಲವಾದ) ಫಲಿತಾಂಶ ಪಡೆಯಲು ಕಾರಣವಾದ ಮುಂದಿನ ಪ್ರಮುಖ ಅಂಶಗಳನ್ನು ನಿರ್ಣಯ ಗುರುತಿಸಿದೆ – ಕೋಮು ಧ್ರುವೀಕರಣ (ಕರಾವಳಿಯಲ್ಲಿ ಎಸ್.ಡಿ.ಪಿ.ಐ. ಅಭ್ಯರ್ಥಿಗಳು ಸ್ಪರ್ಧಿಸಿ ಆ ಮೇಲೆ ಕಾಂಗ್ರೆಸಿನ ಪರವಾಗಿ ವಾಪಸು ತೆಗೆದುಕೊಂಡಿದ್ದು ಸೇರಿದಂತೆ); ಜಾತ್ಯಾತೀತ ಮತಗಳ ವಿಭಜನೆ,; ಮೋದಿ ಮತ್ತು ಅಮಿತ್‌ಶಾ ಪ್ರಭಾವ; ಕಾಂಗ್ರೆಸ್ ವೀರಶೈವ ಲಿಂಗಾಯಿತರ ವಿರೋಧಿ ಹಾಗೂ ಲಿಂಗಾಯಿತರಿಗೆ ಅಧಿಕಾರವೆಂದು ಯಶಸ್ವಿಯಾಗಿ ಬಿಂಬಿಸಿದ್ದು; ಪರಿಶಿಷ್ಠ ಪಂಗಡದ ಜನರ ಮತಗಳ ಕ್ರೋಢೀಕರಣ; ನವ ಮತದಾರರು ಮತ್ತು ಯುವಜನರ ಮತಗಳ ಬೆಂಬಲ; ಹಲವೆಡೆ ಬಿಜೆಪಿಗೆ ಜೆಡಿಎಸ್ ಮತಗಳ ವರ್ಗಾವಣೆ; ಮುದ್ರಣ/ದೃಶ್ಯ/ಸಾಮಾಜಿಕ ಜಾಲತಾಣಗಳ ಪರಿಣಾಮಕಾರಿ ಬಳಕೆ,; ಕಾಂಗ್ರೆಸ್‌ನ ಜಾತಿ ರಾಜಕಾರಣದಿಂದುಂಟಾದ ನಕಾರಾತ್ಮಕ ಮತಗಳ ಗಳಿಕೆ; ಮತ್ತು ವ್ಯಾಪಕವಾದ ಹಣದ ಹಂಚಿಕೆ.

ಸಿಪಿಐ(ಎಂ) ಮತ್ತಿತರೇ ಎಡ ಮತ್ತು ಪ್ರಗತಿಪರ ಶಕ್ತಿಗಳು ಬಿಜೆಪಿ ಹಾಗೂ ಸಂಘ ಪರಿವಾರದ ಆರ್ಥಿಕ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಸೌಹಾರ್ದತೆಗಾಗಿ ನಿರಂತರವಾಗಿ ವಿಶಾಲ ಜನಸಮುದಾಯಗಳನ್ನು ಅಣಿನೆರೆಸುವ ಮೂಲಕ ಸಂಘಟಿಸಿದ ಚಳುವಳಿಗಳು, ಬಿಜೆಪಿ ಬಹುಮತ ಗಳಿಸದೇ ಇರುವುದಕ್ಕೆ ಪ್ರಮುಖವಾದ ಕಾರಣ ಎಂದು ನಿರ್ಣಯ ಗುರುತಿಸಿದೆ.

ಕಾಂಗ್ರೆಸ್ ಬಹುಮತ ಕಳೆದುಕೊಂಡು ಅತಿ ದೊಡ್ಡ ಪಕ್ಷವಾಗಿ ಸಹ ಹೊಮ್ಮದಿರುವುದಕ್ಕೆ ಈ ಮುಂದಿನ ಪ್ರಮುಖ ಅಂಶಗಳನ್ನು ನಿರ್ಣಯ ಗುರುತಿಸಿದೆ – ಜನವಿರೋಧಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳ ಜಾರಿ; ಕಾಂಗ್ರೆಸ್‌ನೊಳಗಿನ ಆಂತರಿಕ ಒಳ ಜಗಳ, ಮೂಲ ಹಾಗೂ ವಲಸೆ ಕಾಂಗ್ರೆಸಿಗರೆಂಬ ವಿಚಾರ, ಅನೈಕ್ಯತೆ; ಬಿಜೆಪಿ ಹಾಗೂ ಸಂಘ ಪರಿವಾರದ ಸಂಘಟನಾ ಶಕ್ತಿಗೆ ಹೋಲಿಸಿದರೆ ಅದರಲ್ಲಿ ಕೊರತೆ; ಬಿಜೆಪಿ–ಸಂಘ ಪರಿವಾರದ ಕೋಮುಧ್ರುವೀಕರಣವನ್ನು ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಮತ್ತು ಒಂದು ರಾಜ್ಯ ಸರಕಾರವಾಗಿ, ಅದನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಘೋರ ವೈಫಲ್ಯ; ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನ ಮಾನ ನೀಡಿದ್ದನ್ನು ಧರ್ಮವನ್ನು ಒಡೆಯುತ್ತಿರುವರೆಂಬ ವೀರಶೈವ ಲಿಂಗಾಯಿತರ ಮತ್ತು ಪಂಚಪೀಠಾಧೀಶ್ವರರ ಕೋಪಕ್ಕೆ ತುತ್ತಾದುದು; ಅಹಿಂದ ಕ್ರೋಢಿಕರಣದ ಜಾತಿವಾದಿ ರಾಜಕಾರಣದ ತಂತ್ರ ಗ್ರಾಮೀಣ ಪ್ರದೇಶವನ್ನು ಆಳುವ ಭೂಮಾಲಕ–ಬಂಡವಾಳದಾರರಿರುವ ಎರಡು ಪ್ರಬಲ ಜಾತಿ/ಜನಸಮುದಾಯಗಳಾದ ಲಿಂಗಾಯಿತರು ಮತ್ತು ಒಕ್ಕಲಿಗರು ಕಾಂಗ್ರೆಸಿಗೆ ವಿರುದ್ಧವಾಗಿ ಅಣಿ ನೆರೆಸುವಂತಾದ್ದು; ಮುಖ್ಯ ಮಂತ್ರಿಗಳ ಸ್ವಜಾತಿ ರಾಜಕಾರಣವು ಹಿಂದುಳಿದ ಜಾತಿಗಳ ಕೆಲ ಪ್ರಮುಖ ಸಮುದಾಯಗಳು ದೂರ ಸರಿಯುವಂತಾಗಿದ್ದು; ಒಳ ಮೀಸಲಾತಿ ಜಾರಿ ಮಾಡದ್ದರ ವಿರುದ್ಧ ಮಾದಿಗ ಜನಸಮುದಾಯ ಅಸಂತೃಪ್ತಿ.

ಜೆಡಿಎಸ್ ಗೆ ಸಹ ತನ್ನ ಸ್ಥಾನಗಳನ್ನು ಪೂರ್ಣವಾಗಿ ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದ ನಿರ್ಣಯ, ಈ ಮುಂದಿನ ಪ್ರಮುಖ ಕಾರಣಗಳನ್ನು ಗುರುತಿಸಿದೆ – ಕೋಮುವಾದದ ವಿರುದ್ಧ ದೃಡವಾದ ಹೋರಾಟಗಳನ್ನು ನಡೆಸುವಲ್ಲಿ ಉದಾಸೀನದಿಂದಾಗಿ ಕರಾವಳಿ ಮತ್ತು ಮಲೆನಾಡಲ್ಲಿ ಸೋಲು; ಕಾಂಗ್ರೆಸ್‌ನ ಅಹಿಂದ ರಾಜಕಾರಣದಿಂದಾಗಿ ಒಕ್ಕಲಿಗ ಭೂಮಾಲಕ, ಬಂಡವಾಳದಾರ ಸಮುದಾಯದ ನಡುವೆ ಬಂದ ಪ್ರಾಬಲ್ಯ; ಲಿಂಗಾಯಿತ ಪ್ರಾಬಲ್ಯದ ಉತ್ತರ ಹಾಗೂ ಮದ್ಯ ಕರ್ನಾಟಕದಲ್ಲಿ ಈಗಲೂ ಅದರ ತಳಹದಿ ಉಳಿದಿರುವುದು.

ಸಿಪಿಐ(ಎಂ) ಸ್ಪರ್ಧೆ

ಚುನಾವಣೆಯಲ್ಲಿ ಸಿಪಿಐ(ಎಂ) ನಡೆಯ ವಿಮರ್ಶೆ ಮಾಡಿದ ನಿರ್ಣಯ “ಒಟ್ಟಾರೇ ಈಗ ಜನತೆಯ ತೀರ್ಪನ್ನು ನೋಡುವಾಗ ನಮ್ಮ ಕರೆಯಂತೆ ಬಿಜೆಪಿಯನ್ನು ಜನ ಇಡಿಯಾಗಿ ತಿರಸ್ಕರಿಸದಿದ್ದರೂ ಅದಕ್ಕೆ ಬಹುಮತ ನೀಡಲಿಲ್ಲ. ಬದಲಿಗೆ ಅತಿಹೆಚ್ಚು ಸ್ಥಾನವನ್ನು ಪಡೆದ ಏಕ ಪಕ್ಷವೆಂಬ ಹೆಗ್ಗಳಿಕೆ ನೀಡಿದ್ದಾರೆ. ಅದೇ ರೀತಿ, ಸಿಪಿಐ(ಎಂ) ಪಕ್ಷವನ್ನು ಗೆಲ್ಲಿಸಲಿಲ್ಲ. ಬಿಜೆಪಿಗೆ ಬಹುಮತ ನೀಡದೇ ತಡೆದುದಲ್ಲದೇ ಜನವಿರೋಧಿ ನೀತಿಗಳನ್ನು ಜಾರಿ ಮಾಡುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಇಳಿಸಿದ್ದಾರೆ. ಹಾಗೇ ಬಿಜೆಪಿ ವಿರೋಧಿ ಶಕ್ತಿಗಳಿಗೆ ಒಟ್ಟಾಗಿ ಬಹುಮತ ನೀಡಿದ್ದಾರೆ.” ಎಂದಿದೆ.

ಸಿಪಿಐ(ಎಂ) ಸ್ಪರ್ಧಿಸಿದ 19 ಕ್ಷೇತ್ರಗಳಲ್ಲಿ ಯಾವುದೇ ಸ್ಥಾನಗಳನ್ನು ಗೆಲ್ಲದೇ, ಒಟ್ಟು ಮತದಾನದ ಶೇ 0.2 (81,191) ಮತಗಳನ್ನು ಪಡೆದಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಪಕ್ಷ ಎರಡನೇ ಸ್ಥಾನದಲ್ಲಿದ್ದು ಒಟ್ಟು 51,697 ಮತಗಳನ್ನು ಗಳಿಸಿದೆ. ಇದು ಸಿಪಿಐ(ಎಂ) ಸ್ಪರ್ಧಿಸಿದ ಒಟ್ಟು 19 ಕ್ಷೇತ್ರಗಳಲ್ಲಿ ಪಡೆದ ಒಟ್ಟು ಮತಗಳ ಶೇ 64 ರಷ್ಟು ಆಗಿದೆ. ಉಳಿದ 18 ಕ್ಷೇತ್ರಗಳಲ್ಲಿ ಪಡೆದ ಮತಗಳು ಶೇ 36 ಮಾತ್ರವೇ ಆಗಿದೆ.

ಈ ಫಲಿತಾಂಶದ ಕಾರಣಗಳನ್ನು ನಿರ್ಣಯ ಈ ರೀತಿಯಾಗಿ ಗುರುತಿಸಿದೆ:

* ಭೂಮಾಲಕ–ಬಂಡವಾಳಶಾಹಿ ರಾಜಕೀಯ

ಪುಟ 5 ಕ್ಕೆ

‘ಅಗಸ್ಟ್ 9 ಜೈಲು ಭರೋ, ಸೆಪ್ಟೆಂಬರ್ 5 ಪಾರ್ಲಿಮೆಂಟ್ ಚಲೋ ಯಶಸ್ವಿಗೊಳಿಸಿ’

ಸಿಪಿಐ(ಎಂ) ರಾಜ್ಯ ಸಮಿತಿ ಸಭೆಯು ದಿನಾಂಕ 5, 6 ಜೂನ್ 2018ರಂದು ಬೆಂಗಳೂರಿನಲ್ಲಿ ನಡೆಯಿತು. ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿದ್ದು ಅದರ ಜಾರಿಗೆ ಮುಂದಾಗುವಂತೆ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ:

ಕರ್ನಾಟಕ ವಿಧಾನ ಸಭಾ ಚುನಾವಣೆ–2018ರ ಫಲಿತಾಂಶ

ರಾಜ್ಯ ಸಮಿತಿಯು, ಕರ್ನಾಟಕ ವಿಧಾನ ಸಭಾ ಚುನಾವಣೆ–2018ರ ಫಲಿತಾಂಶವನ್ನು ಪರಾಮರ್ಶೆ ಮಾಡಿದೆ. ಅದೆ ರೀತಿ ಪ್ರಸಕ್ತ ಪ್ರಮುಖ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದೆ. ಈ ಎಲ್ಲದರ ಒಟ್ಟು ವರದಿಯನ್ನು ಅಂಗೀಕರಿಸಿದೆ. (ಈ ವರದಿಯ ಮುಖ್ಯಾಂಶಗಳು ಇದೇ ಸಂಚಿಕೆಯ ಪುಟ 5ರಲ್ಲಿದೆ)

ಜೈಲ್ ಭರೋ ಚಳುವಳಿ (ಆಗಸ್ಟ್ 09), ಸಾಮೂಹಿಕ ಜಾಗರಣೆ (ಆಗಸ್ಟ್ 14) ಮತ್ತು ಪಾರ್ಲಿಮೆಂಟ್ ಚಲೋ (ಸೆಪ್ಟಂಬರ್ 05)

ರಾಜ್ಯದಲ್ಲಿ ರೈತ, ಕೂಲಿಕಾರ, ಮಹಿಳಾ, ದೇವದಾಸಿ, ಆದಿವಾಸಿ ಮತ್ತು ದಲಿತ ಹಕ್ಕುಗಳ ಸಮಿತಿಗಳು ಜಂಟಿಯಾಗಿ, ಪ್ರಮುಖ ಆರು – ಸಾಲ ಮನ್ನಾ, ಬೆಂಬಲ ಬೆಲೆ ಖಾತರಿ, ಬೆಳೆ ವಿಮೆ, ಪೆನ್ಷನ್ ಹಾಗೂ ನಿವೇಶನವೂ ಸೇರಿದಂತೆ ಭೂಮಿಯ ಬಗೆಗಿನ – ಹಕ್ಕೊತ್ತಾಯಗಳಿಗಾಗಿ, ಆಗಸ್ಟ್ 09, 2018 ರಂದು ಚಲೇಜಾವ್ ಚಳುವಳಿ ನಡೆಸಲಿವೆ. ಆ ದಿನದಂದು, ಕೇಂದ್ರ ಸರಕಾರದ ವಿರುದ್ದ ದೇಶದಾದ್ಯಂತ ನಡೆಸಲಾಗುತ್ತಿರುವ ಚಳುವಳಿಯ ಭಾಗವಾಗಿ ರಾಜ್ಯದಲ್ಲಿ ಸಂಘಟಿಸುತ್ತಿರುವ ಜೈಲ್ ಭರೋ ಚಳುವಳಿಯನ್ನು, ಅತ್ಯಂತ ವ್ಯಾಪಕವಾಗಿ ಯಶಸ್ವಿಗೊಳಿಸಲು ರಾಜ್ಯ ಸಮಿತಿ ನಿರ್ಧರಿಸಿದೆ. ಜಿಲ್ಲಾ ಮತ್ತು ತಾಲೂಕಾ ಸಮಿತಿಗಳು ಮತ್ತು ಶಾಖೆಗಳು ಭಾಗಿಯಾಗಿ ಯಶಸ್ವಿಗೊಳಿಸಲು ಕ್ರಮವಹಿಸಬೇಕು ಎಂದು ಕರೆ ನೀಡಿದೆ.

ಅದೇ ರೀತಿ, ಕೇಂದ್ರ ಸರಕಾರದ ಜನವಿರೋಧಿ ನೀತಿಗಳನ್ನು ಪ್ರತಿರೋಧಿಸಿ, ರೈತ–ಕೂಲಿಕಾರ–ಕಾರ್ಮಿಕರ ಹಕ್ಕೊತ್ತಾಯಗಳಿಗಾಗಿ ಸೆಪ್ಟಂಬರ್ 05, 2018 ರಂದು ಪಾರ್ಲಿಮೆಂಟ್ ಚಲೋ ಸಂಘಟಿಸಲಾಗಿದೆ. ಈ ಚಳುವಳಿಯನ್ನು ಯಶಸ್ವಿಗೊಳಿಸಲು ಈಗಿನಿಂದಲೇ ತಯಾರಿ ನಡೆಸಲು ಅಗತ್ಯ ಕ್ರಮಗಳನ್ನು ಆರಂಭಿಸಬೇಕು.

ಈ ನಡುವೆ ಆಗಸ್ಟ್ 14, 2018 ರಂದು ಮುಖ್ಯವಾಗಿ ಸಿಐಟಿಯು ನೇತೃತ್ವದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಾಮೂಹಿಕ ಜಾಗರಣೆಯ ಅಹೋರಾತ್ರಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅದರ ಯಶಸ್ವಿಯಲ್ಲು ಪಕ್ಷದ ಘಟಕಗಳು ತೊಡಗಿಸಿಕೊಳ್ಳಬೇಕು ಎಂದು ರಾಜ್ಯ ಸಮಿತಿ ಕರೆ ನೀಡಿದೆ.

ಮಾರ್ಕ್ಸರವರ ಜನ್ಮ ದ್ವಿಶತಮಾನೋತ್ಸವ ಮತ್ತು ಬಂಡವಾಳ ಕೃತಿಯ 150 ವರ್ಷಆಚರಣೆ :

ಅ) ಪಕ್ಷದ 22ನೇ ಮಹಾಧಿವೇಶನ ಮಾರ್ಕ್ಸರವರ ಜನ್ಮ ದ್ವಿಶತಮಾನೋತ್ಸವ ಮತ್ತು ಬಂಡವಾಳ ಕೃತಿಯ 150 ವರ್ಷಾಚರಣೆಗಳನ್ನು ದೇಶದಾದ್ಯಂತ ಅತ್ಯಂತ ಸಮರ್ಪಕವಾಗಿ ವರ್ಷವಿಡೀ ಆಚರಿಸಿಲು ಪಕ್ಷದ ಘಟಕಗಳಿಗೆ ಕರೆ ನೀಡಿದೆ. ಇದನ್ನು ಎಲ್ಲಾ ಜಿಲ್ಲಾ/ತಾಲೂಕಾ ಸಮಿತಿಗಳು ಮತ್ತು ಶಾಖೆಗಳು ಆಚರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಆಚರಣೆಗಳ ವಿವಿಧ ಕಾರ್ಯಕ್ರಮಗಳು ಈ ಸ್ವರೂಪದಲ್ಲಿರಬಹುದು.

1. ಸಾರ್ವಜನಿಕ ಸ್ಥಳಗಳಲ್ಲಿ ಸಭೆಗಳು, ಮೆರವಣಿಗೆಗಳು, ಮತ್ತಿತರ ಚಟುವಟಿಕೆಗಳು
2. ಇಂದಿನ ಜಗತ್ತಿನಲ್ಲಿ ಮಾರ್ಕ್ಸ್‌ವಾದ–ಲೆನಿನ್‌ವಾದದ ಪ್ರಸ್ತುತತೆ ಬಗ್ಗೆ ವಿಚಾರ ಸಂಕಿರಣಗಳು
3. ಕಾರ್ಲ್ ಮಾರ್ಕ್ಸ್ ಅವರ ಜೀವನ ಮತ್ತು ಕೊಡುಗೆಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು
4. ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರ ಪ್ರಮುಖ ಕೃತಿಗಳನ್ನು ಭಾರತೀಯ ಭಾಷೆಗಳಲ್ಲಿ ಪ್ರಕಟಣೆ/ಮರು ಪ್ರಕಟಣೆ
5. ಅಧ್ಯಯನ ಕಾರ್ಯಕ್ರಮದ ಭಾಗವಾಗಿ ಆ ಮೇಲಿನ ಪ್ರಮುಖ ಮಾರ್ಕ್ಸ್‌ವಾದಿಗಳ ಪ್ರಮುಖ ಕೃತಿಗಳನ್ನು ಭಾರತೀಯ ಭಾಷೆಗಳಲ್ಲಿ ಪ್ರಕಟಣೆ/ಮರು ಪ್ರಕಟಣೆ
6. ಮಾರ್ಕ್ಸ್‌ವಾದ–ಲೆನಿನ್‌ವಾದದ ತಪ್ಪು ನಿರೂಪಣೆಯನ್ನು ಬಯಲುಗೊಳಿಸುವ ಕೃತಿಗಳ ಪ್ರಕಟಣೆ/ಮರು ಪ್ರಕಟಣೆ
7. ಮಾರ್ಕ್ಸ್‌ವಾದ–ಲೆನಿನ್‌ವಾದದ ಪ್ರಮುಖ ವಾಗ್ವಾದಗಳ ಸಂಪಾದಿತ ಕೃತಿಗಳ ಪ್ರಕಟಣೆ
8. ಮಾರ್ಕ್ಸ್ ನಂತರದ ಕ್ರಾಂತಿಕಾರಿಗಳು ಮತ್ತು ಚಿಂತಕರು ಬೆಳೆಸಿದ ಮಾರ್ಕ್ಸ್‌ವಾದಿ ಚಿಂತನೆಯ ಶ್ರೀಮಂತ ಪರಂಪರೆಯನ್ನು ಜನತೆಗೆ, ಅದರಲ್ಲೂ ಯುವಜನತೆಗೆ ಪರಿಚಯ ಮಾಡುವುದು.

ಆ) ರಾಜ್ಯ ಸಮಿತಿಯ ಮುತುವರ್ಜಿಯಲ್ಲಿ ಅದಾಗಲೇ ಕ್ರಿಯಾ ಹಾಗೂ ನವಕರ್ನಾಟಕ ಪ್ರಕಾಶನದ ಜಂಟಿ ಸಹಯೋಗದಲ್ಲಿ ಈ ಆಚರಣೆಯನ್ನು ಕೈಗೊಂಡಿರುವುದು ತಮಗೆ ತಿಳಿದಿದೆ. ಮತ್ತು ಇದರ ಆಂಗವಾಗಿಯೇ ಮಾರ್ಕ್ಸರವರೇ ಬರೆದ ಬಂಡವಾಳವೂ ಸೇರಿದಂತೆ ಏಳು ಪುಸ್ತಕಗಳನ್ನು ಕನ್ನಡದಲ್ಲಿ ತರಲು ಕ್ರಮವಹಿಸಿದ್ದು ಈಗಾಗಲೇ ತಿಳಿದ ವಿಚಾರವಾಗಿದೆ. ಸದರಿ ಪುಸ್ತಕಗಳನ್ನು ಪ್ರಕಟಣಾ ಪೂರ್ವ ಬೆಲೆಗಳಲ್ಲಿ ಮಾರಾಟ ಮಾಡಲು ಉದ್ದೇಶಿಸಿ ಈಗಾಗಲೇ ಕೂಪನ್‌ಗಳನ್ನು ಮುದ್ರಿಸಿ ಕೊಡಲಾಗಿದೆ. ಆದರೇ ಅದರ ಸಂಗ್ರಹ ವೇಗವನ್ನು ಪಡೆದಿಲ್ಲ ಮಾತ್ರವಲ್ಲಾ, ಅಷ್ಟೇನು ಆಶಾದಾಯಕವಾಗಿಲ್ಲ. ಪಕ್ಷದ ಎಲ್ಲ ಘಟಕಗಳು ತಕ್ಷಣವೇ ಪ್ರಕಟಣಾ ಪೂರ್ವ ಬೆಲೆಯ ಕೂಪನ್ನುಗಳನ್ನು ವಿಶೇಷ ಯೋಜನೆಗಳ ಮೂಲಕ ವ್ಯಾಪಕವಾಗಿ ಮಾರಾಟ ಮಾಡಲು ಕ್ರಮವಹಿಸಬೇಕು. ಇದೀಗ ಈ ಕೂಪನ್ಗಳ ಮೂಲಕ ಪುಸ್ತಕ ಮಾರಾಟದ ಸಮಯವನ್ನು ಸೆಪ್ಟಂಬರ್ 14 ರವರೆಗೆ ವಿಸ್ತರಿಸಲಾಗಿದೆ. ಇದರ ಪ್ರಯೋಜನವನ್ನು ಪಡೆಯಬೇಕು.

ಇ) ಅದೇ ರೀತಿ, ಈಗಾಗಲೇ ಎರಡು ಪುಸ್ತಕಗಳನ್ನು ಮುದ್ರಿಸಿ ಬಿಡುಗಡೆ ಮಾಡಲಾಗಿದೆ. ಈ ಲೋಕಾರ್ಪಣೆಯ ಕಾರ್ಯಕ್ರಮವನ್ನು 20.05.2018ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಈ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳುವಂತೆ ಕ್ರಮವಹಿಸಬೇಕು.

ರಾಜ್ಯ ಮಟ್ಟದ ಪಕ್ಷದ ಶಾಲೆ :
ಆಗಸ್ಟ್ 3ನೇ ವಾರ, ಕೊಪ್ಪಳ

ಪಕ್ಷದ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಸುಮಾರು 200 ಸಂಗಾತಿಗಳಿಗೆ ಆಗಸ್ಟ್ 3ನೇ ವಾರದಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಐದು ದಿನಗಳ ಕಾಲ ಸಂಘಟಿಸಲು ನಿರ್ಧರಿಸಿದೆ.

ಮಹಾಧಿವೇಶನದ ವರದಿ :

ತಕ್ಷಣವೇ, ಎಲ್ಲಾ ಜಿಲ್ಲಾ ಸಮಿತಿಗಳು ಇದೇ ತಿಂಗಳ ಕೊನೆಯೊಳಗಾಗಿ, ಸರ್ವ ಸದಸ್ಯರ ಸಭೆಗಳನ್ನು ನಡೆಸಿ ಪಕ್ಷದ 22ನೇ ಅಖಿಲ ಭಾರತ ಮಹಾಧಿವೇಶನದ ವರದಿಯನ್ನು ವಿವರಿಸಲು ಕ್ರಮವಹಿಸಬೇಕು.

ಸಾಮಾಜಿಕ ಜಾಲತಾಣದಲ್ಲಿ ಪಕ್ಷ ವಿರೋಧಿ ಚಟುವಟಿಕೆ:

ಸಾಮಾಜಿಕ ಜಾಲ ತಾಣ ಮುಖ್ಯವಾಗಿ ಫೇಸ್‌ಬುಕ್‌ನಲ್ಲಿ ಪಕ್ಷ ಹಾಗೂ ನಾಯಕತ್ವದ ವಿರುದ್ದ ಕಾಮೆಂಟ್‌ಗಳನ್ನು ಹಾಕುವುದು ಮತ್ತು ಅವುಗಳನ್ನು ಲೈಕ್ ಮಾಡುವುದು, ಶೇರ್ ಮಾಡುವುದು ಮತ್ತು ಅವುಗಳ ಮೇಲೆ ಮರಳಿ ಕಾಮೆಂಟ್ ಬರೆಯುವುದು ಕಂಡು ಬರುತ್ತಿದೆ. ಇದು ಪಕ್ಷದ ಘನತೆಗೆ ಕುಂದುಂಟು ಮಾಡುವ ಕೆಲಸವಾಗಿದೆ. ಇದರಲ್ಲಿ ಪಕ್ಷದ ಸದಸ್ಯರು ಭಾಗಿಯಾಗುತ್ತಿರುವುದು ಕಂಡು ಬಂದಿದ್ದು ಅದನ್ನು ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಅಂತಹ ಸಂಗಾತಿಗಳ ಮೇಲೆ ಅಗತ್ಯ ಶಿಸ್ತು ಕ್ರಮಗಳನ್ನು ವಹಿಸಲು ರಾಜ್ಯ ಸಮಿತಿ ನಿರ್ಧರಿಸಿದೆ.

ಏರಿಕೆಯಾದ ವೇತನ ನೀಡಲು ಒತ್ತಾಯಿಸಿ ಕರಾವಳಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ

ಸಿಐಟಿಯು ನೇತೃತ್ವದ ಬೀಡಿ ಕಾರ್ಮಿಕರ ಕರ್ನಾಟಕ ರಾಜ್ಯ ಸಂಘಟನೆಗಳ 2017–18ರ ಸಾಲಿನಲ್ಲಿ ನಡೆಸಿದ ಹೋರಾಟಗಳ ಪರಿಣಾಮವಾಗಿ, ಕರ್ನಾಟಕ ರಾಜ್ಯ ಸರಕಾರವು ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ.210 ಕನಿಷ್ಟ ಕೂಲಿ ಮತ್ತು ಪ್ರತಿ ಪಾಯಿಂಟಿಗೆ 4 ಪೈಸೆಯಂತೆ ರೂ.10.52 ತುಟ್ಟಿಭತ್ತೆಯನ್ನು ಏರಿಕೆ ಮಾಡಿದೆ. ಈ ಏರಿಕೆ ವೇತನವನ್ನು ಬೀಡಿ ಮಾಲಕರು 2018 ಎಪ್ರಿಲ್ 1 ರಿಂದ ನೀಡಬೇಕಾಗಿತ್ತು. ಆದರೆ ಈವರೆಗೂ ಬೀಡಿ ಮಾಲಕರು ಏರಿಕೆಯಾದ ವೇತನ ಮತ್ತು ತುಟ್ಟಿಭತ್ತೆಯನ್ನು ಬೀಡಿ ಕಾರ್ಮಿಕರಿಗೆ ನೀಡಿಲ್ಲ. ಮಾತ್ರವಲ್ಲದೆ 2015 ರಿಂದ ಏರಿಕೆಯಾದ ತುಟ್ಟಿಭತ್ತೆಯನ್ನು ಕೂಡಾ ನೀಡಿಲ್ಲ.

ಏರಿಕೆಯಾದ ವೇತನ ಮತ್ತು ತುಟ್ಟಿಭತ್ತೆಯನ್ನು ವಿಳಂಬವಿಲ್ಲದೆ ನೀಡಬೇಕೆಂದು ಒತ್ತಾಯಿಸುವ ಪ್ರತಿಭಟನಾ ಪ್ರದರ್ಶನಗಳನ್ನು ಪ್ರಮುಖ ಬೀಡಿ ಮಾಲಕ ಸಂಸ್ಥೆಗಳ ಕಚೇರಿ ಎದುರು ನಡೆಸಬೇಕೆಂದು ಮಂಗಳೂರಿನಲ್ಲಿ ಸೇರಿದ್ದ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಕರೆ ಕೊಟ್ಟಿತ್ತು. ಈ ಪ್ರಕಾರ ಜೂನ್ 1 ಮತ್ತು 2 ರಂದು ದ.ಕ. ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ಪಟ್ಟಣಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಯಿತು.

ಮಂಗಳೂರು

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್(ಸಿಐಟಿಯು) ವತಿಯಿಂದ ಜೂನ್ 1 ರಂದು ಮಂಗಳೂರಿನಲ್ಲಿ ಕದ್ರಿಯಲ್ಲಿರುವ ಭಾರತ್ ಬೀಡಿ ವರ್ಕ್ಸ್ ಪ್ರೈ.ಲಿ., ಇದರ ಕಚೇರಿ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸುಮಾರು 700 ಜನರು ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಮಂಗಳೂರು ಜ್ಯೋತಿ ಅಂಬೇಡ್ಕರ್ ವೃತ್ತದಿಂದ ಕದ್ರಿ ಭಾರತ್ ಬೀಡಿ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಪ್ರತಿಭಟನಾ ಪ್ರದರ್ಶಣವನ್ನು ಉದ್ದೇಶಿಸಿ ಜಿಲ್ಲಾ ಫೆಡರೇಶನ್ ಅಧ್ಯಕ್ಷರಾದ ವಸಂತ ಆಚಾರಿ, ಉಪಾಧ್ಯಕ್ಷರಾದ ಯು.ಬಿ.ಲೋಕಯ್ಯ, ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪ್ರತಿಭಟನಾ ಪ್ರದರ್ಶನದಲ್ಲಿ ಸಂಘಟನೆಯ ಮುಖಂಡರಾದ ಪದ್ಮಾವತಿ ಶೆಟ್ಟಿ, ಬಾಬು ದೇವಾಡಿಗ, ಯು. ಜಯಂತ ನಾಯ್ಕ್, ಸದಾಶಿವ ದಾಸ್, ಕೃಷ್ಣಪ್ಪ ಸಾಲ್ಯಾನ್, ಜಯಂತಿ ಶೆಟ್ಟಿ, ಗಂಗಯ್ಯ ಅಮೀನ್, ವಸಂತಿ ಕುಪ್ಪೆಪದವು, ನೋಣಯ್ಯ ಗೌಡ, ಬಾಬು ಪಿಲಾರ್, ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಭಾಗವಹಿಸಿದ್ದರು. ಪ್ರದರ್ಶನದ ಬಳಿಕ ಸಹಾಯಕ ಕಾರ್ಮಿಕ ಆಯುಕ್ತರನ್ನು ಭೇಟಿಯಾಗಿ ಮಾಲಕರು ಕನಿಷ್ಟ ಕೂಲಿ ಮತ್ತು ತುಟ್ಟಿಭತ್ತೆಯನ್ನು ಜಾರಿಗೊಳಿಸಲು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸುವ ಮನವಿ ಸಲ್ಲಿಸಲಾಯಿತು.

ಉಡುಪಿ

ಜೂನ್ 2 ರಂದು ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ, ಅಲ್ಲಿನ ಭಾರತ್ ಬೀಡಿ ವರ್ಕ್ಸ್ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಜಿಲ್ಲಾ ಫೆಡರೇಶನ್ ಅಧ್ಯಕ್ಷ ಮಹಾಬಲ ವಡೇರಹೋಬಳಿ ಮಾತನಾಡಿದರು. ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಉಮೇಶ್ ಕುಂದರ್, ಕೋಶಾಧಿಕಾರಿ ಕೆ.ಲಕ್ಷ್ಮಣ, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಕಾರ್ಮಿಕ ಮುಖಂಡರಾದ ಕವಿರಾಜ್, ಸುಜಾತ ಶೆಟ್ಟಿ, ಸುಗಂಧಿ, ನಳಿನಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಸಿಟಿಬಸ್ ನಿಲ್ದಾಣದಿಂದ ಭಾರತ್ ಬೀಡಿ ಡಿಪೋ ವರೆಗೆ ಮೆರವಣಿಗೆ ನಡೆಸಲಾಯಿತು.

ಬೆಳ್ತಂಗಡಿ

ಬೆಳ್ತಂಗಡಿಯಲ್ಲಿ ಜೂನ್ 2ರಂದು ಅಲ್ಲಿನ ಮಿನಿ ವಿಧಾನಸೌಧದ ಎದುರು ವೇಣೂರು ವಲಯ ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಉಪಾಧ್ಯಕ್ಷ ವಸಂತ ಆಚಾರಿ, ಸಿಐಟಿಯು ಬೆಳ್ತಂಗಡಿ ತಾಲೂಕು ಅಧ್ಯಕ್ಷ ಎಸ್.ಎಂ.ಶಿವಕುಮಾರ್, ಕಾರ್ಯದರ್ಶಿ ವಸಂತ ನಡ ಮಾತನಾಡಿದರು. ವೇಣೂರು ವಲಯ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ರೋಹಿಣಿ ಪೆರಾಡಿ, ಕೋಶಾಧಿಕಾರಿ ಜಯಂತಿ ನೆಲ್ಲಿಂಗೇರಿ, ಕಾರ್ಮಿಕ ಮುಖಂಡರಾದ ಪದ್ಮನಾಭ ಗರ್ಡಾಡಿ, ಶೇಖರ ಎಲ್, ಸುಕನ್ಯಾ ಎಚ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬಳಿಕ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೂಡಬಿದರಿ

ಮೂಡಬಿದರಿಯಲ್ಲಿ ಜೂನ್ 2 ರಂದು ಮೂಡಬಿದರೆ ವಲಯ ಬಿಡಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಅಲ್ಲಿನ ಸೌತ್ ಕೆನರಾ ಹೋಂ ಇಂಡಸ್ಟ್ರೀಸ್ ಎದುರು ಬೀಡಿ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷೆ ರಮಣಿ ಮೂಡಬಿದರೆ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ರಾಧಾ, ಮುಖಂಡರಾದ ಗಿರಿಜಾ, ಲಕ್ಷ್ಮಿ, ಬೇಬಿ, ದ.ಕ. ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನಿನ ಉಪಾಧ್ಯಕ್ಷ ಸದಾಶಿವ ದಾಸ್, ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಕಟ್ಟಡ ಕಾರ್ಮಿಕ ಸಂಘದ ಶಂಕರ್ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಜಾಥಾ ನಡೆಸಲಾಯಿತು.

ಪುತ್ತೂರು

ಪುತ್ತೂರಿನ ಬೀಡಿ ಕಾರ್ಮಿಕರು ಪುತ್ತೂರು ತಾಲೂಕು ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ಜೂನ್ 2ರಂದು ಪುತ್ತೂರಿನ ಮಂಜಲ್ಪಡ್ಪು ಎಂಬಲ್ಲಿರುವ ಸೌತ್ ಕೆನರಾ ಹೋಂ ಇಂಡಸ್ಟ್ರೀಸ್ ಎದುರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ದ.ಕ.ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ (ಸಿಐಟಿಯು)ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಪುತ್ತೂರು ಸಂಘದ ಕಾರ್ಯದರ್ಶಿ ಎ.ರಾಮಣ್ಣ ವಿಟ್ಲ ಮಾತನಾಡಿದರು. ಪುತ್ತೂರು ತಾಲೂಕು ಸಂಘದ ಅಧ್ಯಕ್ಷ ಕೆ.ಪಿ.ಸತೀಶನ್, ಸುಳ್ಯ ತಾಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕೆ.ಪಿ.ರಾಬರ್ಟ್ ಡಿಸೋಜ, ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನಿನ ಬಿ.ಜಯಂತಿ ಶೆಟ್ಟಿ, ಪುತ್ತೂರು ಸಂಘದ ಪ್ರಮುಖರಾದ ದಾಮೋದರ, ಲಿಯಾಕತ್ ಖಾನ್, ಶೋಭಾ, ಪ್ರೇಮಾ, ನಯನಾ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

– ವಾಸುದೇವ ಉಚ್ಚಿಲ

ಜನ ಪ್ರತಿನಿಧಿಗಳ ಒತ್ತಡ ತಂತ್ರ ಖಂಡನಾರ್ಹ

ಹಿರಿಯಡ್ಕದಲ್ಲಿ ದನದ ವ್ಯಾಪಾರಿ ಹುಸೇನಬ್ಬ ಕೊಲೆ ಪ್ರಕರಣದಲ್ಲಿ ಸಂಸತ್ ಸದಸ್ಯೆ ಶೋಭಾ ಕರಂದ್ಲಾಜೆ ಮತ್ತು ಹೊಸತಾಗಿ ಆಯ್ಕೆಯಾದ ಉಡುಪಿ ಜಿಲ್ಲಾ ಕೆಲವು ಶಾಸಕರು ಎಸ್.ಪಿ.ಯವರನ್ನು ಭೇಟಿಯಾಗಿ ಬಂಧಿತ ಬಜರಂಗದಳದ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕೆಂದು ಒತ್ತಡ ಹೇರುತ್ತಿರುವುದು ಖಂಡನಾರ್ಹ ಎಂದು ಸಿಪಿಐ (ಎಂ) ಉಡುಪಿ ಜಿಲ್ಲಾ ಸಮಿತಿ ಆರೋಪಿಸಿದೆ.



ಕೊಲೆ ಪ್ರಕರಣದಲ್ಲಿ ತನಿಖೆಯ ನಂತರ ತನ್ನ ಇಲಾಖೆಯ ಅಧಿಕಾರಿಗಳನ್ನೇ ಮೊದಲು ಅಮಾನತು ಮಾಡಿ ನಂತರ ಬಂಧಿಸಿದ ಪೊಲೀಸ್ ಅಧಿಕಾರಿಗೆ 'ಬಜರಂಗದಳದ ಕಾರ್ಯಕರ್ತರನ್ನು ಬಿಡುಗಡೆ ಮಾಡಲು' ಹೇಳುವ ಯಾವ ನೈತಿಕ ಹಕ್ಕು ಸಂಸದರಿಗೆ ಇದೆ? ಸಮಾಜ ವಿರೋದಿ ಶಕ್ತಿಗಳು ಇಲಾಖೆಯ ಕೆಲವು ದುಷ್ಟ ಶಕ್ತಿಗಳೊಂದಿಗೆ ಸೇರಿ ಜನ ಸಾಮಾನ್ಯರಿಗೆ ನ್ಯಾಯ ವಂಚಿಸುತ್ತಿರುವುದು ಜನರ ಗಮನದಲ್ಲಿದೆ.

ವರ್ಷದ ಹಿಂದೆ ನಡೆದ 'ಕುಟುಕು ಕಾರ್ಯಾಚರಣೆಯಲ್ಲಿ' ಪೊಲೀಸ್ ಇಲಾಖೆಯಲ್ಲಿ 'ನಮ್ಮವರು' ಇದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಈಗಿನ ಅಭ್ಯರ್ಥಿ ಗಣೇಶ್ ಕಾರ್ಣಿಕ್ ರವರು ಹೇಳಿದ್ದು ಈಗ ಬಯಲಾಗಿದೆ. ಇಂತಹ ಶಕ್ತಿಗಳನ್ನು ನಿರ್ದಯವಾಗಿ ಮಟ್ಟ ಹಾಕಬೇಕು.

ಹಲವಾರು ಇತಿಮಿತಿಗಳ ನಡುವೆಯೂ ರಾಜ್ಯದಲ್ಲಿ ಜಾತ್ಯಾತೀತ ಮೈತ್ರಿ ಸರಕಾರ ಅಧಿಕಾರಕ್ಕೆ ಬಂದಿರುವುದರಿಂದ ಜನರು ನಿಟ್ಟುಸಿರು ಬಿಡುವಂತಾಗಿದೆ. ಒಂದು ವೇಳೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿದ್ದರೆ ಹಿರಿಯಡ್ಕ ಘಟನೆ ಏನಾಗಬಹುದಿತ್ತು ಎಂದು ಊಹಿಸುವುದು ಕಷ್ಟ. ಪೋಲೀಸ್ ವರಿಷ್ಠಾಧಿಕಾರಿಯವರ ಪ್ರಾಮಾಣಿಕ ಕರ್ತವ್ಯವನ್ನು ಸಾರ್ವಜನಿಕರು ಶ್ಲಾಘಿಸುತ್ತಿದ್ದಾರೆ. ಆದರೆ ಸಂಸತ್ ಸದಸ್ಯೆ ಮತ್ತು ಶಾಸಕರು ಅವರ ಮೇಲೆ ಒತ್ತಡ ಹೇರುತ್ತಿರುವುದು ಸರಿಯಲ್ಲ. ಇದನ್ನು ನ್ಯಾಯದ ಮೇಲೆ ನಂಬಿಕೆ ಇರುವ ಎಲ್ಲಾ ಶಕ್ತಿಗಳು ವಿರೋದಿಸಬೇಕಾಗಿದೆ.

ಜನರ ಸಮಸ್ಯೆಗಳ ಪರಿಹಾರಕ್ಕೆ ಗಮನ ನೀಡಬೇಕಾದ ಜನ ಪ್ರತಿನಿಧಿಗಳು ದುಷ್ಟ ಶಕ್ತಿಗಳಿಗೆ ಬೆಂಬಲ ನೋಡುತ್ತಿರುವುದು ಪ್ರಜಾಪ್ರಭುತ್ವದ ವಿಪರ್ಯಾಸ ಎಂದು ಸಿಪಿಐ (ಎಂ) ಬಣ್ಣಿಸಿದೆ.

–ಬಾಲಕೃಷ್ಣ ಶೆಟ್ಟಿ,
ಕಾರ್ಯದರ್ಶಿ, ಉಡುಪಿ ಸಿಪಿಐ(ಎಂ) ಜಿಲ್ಲಾ ಸಮಿತಿ

ಅಭಿನಂದನೆಗಳು ಲಕ್ಷ್ಮಣ ನಿಂಬರಗಿಯವರಿಗೆ

ಲಕ್ಷ್ಮಣ ನಿಂಬರಗಿಯವರಿಗೆ ಅಭಿನಂದನೆಗಳು ಈ ಪ್ರಕರಣದ ಮತ್ತಷ್ಟು ಆಳವಾದ ತನಿಖೆಗೆ ರಾಜ್ಯ ಸರಕಾರ ನಿಂಬರಗಿಯವರಿಗೆ ಅವಕಾಶ ಮಾಡಿಕೊಡಲಿ. ಹಿರಿಯಡ್ಕ ಪೊಲೀಸ್ ಠಾಣೆಯ ಮೇಲೆ ಬಿಜೆಪಿ ಪರಿವಾರ ಪೂರ್ಣ ಹಿಡಿತ ಸಾಧಿಸಿದೆ. ಈ ಹಿಂದೊಮ್ಮೆ ತಮ್ಮ ಮಾತುಕೇಳದ ಪೊಲೀಸರಿಗೆ "ಬುದ್ದಿ ಕಲಿಸಲು" ಠಾಣೆಯನ್ನು ಪರಿವಾರ ಕಾರ್ಯಕರ್ತರು ಧ್ವಂಸಗೊಳಿಸಿದ್ದರು. ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಹುಸೈನಬ್ಬ ಕೊಲೆ ಪ್ರಕರಣವನ್ನು ಮುಚ್ಚಿಹಾಕಲು, ತಮ್ಮವರನ್ನು ರಕ್ಷಿಸಲು ಉಡುಪಿಯ ಶಾಸಕ ರಘುಪತಿ ಭಟ್, ಕಾರ್ಕಳ ಶಾಸಕ ಸುನಿಲದ ಕುಮಾರ್ ತಮ್ಮ ಪೂರ್ಣ ಪ್ರಭಾವ ಬಳಸಿದ್ದರು. ಕೊಲೆ ಪ್ರಕರಣವನ್ನು ಮುಚ್ಚಿ ಹಾಕುವುದು, ಕೊಲೆಗಾರರನ್ನು ಬಚಾವ್ ಮಾಡಲು ಯತ್ನಿಸುವುದು ಕೊಲೆಪ್ರಕರರಣದಲ್ಲಿ ಭಾಗಿಯಾದಷ್ಟೆ ಗಂಭೀರ ಅಪರಾಧ. ಈ ಹಿನ್ನಲೆಯಲ್ಲಿ ರಘುಪತಿ ಭಟ್, ಸುನಿಲ್ ಕುಮಾರ್ ರನ್ನೂ ಪ್ರಕರಣದ ಆರೋಪಿಗಳನ್ನಾಗಿಸಿ ತನಿಖೆ ನಡೆಸಬೇಕು. ಕರಾವಳಿಯನ್ನು ಮತೀಯಶಕ್ತಿಗಳಿಂದ ಬಿಡುಗಡೆಗಳಿಸಲು, ಕಾನೂನಿನ ಆಡಳಿತ ಜಾರಿಗೊಳಿಸಲು, ಪರ್ಯಾಯ ಸರಕಾರಗಳ ಹುಟ್ಟಡಗಿಸಲು ಮುಖ್ಯಮಂತ್ರಿ ಕುಮಾರ ಸ್ವಾಮಿ ಈ ಪ್ರಕರಣದ ಮೂಲಕ ದಿಟ್ಟಕ್ರಮಗಳನ್ನು ಕೈಗೊಳ್ಳಬೇಕು.

– ಸಿಪಿಐ(ಎಂ) ಮಂಗಳೂರು

ಆರೆಸ್ಸೆಸ್ ಕೇಂದ್ರದಲ್ಲಿ ಪ್ರಸಿದ್ಧ ಕಾಂಗ್ರೆಸ್ಸಿಗ

ಆರೆಸ್ಸೆಸ್, ಪ್ರಣಬ್ ಮುಖರ್ಜಿಯವರಿಗೆ ಆಹ್ವಾನ ನೀಡಿದ್ದು, ಅವರು ಏನು ಮಾತಾಡುವರು ಎಂದು ಮಾತ್ರವಲ್ಲ ಏನು ಮಾತಾನಾಡುವುದಿಲ್ಲವೆಂದು ಚೆನ್ನಾಗಿ ಗೊತ್ತಿದ್ದೇ. ಮೋದಿ ಪ್ರಧಾನಿಯಾದ ಮೊದಲ ಎರಡು ವರ್ಷ ಅವರು ರಾಷ್ಟ್ರಪತಿಯಾಗಿ ಮೋದಿ ಅವರಿಗೆ ಕಳುಹಿಸಿದ ಎಲ್ಲ ದುಷ್ಟ ಸುಗ್ರೀವಾಜ್ಞೆ, ಮತ್ತಿತರ ಆಜ್ಞೆಗಳಿಗೂ ಚಕಾರವೆತ್ತದೆ ಸಹಿ ಹಾಕಿದ್ದವರಲ್ಲವೇ?

ರಾಷ್ಟ್ರಪತಿ ಭಾಷಣಗಳಲ್ಲಿ ಮೋದಿ ಯಾವುದೆಲ್ಲಾ ಇರಬಾರದೆಂದು ಕಟ್ಟಾಜ್ಞೆ ವಿಧಿಸಿದ್ದರೋ ಅವೆಲ್ಲಾ ಬಿಟ್ಟು ವಿಧೇಯ ರಾಷ್ಟ್ರಪತಿಯಾಗಿ ಭಾಷಣ ಮಾಡುತ್ತಿದ್ದವರಲ್ಲವೇ?

ಉಪ ಚುನಾವಣೆಗಳ ಸೋಲಿನ ನಂತರ ಆರೆಸ್ಸೆಸ್–ಬಿಜೆಪಿ ಕೂಟಕ್ಕೆ ತಮ್ಮ ಗೆಲುವಿನ ತಂತ್ರವನ್ನು ಬದಲಾಯಿಸಿ ತಾವು ಬಹು ಉದಾರವೆಂದು ತೋರಿಸಿಕೊಳ್ಳುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಪ್ರಣಬ್ ಎಂಬ ಮಾಜಿ ರಾಜಕಾರಣಿಗೆ ತಾನು ಇನ್ನೂ ಕ್ರಿಯಾಶೀಲ ರಾಜಕಾರಣದಲ್ಲಿರಬೇಕೆಂಬ ಆಸೆ ಪ್ರಬಲವಾಗಿದೆ. ಅವರೇನು ಕೆ.ಆರ್ ನಾರಾಯಣನ್ ರವರೇ ಗೌರವವಾಗಿ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ?

ಒಟ್ಟಿನಲ್ಲಿ ಇಬ್ಬರಿಗೂ win win situation.

ಅಲ್ಲಿ ಆರೆಸ್ಸೆಸ್‌ಗೆ ಬೇಕಾದ ಹೆಗ್ಡೆವಾರ್ ಹೇಳಿಕೆಯನ್ನು ಬರೆದರು. ಇನ್ನು ಶತಮಾನಗಳ ಕಾಲ ಆರೆಸ್ಸೆಸ್ ಅದನ್ನು ಉಲ್ಲೇಖಿಸುತ್ತಾ ಇರಬಹುದು. ಅದನ್ನು ಈಗಾಗಲೇ ಅವರ ಪೇಯ್ಡ್ ಚಾನೆಲ್‌ಗಳು ಬಹು ಉತ್ಸಾಹದಿಂದ ಕೋಟ್ ಮಾಡುತ್ತಿವೆ.

ಜೊತೆಗೆ ಆರೆಸ್ಸೆಸ್ ಬಯಸಿದಂತೆ ಗಾಂಧೀಜಿ ಕೊಲೆ, ಭಾರತದ ಚರಿತ್ರೆಯ ರಕ್ತ ಸಿಕ್ತ ಅಧ್ಯಾಯಗಳೊಂದನ್ನೂ ಸ್ವಾತಂತ್ರ್ಯ ಸಮಯದ ಕೋಮುದಂಗೆಗಳು, ನಂತರದ ಗುಜರಾತ್ ಹತ್ಯಾಕಾಂಡ, ಬಾಬರಿ ಮಸೀದಿ ನಾಶ, ಈಗಿನ ಕುಕೃತ್ಯಗಳು– ಗೋಮಾಂಸದ ಹತ್ಯೆಗಳು, ದಲಿತರ ಮೇಲಿನ ಧಾಳಿಗಳ ಹೆಚ್ಚಳ, ರೇಪ್‌ಗಳು , ಕನಿಷ್ಠ ಜಮ್ಮುವಿನ ಮುದ್ದು ಹುಡುಗಿಯ ರೇಪ್, ವಿವಿಗಳ ಮೇಲಿನ ದಾಳಿಗಳು, ಪ್ರಜಾಪ್ರಭುತ್ವಕ್ಕೆ ಒದಗಿರುವ ಸಂಕಟ ಇವ್ಯಾವುದರಲ್ಲಿಯೂ ತೊಡಗಬಾರದೆಂದು ಎದುರು ಕುಳಿತಿದ್ದ ಆರೆಸ್ಸೆಸ್ "ಪದವೀಧರ"ರಿಗೆ, ಅವರ ಮಾತನ್ನು ಟಿವಿಗಳ ಮೂಲಕ ಕೇಳುತ್ತಿದ್ದ ಭಜರಂಗಿ ಮೊದಲಾದ ಸಂಘೀ ಗೂಂಡಾಗಳಿಗೆ ಉಪದೇಶ ಮಾಡಲಿಲ್ಲ.

ಬದಲಾಗಿ ನೂರು ವರ್ಷಗಳ ಹಿಂದೆ ಅಥವಾ ನೂರು ವರ್ಷಗಳ ನಂತರವೂ ಮಾಡಬಹುದಾದ ಮಡಿಮಾಡಿದ ಭಾಷಣವನ್ನು ಮಾಡಿದರು.

ಇದರಿಂದಾಗಿ ಆರೆಸ್ಸೆಸ್–ಬಿಜೆಪಿ ಪೇಯ್ಡ್ ಟಿವಿ ಚಾನೆಲ್‌ಗಳು ಮತ್ತು ಉದಾರವಾದಿ ಎನಿಸಿಕೊಂಡ ಚಾನೆಲ್‌ಗಳು ಎರಡೂ ಕೊಂಡಾಡುತ್ತಿವೆ. ಆರೆಸ್ಸೆಸ್‌ಗೆ ಅತ್ಯವಶ್ಯವಾದ acceptability ಸಿಗಲು ಒಂದಿಷ್ಟು ಸಹಾಯ ಮತ್ತು ಪ್ರಣಬ್‌ಗೆ ರಾಜನೀತಿಜ್ಞ ಬಿರುದೂ ಪ್ರಾಪ್ತವಾಗುತ್ತದೆ.

ಒಟ್ಟಿನಲ್ಲಿ ಇಬ್ಬರೂ ಬಯಸಿದ್ದಂತೂ ಆಯಿತು.

– ಜಿ.ಎನ್. ನಾಗರಾಜ್

ಮೈತ್ರಿಕೂಟ ಸರಕಾರಕ್ಕೆ ಸ್ವಾಗತ, ಆದರೆ ಭ್ರಮೆಗಳು ಬೇಡ.......

ಪುಟ 3 ರಿಂದ

ಪಕ್ಷಗಳು "ಅಭಿವೃದ್ಧಿಯ ರಾಜಕಾರಣವನ್ನು ಗೌಣಗೊಳಿಸಿ, ಜಾತಿ ಮತ್ತು ಧರ್ಮದ ಹಾಗೂ ಹಣ ಬಲದ ರಾಜಕಾರಣದ ಮೂಲಕ ಕಾರ್ಯ ನಿರ್ವಹಿಸಿದರೆ, ಇದಕ್ಕೆ ವ್ಯತಿರಿಕ್ತವಾಗಿ ಸಿಪಿಐ(ಎಂ) ಪಕ್ಷ ಜನಬಲವನ್ನು ನೆಚ್ಚಿ ನೈಜ ಅಭಿವೃದ್ಧಿಯ ರಾಜಕಾರಣದ ಮೂಲಕ ಕಾರ್ಯ ನಿರ್ವಹಿಸುತ್ತದೆ."

* "ಈ ಭೂಮಾಲಕ ಬಂಡವಾಳಶಾಹಿ ವೈರಿ ನಾಯಕತ್ವವನ್ನು ಬೂತ್ ಮಟ್ಟದಲ್ಲಿ ಎದುರಿಸಿ ಜನಬಲವನ್ನು ಮುನ್ನಡೆಸುವ.. ಶಕ್ತಿ ನಮಗೆಲ್ಲಿದೆಯೋ ಅಲ್ಲಿ ಸ್ವಲ್ಪ ಹೆಚ್ಚಿನ ಮತಗಳನ್ನು ಪಡೆಯಲು ಸಾಧ್ಯವಾಗಿದೆ."
* "ಈ ಅವಧಿಯಲ್ಲಿ ಸ್ವತಂತ್ರ ಹಾಗೂ ಜಂಟಿಯಾಗಿ ನಾವು ನಡೆಸಿದ ಚಳುವಳಿಗಳು, ಕೋಮುವಾದ, ಜಾತಿದೌರ್ಜನ್ಯದ ಮತ್ತು ತಾರತಮ್ಯದ ವಿರುದ್ದದ ಪ್ರತಿಭಟನೆಗಳು ಮತದಾರರ ಮೇಲೆ ಪ್ರಭಾವವನ್ನು ಉಂಟು ಮಾಡಿದ್ದರೂ, ನಾವು ಸ್ಪರ್ಧಿಸಿದ ಹಲವೆಡೆ ಬಿಜೆಪಿಯನ್ನು ಸೋಲಿಸುವುದು ಮುಖ್ಯವೆಂದು ಭಾವಿಸಿದವರು, ನಮ್ಮ ಬಗ್ಗೆ ಅಭಿಪ್ರಾಯ ಹೊಂದಿದ್ದರೂ, ಬಿಜೆಪಿ ವಿರೋಧಿ ಕಾಂಗ್ರೆಸ್/ ಜೆಡಿಎಸ್ ಗಳಿಗೆ ಮತದಾನ ಮಾಡಿರುವುದು ಕಾರಣವಾಗಿದೆ."

ಪರ್ಯಾಯ ರಾಜಕೀಯದ ಪ್ರಯತ್ನಗಳು

ಪರ್ಯಾಯ ರಾಜಕೀಯದ ಬಗ್ಗೆ ನಡೆದ ಪ್ರಯತ್ನಗಳನ್ನು ವಿವರಿಸುತ್ತಾ ನಿರ್ಣಯ ಹೀಗೆಂದಿದೆ:

"ಎಡ ಪಕ್ಷಗಳು ಮತ್ತು ಸ್ವರಾಜ್ ಸೇರಿದಂತೆ ಸ್ಪರ್ಧಿಸುವ ಮತ್ತು ಜಂಟಿ ಪ್ರಚಾರ ನಡೆಸಿ ರಾಜ್ಯದ ಮತದಾರರ ಮುಂದೆ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಕೂಟವನ್ನು ಇಡುವ ನಮ್ಮ ಆಶಯ ಕೈಗೂಡಲಿಲ್ಲ. ಈ ಕಾರಣಗಳಿಂದ ನಮ್ಮ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸ ಬೇಕಾಗಿ ಬಂತು. ನಾವು ಸ್ಪರ್ಧಿಸಿದ ಕಲಬುರಗಿ ಗ್ರಾಮೀಣ ಕ್ಷೇತ್ರದಲ್ಲಿ ಎಸ್‌ಯುಸಿಐ(ಸಿ)ಸ್ಪರ್ಧಿಸಿತು ಮತ್ತು ಸಿಪಿಐ(ಎಂಎಲ್)ಲಿಬರೇಷನ್ ನಾವು ಸ್ಪರ್ಧಿಸಿದ ಎರಡು–ಮೂರು ಕಡೆ ಸ್ಪರ್ಧಿಸಿತು. ಹೀಗಾಗಿ, ಸಿಪಿಐ(ಎಂ) ಸ್ಪರ್ಧಿಸದ ಕಡೆ ಮತ್ತು ನಮ್ಮ ಪಕ್ಷದ ಘಟಕಗಳು ಇರುವೆಡೆ ಅಂತಿಮವಾಗಿ, ಬಿಜೆಪಿಯನ್ನು ಸೋಲಿಸುವ ಪಕ್ಷಕ್ಕೆ ಬೆಂಬಲ ನೀಡಲು ನಾವು ಕರೆ ನೀಡಬೇಕಾಯಿತು."

ಇಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಅಗತ್ಯವೇನಿತ್ತು?

ಪಕ್ಷದ ಒಳಗೂ ಹೊರಗೂ ಕೇಳಿಬಂದ ಇನ್ನೂ ಕೇಳಿಬರುತ್ತಿರುವ ಪ್ರಶ್ನೆಯನ್ನು ಉತ್ತರಿಸುತ್ತಾ ನಿರ್ಣಯ ಹೀಗೆಂದಿದೆ:


"ಕರ್ನಾಟಕದಲ್ಲಿ ಕಾಂಗ್ರೆಸ್ ಬಿಟ್ಟರೇ, ಬಿಜೆಪಿ ಮತ್ತು ಬಿಜೆಪಿ ಬಿಟ್ಟರೇ ಕಾಂಗ್ರೆಸ್ ಎಂಬ ವಾತಾವರಣದಲ್ಲಿ ಅವುಗಳ ಸುತ್ತಲೇ ಮತದಾರರು ಗಿರಿಕಿ ಹೊಡೆಯುವುದನ್ನು ತಪ್ಪಿಸಲು ಮತ್ತು ಸಣ್ಣದಾಗಿಯಾದರೂ ನಿಜವಾದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜನ ಪರ್ಯಾಯ ರಾಜಕೀಯ ಶಕ್ತಿಗಳನ್ನು ಮತದಾರರ ಮುಂದೆ ಇಡುವುದು ಈ ವಿಧಾನ ಸಭಾ ಚುನಾವಣೆಯಲ್ಲಿ ಅಗತ್ಯವಿತ್ತು ಮತ್ತು ನಮ್ಮ ಚಳುವಳಿಯ ಪ್ರಭಾವವನ್ನು ಕ್ರೋಢಿಕರಿಸುವ ಅವಶ್ಯಕತೆ ನಮ್ಮ ಮುಂದಿತ್ತು. ಅದು ಸರಿಯಾದ ಕ್ರಮವಾಗಿತ್ತು. ನಾವು ಈ ಚುನಾವಣೆಯ ಪ್ರಚಾರದಲ್ಲಿ ವ್ಯಾಪಕವಾಗಿ ತೊಡಗಿದುದು ನಮ್ಮ ಪಕ್ಷಕ್ಕೊಂದು ರಾಜಕೀಯ ಅಸ್ತಿತ್ವವನ್ನು ಮತದಾರರ ನಡುವೆ ತಂದುಕೊಡಲು ಈ ಸ್ಪರ್ಧೆ ಸಹಾಯ ಮಾಡಿದೆ." "ಸ್ಪರ್ಧಿಸಿದ ಎಲ್ಲೆಡೆಯೂ ಗೆಲ್ಲುತ್ತೇವೆ ಎಂಬ ಭ್ರಮೆ ರಾಜ್ಯ ಸಮಿತಿಗಾಗಲೀ ಅಥವಾ ಜಿಲ್ಲಾ/ತಾಲೂಕಾ ಸಮಿತಿಗಳಗಾಗಲೀ ಬಹುತೇಕ ಇರಲಿಲ್ಲ" ಎಂದೂ ನಿರ್ಣಯ ಸ್ಪಷ್ಟಪಡಿಸಿದೆ.

ಅನುಪಾತಿಕ ಪ್ರಾತಿನಿಧ್ಯ ಚುನಾವಣಾ ಪದ್ದತಿ

ಈ ಫಲಿತಾಂಶಗಳು ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆಗಳು ಯಾವುವು ಎಂದು ತೋರಿಸಿಕೊಟ್ಟಿವೆ ಎಂದು ವಿಶ್ಲೇಷಿಸುತ್ತಾ ನಿರ್ಣಯ ಹೀಗೆಂದಿದೆ "ಈ ಚುನಾವಣಾ ಫಲಿತಾಂಶವು ಬಹಳ ಸ್ಪಷ್ಟವಾಗಿ, ಮತದಾರರ ಒಟ್ಟು ತೀರ್ಪನ್ನು ಸಂಬಂಧಿಸಿದ ಸಂಸ್ಥೆಗಳಲ್ಲಿ ಪ್ರತಿನಿಧಿಸುತ್ತಿಲ್ಲವೆಂದು ಮತ್ತೊಮ್ಮೆ ತೋರಿಸಿದೆ.. .. ಅಭಿವೃದ್ಧಿ ರಾಜಕಾರಣವನ್ನು ನೇಪಥ್ಯಕ್ಕೆ ತಳ್ಳಿ ಜಾತಿ ಮತ್ತು ಮತಾಂಧ ರಾಜಕಾರಣ ಮಾಡುವುದು ಮತ್ತು ವ್ಯಾಪಕವಾದ ಹಣ ಮತ್ತಿತರೇ ಆಮಿಷಗಳನ್ನು ಮುಂದೆ ಮಾಡಿ ಮತದಾರರನ್ನು ಸೆಳೆಯುವುದು ಹೆಚ್ಚುತ್ತಿದೆ. ಈಗಿನ ವ್ಯವಸ್ಥೆಯ ಬಲಹೀನತೆಗಳನ್ನು ಜನತೆಗೆ ಹೇಳ ಬೇಕಾಗಿದೆ. ಹೀಗಾಗಿ ಅನುಪಾತಿಕ ಪ್ರಾತಿನಿದಿಕ ವ್ಯವಸ್ಥೆಯನ್ನು ಜನತೆಯ ನಡುವೆ ವಿವರಿಸಬೇಕಾಗಿದೆ. ಅದಕ್ಕಾಗಿ ಶ್ರಮಿಸಬೇಕಾಗಿದೆ."

ಪ್ರಸ್ತುತ ರಾಜಕೀಯ ಬೆಳವಣಿಗೆಗಳು :

ವಿಧಾನಸಭೆ ಚುನಾವಣಾ ಫಲಿತಾಂಶಗಳ ನಂತರದ ಕ್ಷಿಪ್ರಗತಿಯ ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಾ – ಬಿಜೆಪಿಗೆ ಆದ ಮುಖಭಂಗ, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರಕಾರ, ಮೈತ್ರಿ ಸರಕಾರವನ್ನು ಅಸ್ಥಿರಗೊಳಿಸಲು ಬಿಜೆಪಿಯ ಯತ್ನ, ಸಂಭವನೀಯ ಮೂರನೇ ರಂಗದ ಪರ್ಯಾಯದ ವೇದಿಕೆ ಇತ್ಯಾದಿಗಳನ್ನು ನಿರ್ಣಯ ವಿವರಿಸುತ್ತದೆ.



ಕೃಪೆ: ಸತೀಶ್ ಆಚಾರ್ಯ

ರೈತರ ಸಾಲ ಮನ್ನಾ ಪ್ರಶ್ನೆ ಮರಳಿ ಮುನ್ನೆಲೆಗೆ !

ರೈತರ ಸಾಲ ಮನ್ನಾ ಪ್ರಶ್ನೆ ಮರಳಿ ಮುನ್ನೆಲೆಗೆ ಬಂದ ಹಿನ್ನೆಲೆಯನ್ನು ವಿವರಿಸುತ್ತಾ, ಸಾಲ ಮನ್ನಾ ಕುರಿತು ಸಿಪಿಐ(ಎಂ) ನಿಲುಮೆಯನ್ನು ಪುನರುಚ್ಚರಿಸಿದೆ.

"ಸಿಪಿಐ(ಎಂ) ಪಕ್ಷ ರೈತರ ಎಲ್ಲ ರೀತಿಯ ಸಾಲ ಅಂದರೆ, ಸಹಕಾರ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಮಾತ್ರವಲ್ಲಾ ಖಾಸಗೀ ಸಾಲ ಮನ್ನಾ ಮಾಡುವುದನ್ನು ಸ್ವಾಗತಿಸುತ್ತದೆ. ಆದರೆ ಸಾಲ ಮನ್ನಾದ ಪ್ರಯೋಜನವು, ನಿಜವಾದ ಸಾಲಬಾಧಿತ ರೈತರು, ಗೇಣಿದಾರರು, ಕೂಲಿಕಾರರು, ಕಸುಬುದಾರರು, ಸ್ತ್ರೀಶಕ್ತಿ ಸಂಘಗಳ ಮಹಿಳೆಯರು, ಇವರಿಗೆ ಖಚಿತವಾಗಿ ದೊರೆಯುವಂತೆ ಮತ್ತು ರೈತರ/ಕೂಲಿಕಾರರ/ಕಸುಬುದಾರರ/ಮಹಿಳೆಯರ ಆತ್ಮಹತ್ಯೆಗಳು ನಿಲ್ಲುವಂತೆ, ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ (ಎಲ್.ಡಿ.ಎಫ್.) ಸರಕಾರದ ಕ್ರಮಗಳನ್ನು ಅನುಸರಿಸಬೇಕು. ಸಾಲ ಬಾಧಿತರ ಅಹವಾಲುಗಳ ಅರ್ಜಿಗಳನ್ನು ಸ್ವೀಕರಿಸಿ, ಋಣಮುಕ್ತ ಆಯೋಗದ ಮೂಲಕ ಅವುಗಳ ಪರಿಶೀಲಿನೆ ನಡೆಸಿ, ಸಾಲಬಾಧಿತರ ಆದಾಯವನ್ನು ಗಮನಿಸಿ, ಅದು ನಿರ್ಧರಿಸಿ ಸೂಚಿಸಿದಂತೆ, ಸಾಲ ಬಾಧಿತರಿಗೆ ನೆರವಾಗಿ ರಕ್ಷಿಸುವ, ಎಲ್.ಡಿ.ಎಫ್. ಮಾದರಿಯಲ್ಲಿ, ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಬೇಕೆಂದು ನಿರ್ಣಯ ಒತ್ತಾಯಿಸಿದೆ.

ಸಾಲ ಮನ್ನಾ ಮಾತ್ರವೇ ಗ್ರಾಮೀಣ ಬಿಕ್ಕಟ್ಟಿಗೆ ಪರಿಹಾರವಾಗಿಲ್ಲ! ರೈತರು ಮುಖ್ಯವಾಗಿ ಅವರು ಬೆಳೆದ ಬೆಳೆಗೆ ಲಾಭದಾಯಕವಾದ ಬೆಲೆಯನ್ನು ಕಡ್ಡಾಯವಾಗಿ ಪಡೆಯುವಂತಾಗಲೂ ಡಾ. ಎಂ.ಎಸ್. ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ, ಕೃಷಿ ಉತ್ಪನ್ನಗಳ ಅದರ ಒಟ್ಟು ಸಮಗ್ರ ಉತ್ಪಾದನಾ ವೆಚ್ಚಕ್ಕೆ ಅದರ ಶೇ.50 ರಷ್ಟು ಲಾಭಾಂಶ ಸೇರಿಸಿ, ನಿಗದಿಸಲಾಗುವ ಬೆಂಬಲ ಬೆಲೆಗಳು ಖಾತರಿಯಾಗಿ ದೊರೆಯುವಂತಾಗಲೂ, ಬೆಂಬಲ ಬೆಲೆ ಖಾತರಿ ಕಾಯ್ದೆಯು ಬರಬೇಕಾಗಿದೆ, ಎಂದಿದೆ ನಿರ್ಣಯ.

ಲೋಕಸಭಾ ಚುನಾವಣೆಗೆ ಕಾಂಗ್ರೆಸ್/ಜೆಡಿಎಸ್ ಮೈತ್ರಿ

ಈ ಬಗ್ಗೆ ಪ್ರಸ್ತಾಪ ಮಾಡಿದ ನಿರ್ಣಯ ಹೀಗೆಂದಿದೆ: "ತಡವಾಗಿಯಾದರೂ ಜೆಡಿಎಸ್/ಕಾಂಗ್ರೆಸ್ ನಡುವೆ ಅಧಿಕಾರ ಹಂಚಿಕೆ ಮತ್ತು ಮಂತ್ರಿಮಂಡಲ ರಚನೆಯ ಕಸರತ್ತು ಹೊರ ಬಿದ್ದಿದೆ. ಮುಖ್ಯಮಂತ್ರಿಗಳಾಗಿ ಶ್ರೀ. ಹೆಚ್.ಡಿ. ಕುಮಾರಸ್ವಾಮಿಯವರೇ 5 ವರ್ಷಗಳ ಕಾಲ ಮುಂದುವರೆಯಲಿದ್ದಾರೆ, ಕಾಂಗ್ರೆಸ್/ಜೆಡಿಎಸ್ ಸರಕಾರದ ಸಮನ್ವಯ ಸಮಿತಿಯನ್ನು ಶ್ರೀ. ಸಿದ್ದರಾಮಯ್ಯನವರ ನೇತೃತ್ವದಲ್ಲಿ ರಚಿಸಿರುವುದು ಮತ್ತು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೊಂದಾಣಿಕೆ ಮೂಲಕ ಜಂಟಿಯಾಗಿ ಬಿಜೆಪಿಯನ್ನು ಎದುರಿಸಲು ಈ ಎರಡು ಪಕ್ಷಗಳು ನಿರ್ಧರಿಸಿರುವುದು ಈ ಎಲ್ಲವೂ ಸದ್ಯಕ್ಕೆ ಸ್ವಾಗತಾರ್ಹ ಬೆಳವಣಿಗೆಗಳಾಗಿವೆ. ಮಂತ್ರಿ ಸ್ಥಾನಗಳ ಕಾಂಗ್ರೆಸ್‌ನ ಆಕಾಂಕ್ಷಿಗಳ ನಡುವೆ ಅಸಮಾದಾನ ಕಂಡು ಬರುವ ಸಂಭವವಿದೆ. ಅದರ ಪರಿಣಾಮ ಬೀರುವ ಅಂಶಗಳನ್ನು ಕಡೆಗಣಿಸುವಂತಿಲ್ಲ."

ಮುಂದಿನ ಕರ್ತವ್ಯಗಳು :

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಮತ್ತು ಆ ಮೇಲಿನ ಕರ್ತವ್ಯಗಳ ಬಗ್ಗೆ ನಿರ್ಣಯ ಹೀಗೆಂದಿದೆ:

"ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸುವ ಮತ್ತು ರಾಜ್ಯದಿಂದ ಕೆಲವರಾದರೂ, ಎಡ ಮತ್ತು ಪ್ರಜಾಪ್ರಭುತ್ವವಾದಿಗಳು ಲೋಕಸಭಾ ಪ್ರವೇಶಿಸುವಂತಹ ಕಾರ್ಯತಂತ್ರವನ್ನು ನಾವು ಹೆಣೆಯಬೇಕಾಗಿದೆ. ಈಗಿನಂದಲೇ ಎಡಪಕ್ಷಗಳ ಜೊತೆ ಸೇರಿ, ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿಕೊಂಡು ಮುಂದೆ ಸಾಗಲು ಅಗತ್ಯ ಕ್ರಮವಹಿಸುವ ಜವಾಬ್ದಾರಿಯನ್ನು ರಾಜ್ಯಸಮಿತಿ ವಹಿಸಿಕೊಳ್ಳ ಬೇಕಾಗಿದೆ. ಈ ಹಿಂದೆಯೇ ಗುರುತಿಸಿದಂತೆ, ರಾಜ್ಯದಲ್ಲಿ ಮಂಗಳೂರು ಮತ್ತು ಚಿಕ್ಕಬಳ್ಳಾಪುರ ಪಾರ್ಲಿಮೆಂಟ್ ಸ್ಥಾನಗಳಿಗೆ ಸ್ಪರ್ಧಿಸಲು ಅಗತ್ಯ ಸಿದ್ದತೆಗಳನ್ನು ನಡೆಸಲು ರಾಜ್ಯಸಮಿತಿ ಕ್ರಮವಹಿಸಬೇಕು. ಅದೇ ರೀತಿ, ಜಿಲ್ಲಾ ಸಮಿತಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಮುಂಬರುವ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಅನುವಾಗುವಂತೆ ಅಗತ್ಯ ಕೆಲಸ ಮತ್ತು ಕ್ರಮಗಳನ್ನು ಗುರುತಿಸಬೇಕು. ಮುಂಬರುವ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳನ್ನು ಗೆಲ್ಲಲು ಸಿದ್ಧರಾಗಬೇಕು."

ಮುಂದುವರೆದು ನಿರ್ಣಯ ಹೀಗೆಂದಿದೆ : "ಈಗಿನಿಂದಲೇ ಮುಂಬರುವ ವಿಧಾನ ಸಭಾ ಚುನಾವಣೆಗೂ ಈಗಾಗಲೇ ಗುರುತಿಸಲಾದ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಕಾರ್ಯ ನಿರ್ವಹಿಸಲು ಅಗತ್ಯ ಕ್ರಮವಹಿಸಬೇಕು. ಮುಂದೆ ಬರಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣಾ ಕ್ಷೇತ್ರಗಳನ್ನು ವ್ಯಾಪಕವಾಗಿ ಗುರುತಿಸಿ ಕಾರ್ಯಕ್ರಮಗಳನ್ನು ಸ್ಥಳೀಯ ಪ್ರಶ್ನೆಗಳ ಮೇಲೆ ಅಗತ್ಯ ಚಳುವಳಿಗಳನ್ನು ಸಂಘಟಿಸಲು ಕ್ರಮವಹಿಸ ಬೇಕು. ಅದೇ ರೀತಿ, ಈ ಎಲ್ಲ ಕ್ಷೇತ್ರಗಳಲ್ಲಿ ರಚಿಸಲಾದ ಬೂತುವಾರು ಸಮಿತಿಗಳನ್ನು ಸಕ್ರಿಯಗೊಳಿಸಬೇಕು. ಸಂಪರ್ಕವಿರುವೆಡೆ ರಚಿಸಬೇಕು. ಅವರನ್ನೆಲ್ಲಾ ಕ್ಷೇತ್ರವಾರು ಕರೆದು ಒಂದು ದಿನದ ತರಬೇತಿ ನೀಡಬೇಕು. ಈ ಪ್ರದೇಶದ ಪ್ರತಿಯೊಂದು ಗ್ರಾಮದಲ್ಲಿ ಯುವಜನ ಹಾಗೂ ಮಹಿಳೆಯರ, ದಲಿತರ ಮತ್ತು ರೈತ–ಕೂಲಿಕಾರರ ಘಟಕಗಳ ರಚನೆಗೆ ಅಗತ್ಯ ಗಮನ ಹರಿಸಬೇಕು. ಪಂಚಾಯ್ತಿವಾರು/ವಾರ್ಡವಾರು ಕಾರ್ಮಿಕ ಮತ್ತಿತರೇ ಸಮೂಹಗಳ ಘಟಕಗಳನ್ನು ರಚಿಸಿ ಅವುಗಳ ಕೆಲಸವನ್ನು ವಿಸ್ತರಿಸಲು ಕ್ರಮವಹಿಸಬೇಕು. ಕೊಲ್ಕತ್ತಾ ಹಾಗೂ ಬೆಂಗಳೂರು ಸಂಘಟನಾ ಪ್ಲೀನಂನ ನಿರ್ದೇಶನಗಳನ್ನು ಜಾರಿಗೆ ತರಲು ಕ್ರಮವಹಿಸಬೇಕು. ಸಾಮಾಜಿಕ ಮಾಧ್ಯಮದ ಕೆಲಸವನ್ನು ಬಲಪಡಿಸಲು ಅನುಭವಗಳನ್ನು ಕ್ರೋಢೀಕರಿಸಬೇಕು."

ಮೈತ್ರಿ ಕೂಟದ ಸರಕಾರದ ಕುರಿತು ಭ್ರಮೆಗಳು ಬೇಡ

ಮೈತ್ರಿಕೂಟ ಸರಕಾರದ ಸ್ವರೂಪ ಮತ್ತು ಅದರ ಹಿನ್ನೆಲೆಯಲ್ಲಿ ಪಕ್ಷದ ಕರ್ತವ್ಯಗಳ ಬಗ್ಗೆ ನಿರ್ಣಯ ಹೀಗೆಂದಿದೆ:

"ಕರ್ನಾಟಕದ ಮೈತ್ರಿ ಕೂಟದ ಸರಕಾರದ ಕುರಿತು ಭ್ರಮೆಗಳು ಬೇಕಿಲ್ಲ. ಇದು ಕೂಡಾ ಭೂಮಾಲಕ–ಬಂಡವಾಳದಾರರ ಸರಕಾರವೇ ಆಗಿದೆ. ಮಾತ್ರವಲ್ಲಾ, ಇದೂ ಕೂಡಾ ಜನವಿರೋದಿ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಜಾರಿಗೆ ತರುವ ಸರಕಾರವೇ ಆಗಿದೆ. ಇದು ಜನಗಳ ನಡುವೆ ಮತ್ತಷ್ಟು ಸಂಕಷ್ಟಗಳನ್ನು ಮತ್ತು ಅಸಂತೃಪ್ತಿಗಳನ್ನು ಖಂಡಿತಾ ಮೂಡಿಸಲಿದೆ. ಜನಗಳ ನಡುವೆ ಉಂಟಾಗುವ ಈ ಅಸಮಾಧಾನವು ಬಿಜೆಪಿ ಬಲಗೊಳ್ಳಲು ಅವಕಾಶ ನೀಡಲಿದೆ. ಅದೇ ಸಂದರ್ಭದಲ್ಲಿ ರಾಜ್ಯದಲ್ಲಿ ಸರಕಾರವನ್ನು ಅಸ್ಥಿರಗೊಳಿಸುವ ಕೆಲಸವನ್ನು ಬಿಜೆಪಿ ಮುನ್ನಡೆಸಲಿದೆ. ಮತ್ತು ಪುನಃ ತನ್ನ ಪ್ರಾಬಲ್ಯವನ್ನು ಮೆರೆಯಲು ಮತಾಂದತೆಯನ್ನು ಬೆಳೆಸುವ ಕೆಲಸಕ್ಕೆ ಬಿಜೆಪಿ ಕೈ ಹಾಕಲಿದೆ. ಅಂತಹ ಎಲ್ಲ ಸಂದರ್ಭದಲ್ಲಿಯೂ ಈ ಸರಕಾರ/ಶಾಸಕರು ಮತಾಂಧತೆಯನ್ನು ನಿಗ್ರಹಿಸುವ ಕೆಲಸದಲ್ಲಿ ಗಂಭೀರವಾಗಿ ತೊಡಗುತ್ತದೆನ್ನಲು ಯಾವುದೇ ಕಾರಣಗಳು ನಮ್ಮಲ್ಲಿಲ್ಲ. ಮುಂದೆಯು ತಮ್ಮ ತಮ್ಮ ರಾಜಕೀಯದ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಈ ರಾಜಕೀಯ ಶಕ್ತಿಗಳು ಜಾತಿ ರಾಜಕಾರಣವನ್ನು ಬಲಪಡಿಸಲಿವೆಯೆಂಬುದನ್ನು ಗಮನಿಸಲೇಬೇಕು.

ಹೀಗಾಗಿ, ಕರ್ನಾಟಕ ರಾಜ್ಯದ ಸೌಹಾರ್ದತೆಯನ್ನು ರಕ್ಷಿಸುವುದು ಬಲಪಡಿಸುವುದು ಮತ್ತು ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಐಕ್ಯ ಹೋರಾಟಗಳನ್ನು ಬಲಗೊಳಿಸುವುದು, ಜಾತಿವಾದದ ವಿರುದ್ಧ ಮತ್ತು ಜಾತಿರಾಜಕಾರಣದ ವಿರುದ್ಧ ಹೋರಾಡುವುದು ಹಾಗೂ ನೂತನ ಮತದಾರರಾದ ಮತ್ತು ಆಗುತ್ತಿರುವ ವಿದ್ಯಾರ್ಥಿ–ಯುವಜನರ ನಡುವಿನ ಚಳುವಳಿಯನ್ನು ರಾಜ್ಯಾದ್ಯಂತ ಬಲಗೊಳಿಸುವುದು ತುರ್ತು ಅಗತ್ಯವಿದೆ." ●

ಅತಿಥಿ ಅಂಕಣ

ಕಾವೇರಿ ಮತ್ತು ಕಾಲಾ – ಎತ್ತಣಿಂದೆತ್ತ ಸಂಬಂಧ

ವಿನಯಾ ಒಕ್ಕುಂದ


'ಅವರಿಗೆ ಕಾಸು ಮುಖ್ಯ, ನಮಗೆ ಕಾವೇರಿ ಮುಖ್ಯ' – ಪ್ರತಾಪಸಿಂಹ ಅವರು, 'ಜಸ್ಟ್ ಆಸ್ಕಿಂಗ್' ಆಂದೋಲನ ಪ್ರಾರಂಭಿಸಿರುವ ಪ್ರಕಾಶ ರೈ ಅವರ ಬಗ್ಗೆ ಆಡುತ್ತಿದ್ದರು. ಪ್ರತಾಪಸಿಂಹ ಅವರಿಗೆ ಯಾವಾಗಿನಿಂದ ಕಾಸು ಅಮುಖ್ಯವಾಯಿತು ಮತ್ತು ಕಾವೇರಿ ಹೋರಾಟದಲ್ಲಿ ಅವರು ಯಾವಾಗಿನಿಂದ ತಮ್ಮನ್ನು ತೊಡಗಿಸಿಕೊಂಡಿದ್ದರೋ ತಿಳಿಯಲಿಲ್ಲ. ಕಾವೇರಿ ವಿವಾದವನ್ನೂ 'ಕಾಲಾ' ಸಿನಿಮಾದ ಪ್ರದರ್ಶನವನ್ನೂ ಪರಸ್ಪರ ಬೆರೆಸದಿರುವುದು ಒಳಿತು. ಎರಡೂ ಪ್ರತ್ಯೇಕ ವಿಷಯಗಳು. ಸಿನಿಮಾ ಎನ್ನುವುದು ನಿರ್ಮಾಪಕನಿಂದ ಹಿಡಿದು ಪೋಸ್ಟರ್ ಬಾಯ್‌ವರೆಗೆ ವ್ಯಾಪಿಸಿಕೊಂಡಿರುವ ಉದ್ಯಮ. ಸಿನಿಮಾ ಪರದೆಯ ಹಿಂದೆ ನೂರಾರು ಕಾರ್ಮಿಕರ ಬದುಕಿರುತ್ತದೆ. ಅವರನ್ನು ಹಿಂಸೆಗೀಡು ಮಾಡುವುದರಿಂದ ಏನನ್ನು ತಾನೇ ಸಾಧಿಸಿದಂತಾಯಿತು? ಕಾವೇರಿ ವಿವಾದವನ್ನು ಪ್ರಾಕ್ಟಿಕಲ್ ಆಗಿ ಯೋಚಿಸಿ ಪರಿಹಾರದ ಒತ್ತಡವನ್ನು ಉಂಟು ಮಾಡಬೇಕಿದೆ, ಭಾವನಾತ್ಮಕತೆಯಿಂದಲ್ಲ – ಎಂದು ಪ್ರಕಾಶ ರೈ ಬರೆದಿದ್ದರು. ಪ್ರಕಾಶ ರೈ ಅಭಿಪ್ರಾಯದಲ್ಲಿ ಕಾವೇರಿ ವಿಷಯ ನಿರ್ಲಕ್ಷಿಸಿರಿ ಎಂದಾಗಲೀ, ಅದಕ್ಕಿಂತಲೂ ಸಿನಿಮಾ ಮುಖ್ಯ ಎಂದಾಗಲೀ ಇರಲಿಲ್ಲ. ಆದರೆ ಟಿ.ವಿ. ಚಾನೆಲ್‌ಗಳಲ್ಲಿ ವಾದ–ವಿವಾದಗಳು ಎತ್ತ ಬೇಕತ್ತ ಹಾರಾಡುತ್ತಿದ್ದವು. ಇಂದು ಹೈಕೋರ್ಟು 'ಕಾಲಾ' ಸಿನಿಮಾ ಪ್ರದರ್ಶನಕ್ಕೆ ಅನುಮತಿ ನೀಡಿದೆ ಮತ್ತು ಕಾನೂನು ಭಂಗ ಆಗದಂತೆ ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಹೊಣೆಗಾರಿಕೆ ಎಂದು ಸೂಚಿಸಿದೆ. ಕೋರ್ಟಿಗೂ ಕೂಡ ಈ ಎರಡನ್ನೂ ಪ್ರತ್ಯೇಕ ವಿಷಯಗಳಾಗಿ ಪರಿಗಣಿಸಬೇಕು ಎನ್ನುವ ಬಗ್ಗೆ ಖಚಿತವಿದ್ದಂತಿದೆ. ಆದರೆ ನಮ್ಮ ಮುಖ್ಯಮಂತ್ರಿಗಳು – ನಾನು ಮೊದಲು ಕನ್ನಡಿಗ, ಆ ಮೇಲೆ ಮುಖ್ಯಮಂತ್ರಿ. ಕಾಲಾ ಸಿನಿಮಾ ಪ್ರದರ್ಶನವನ್ನು ತಡೆಯುವುದು ಒಳಿತು. ಪ್ರದರ್ಶಿಸಿದ್ದೇ ಆದಲ್ಲಿ ನಂತರದ ಪರಿಣಾಮಗಳಿಗೆ ಅವರುಗಳೇ ಜವಾಬ್ದಾರರು – ಎಂದಿದ್ದಾರೆ. ಕಾವೇರಿ ವಿವಾದದ ಕಾನೂನಾತ್ಮಕ ನಿರ್ವಹಣೆಗಿಂತಲೂ, ಭಾವನಾತ್ಮಕ ನಿರ್ವಹಣೆಯ ಒತ್ತಡ ಮುಖ್ಯಮಂತ್ರಿಗಳಿಗೆ ಇದ್ದಂತಿತ್ತು.

ಹೌದು, ನೈಋತ್ಯ ಮಾರುತಗಳು ಮುಂಗಾರು ಮಳೆಯನ್ನು ಹೊತ್ತು ಬಂದು ನೆಲದ ನೀರುಕ್ಕಿಸುತ್ತಿದ್ದಂತೆಯೇ ಕಾವೇರಿ ವಿವಾದವು ಕಳೆಯೇರುತ್ತದೆ. ಜೂನ್ ಜುಲೈದಿಂದ ಸಪ್ಟೆಂಬರವರೆಗೂ ವಿವಾದವು ಉರಿಯೆದ್ದಿರುತ್ತದೆ. ಇದು ಪ್ರತಿವರ್ಷದ ಮಾತು. ಈ ವರ್ಷ ಮುಂಗಾರಿನ ಅಬ್ಬರವೂ, ಕಾವೇರಿಯ ಕಾವೂ ಜೋರಾಗಿದೆ. ತಮಿಳುನಾಡಿನ ನಟ ಕಮಲ್‌ಹಾಸನ್ ನಮ್ಮ ಮುಖ್ಯಮಂತ್ರಿಗಳನ್ನು ಭೇಟಿಯಾಗಿ, ತಮಿಳಿಗರ ಕುರುವೈ ಬೆಳೆಗೆ ನೀರು ಪೂರೈಸಲು 'ನಮ್ರ ವಿನಂತಿ' ಮಾಡಿದ್ದಾರೆ. ಅತ್ತ ರಜನೀಕಾಂತ್ ತಮಿಳಿಗರಿಗೆ ಕಾವೇರಿ ನೀರಿನಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುವ ನೈತಿಕ ಹೊಣೆಗಾರಿಕೆಯ ಮಾತಾಡಿದ್ದಾರೆ. ತಮಿಳುನಾಡು ಮುಂಗಾರು ಆರಂಭದಲ್ಲಿಯೇ ಹೀಗೆ ಪಿರಿಪಿರಿ ಪ್ರಾರಂಭಿಸಲು ಕಾರಣಗಳಿವೆ– ತಮಿಳುನಾಡು ನೈಋತ್ಯ ಮನ್ಸೂನ್ ಮಾರುತಗಳಿಂದ ಮಾತ್ರವಲ್ಲ, ಈಶಾನ್ಯ ಮಾರುತಗಳಿಂದಲೂ ಸುಮಾರು 200 TMC ಯಷ್ಟು ಮಳೆ ನೀರು ಪಡೆಯುತ್ತದೆ. ತಮಿಳು ರೈತರು ಕುರುವೈ, ಸಾಂಬಾ, ತಾಳಂಡಿ ಎಂಬ ಮೂರು ಮುಖ್ಯ ಬೆಳೆ ಬೆಳೆಯುತ್ತಾರೆ. ಕುರುವೈ ಬೆಳೆಗೆ ಮೆಟ್ಟೂರು ಜಲಾಶಯದ ನೀರನ್ನು ಬಳಸಿಕೊಳ್ಳದೆ, ಕರ್ನಾಟಕದಿಂದ ಹರಿದು ಬರುವ ನೀರನ್ನು ಬಳಸಿಕೊಳ್ಳುವ ಕೃಷಿ ಜಾಣ್ಮೆಯನ್ನು ಪ್ರಯೋಗಿಸುತ್ತ ಬಂದಿದ್ದಾರೆ. ಇದಕ್ಕಾಗಿ ನ್ಯಾಯ ಮಂಡಳಿಯ, ಕೇಂದ್ರ ಸರ್ಕಾರದ ಗಮನ ಸೆಳೆಯಲು ಇಂತಹ ಸದ್ದು ಎಬ್ಬಿಸುತ್ತಾರೆ. ಇದಕ್ಕೊಂದು ಇತಿಹಾಸವೇ ಇದೆ. ಅದು ಮೈಸೂರು– ಮದ್ರಾಸ್ ಸಂಸ್ಥಾನಗಳೆಂದು ವಿಂಗಡನೆ ಆದ ಬ್ರಿಟೀಷ್‌ರ ಆಳ್ವಿಕೆಯ ಕಾಲ. ಟಿಪ್ಪೂ ಸಾವಿನೊಂದಿಗೆ ಮದ್ರಾಸ್ ಸಂಸ್ಥಾನ ಪ್ರಬಲಗೊಂಡಿತ್ತು. ಅದು ಕಾವೇರಿಯ ನಾಲಾಗಳ ದುರಸ್ಥಿಗೆ, ಬಾಂದಾರ್ ಕಟ್ಟಲಿಕ್ಕೆ ತನ್ನ ಒಪ್ಪಿಗೆಯ ಅಗತ್ಯವನ್ನು ಪ್ರತಿಷ್ಠಾಪಿಸಿಕೊಂಡಿತು. 1892ರ ಒಪ್ಪಂದ 1924ರಲ್ಲೂ ಭಾಗಶಃ ಅದೇ ರೀತಿ ನವೀಕರಣಗೊಂಡಿತು. 1992ರಲ್ಲಿ ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪು ನೀಡಿತು. ಸಾಮಾನ್ಯವಾಗಿ ನದಿನೀರಿನ ಹಂಚಿಕೆಯಲ್ಲಿ, ನದಿಗಳು ಜನ್ಮ ತಳೆದು ರಸಹೀರಿ ಬೆಳೆದ ತವರ ನೆಲ ಸತತ ಅನ್ಯಾಯಕ್ಕೊಳಗಾಗುತ್ತದೆ. ಎತ್ತರದ ನೆಲ ಕರ್ನಾಟಕ ಈ ಅನ್ಯಾಯದ ಹಕ್ಕುದಾರವಾಯಿತು. ತಮಿಳುನಾಡು ಪರಂಪರಾಗತ ಹಕ್ಕುಸ್ವಾಮ್ಯವನ್ನು ಅನುಭವಿಸುತ್ತ, ತನ್ನ ಬೇಸಾಯ ಭೂಮಿಯನ್ನು ಹರಡಿಕೊಳ್ಳತೊಡಗಿತು. 2007ರ ಕಾವೇರಿ ಜಲ ನ್ಯಾಯಾಧಿಕರಣದ ಐತೀರ್ಪಿಗೆ 16–2–2018 ರಂದು ಸರ್ವೋಚ್ಚ ನ್ಯಾಯಾಲಯವು ತಿದ್ದುಪಡಿ ತಂದಿತು. ಕರ್ನಾಟಕವೀಗ ಪ್ರತಿವರ್ಷ 177.27 TMC ನೀರನ್ನು ಹರಿಸಬೇಕು. ಬೆಂಗಳೂರು ಮತ್ತು ಸುತ್ತಲ ಶಹರಗಳ ಕುಡಿಯುವ ನೀರಿಗಾಗಿ ಕರ್ನಾಟಕ 50 TMC ನೀರಿನ ಬೇಡಿಕೆಯಿಟ್ಟಿತ್ತು. ಅನುಮತಿ ದೊರೆತದ್ದು ಕೇವಲ 14.75 TMC ನೀರಿಗೆ. ತೀರ್ಪಿನಲ್ಲಿ ಜಲನಿರ್ವಹಣಾ ಮಂಡಳಿಯನ್ನು ರಚಿಸುವ ಸೂಚನೆಯೂ ಇತ್ತು.

ಈ ಇಡೀ ಪ್ರಕ್ರಿಯೆ ಕಾನೂನುಬದ್ಧವಾಗಿ ಸುಸೂತ್ರವಾಗಿ ನಡೆದು ಬರಲಿಲ್ಲ. ಕನ್ನಡದ ನೆಲ, ತಾನು ಎತ್ತಿ ಆಡಿಸಿದ ಕಾವೇರಿ ಬಹುಸತ್ವದೊಂದಿಗೆ ತಮಿಳಿಗೆ ಧುಮ್ಮಿಕ್ಕುವುದನ್ನು ತಣ್ಣಗೆ ಸಹಿಸಲಿಲ್ಲ. ನ್ಯಾಯಾಧಿಕರಣಗಳೊಂದಿಗೆ ಮುನಿಸು ನಡೆಯಿತು. ತಮಿಳುನಾಡು ಸರ್ಕಾರಗಳು ಅದೇ ನ್ಯಾಯಾಧಿಕರಣಗಳೊಂದಿಗೆ ಬಲು ವಿನಮ್ರತೆಯಿಂದ ನಡೆದುಕೊಂಡು, ಲಾಭ ಪಡೆದವು ಎಂಬ ಮಾತು ಇದೆ. ಪ್ರಾದೇಶಿಕ ರಾಜಕೀಯ ಪಕ್ಷಗಳೇ ತಮಿಳುನಾಡಿನಲ್ಲಿ ಪ್ರಬಲವೂ ಸರ್ಕಾರವೂ ಆದುದರಿಂದ, ತಮ್ಮ ಹಕ್ಕೊತ್ತಾಯವನ್ನು ಮಂಡಿಸುವ ಹಠವಾದಿ ನಿಲುವನ್ನೂ ಅವು ಪ್ರಕಟಪಡಿಸುತ್ತ ಬಂದವು. 2019ರ ಚುನಾವಣಾ ಪೂರ್ವ ವರ್ಷದ ರಾಜಕೀಯ ಚಟುವಟಿಕೆಗಳು ಕಾವೇರಿ ವಿಷಯವನ್ನು ಹೆಚ್ಚು ತುರುಸಿನದಾಗಿಸಿದೆ.

ಇತ್ತೀಚಿನ ದಿನಗಳಲ್ಲಿ, ಮತಾಂಧ ಶಕ್ತಿಗಳು ಮಧ್ಯ ಪ್ರವೇಶಿಸಿ ಯೋಗ್ಯ ವಿಷಯದ ಕುರಿತ ಪ್ರತಿರೋಧ ಆಯೋಗ್ಯ ರೀತಿಯ ಹಿಂಸಾಪ್ರವೃತ್ತಿಯಾಗಿ ಬೆಳೆಯುವಂತೆ ಮಾಡುತ್ತವೆ. ಸಾರಾಸಾರ ಯೋಚನೆಯಿಲ್ಲದೆ ಸಿಡಿದೇಳುವ ಒಂದು ದಂಡು ಸದಾ ಕಾರ್ಯಪ್ರವೃತ್ತವಾಗಿರುವಂತೆ ನೋಡಿಕೊಳ್ಳುತ್ತವೆ. ನಾಡು–ನುಡಿ ಪರವಾದ ಚಿಂತನೆಗಳು ರಾಷ್ಟ್ರೀಯತೆಯ ಪರಿಭಾಷೆಗೆ ತರ್ಜುಮೆಗೊಂಡಾಗ, ಮತೀಯವಾದ ವಿಜೃಂಭಿಸುತ್ತದೆ. ಜನಸಮುದಾಯದ ಎದುರು ನಿರಂತರವಾಗಿ ಕಲ್ಪಿತ ವೈರಿಯನ್ನು ಎದುರಿಡುತ್ತ; ಮೂಲಭೂತವಾದ ತನ್ನ ಕತ್ತಿಯನ್ನು ಮಸೆಯುತ್ತಲೇ ಇರುತ್ತದೆ. ಅನ್ಯಾಯವನ್ನು ಮಾಡಿದವರು ಸುರಕ್ಷಿತರಾಗಿರುತ್ತಾರೆ. ಜನ ಬದುಕು ಕುದ್ದು ಹಳಸತೊಡಗುತ್ತದೆ. ಜನರು ದೊಂಬಿಯನ್ನು ಹಿಂಸೆಯನ್ನು ಆಸ್ವಾದಿಸತೊಡಗಿದರೆಂದರೆ, ತಮ್ಮ ನಿಜವಾದ ವೈರಿಗಳು ಬಿತ್ತಿ ಬೆಳೆಸಿದ ಕಲ್ಪಿತ ವೈರವನ್ನೇ ವಿಜೃಂಭಿಸುತ್ತ ಅವರ ಸಮರ್ಥಕರೇ ಆಗುವ ಅಪಾಯ ಸಂಭವಿಸುತ್ತದೆ. ಸರಿಯಾದ ಕಾರಣಕ್ಕೆ ಮಾತ್ರವಲ್ಲ ಸರಿಯಾದ ರೀತಿಯಲ್ಲಿ ಪ್ರತಿರೋಧದ ಸಿದ್ಧತೆಯನ್ನು, ಜನಹೋರಾಟವನ್ನು ಮುನ್ನಡೆಸುವುದು ಕಾಲದ ಅಗತ್ಯ ಇಲ್ಲದಿದ್ದರೆ ಎಲ್ಲವೂ ಮತೀಯವಾದಿಗಳ ಕೈವಸ್ತ್ರಗಳಾಗುತ್ತವೆ.

ಕಾವೇರಿ ಜಲನಿರ್ವಹಣ ಮಂಡಳಿಯ ರಚನೆಯಿಂದ, ಕರ್ನಾಟಕವು ಜಲನಿರ್ವಹಣೆಯ ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತದೆ. ಕಾವೇರಿಗೆ ಸಂಬಂಧಿಸಿದ ಸಣ್ಣಪುಟ್ಟ ಯೋಜನೆಗಳ, ಜಲಾಶಯ ನಿರ್ವಹಣೆಯ ಅಧಿಕಾರವನ್ನು ಮಂಡಳಿ ಪಡೆದುಕೊಳ್ಳುತ್ತದೆ. ರಾಜ್ಯವು ತನ್ನೊಡಲ ನೀರಿನ ಹಕ್ಕುದಾರಿಕೆಯನ್ನೇ ಕಳೆದುಕೊಳ್ಳುವುದೆಂದರೆ, ಭಾವನಾತ್ಮಕವಾದ ಮಾತ್ರವಲ್ಲ ಆರ್ಥಿಕವಾದ ಹೊಡೆತವೂ ಆಗಿರುತ್ತದೆ. ಭಾರತದಂತಹ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ರಾಜ್ಯದ ಸಾರ್ವಭೌಮತೆಗೂ ಧಕ್ಕೆಯಾಗುತ್ತದೆ. ಬೆಂಗಳೂರು ಮಹಾನಗರದ ಕುಡಿಯುವ ನೀರಿನ ಸಮಸ್ಯೆ ಬೃಹದಾಕಾರವಾಗುತ್ತ, ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ತೊಡರುಗಾಲಾಗುತ್ತ, ರಾಜಕೀಯ ದೊಂಬರಾಟವನ್ನೂ ನಿರ್ಮಿಸಿ, ವ್ಯವಸ್ಥೆಯನ್ನೇ ದುರ್ಬಲಗೊಳಿಸುವ ಎಲ್ಲ ಮುನ್ಸೂಚನೆಗಳೂ ಇವೆ. ಕಾವೇರಿ ಜಲಾನಯನ ಪ್ರದೇಶದ ತಮಿಳುನಾಡು ಮತ್ತು ಕರ್ನಾಟಕದ ಕೃಷಿ ಭೂಮಿಯನ್ನು ಕೃಷಿ ಉತ್ಪನ್ನಗಳನ್ನು ಗಮನಿಸಿದರೂ ಸಾಕು, ಕರ್ನಾಟಕವು ಅನ್ಯಾಯಕ್ಕೊಳಗಾಗಿರುವುದು ಕಾಣುತ್ತದೆ. ಇದು ವಾಸ್ತವ. ಆದರೀಗ ಎದುರಿರುವ ಸಮಸ್ಯೆ, ಈ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಹಿಡಿಯಬೇಕಾದ ಹಾದಿ ಯಾವುದು? ಭಾರತದಲ್ಲಿ ನದಿನೀರಿನ ಹಂಚಿಕೆ, ನಿರ್ವಹಣೆ, ಚಲನೆಗಳ ಕುರಿತು ಖಚಿತ ವೈಜ್ಞಾನಿಕತೆಯನ್ನು ಆಧರಿಸಿದ ಮಾನದಂಡಗಳಿವೆಯೇ? ಹಿಮಾಲಯ–ಗಂಗಾನದಿಗಳ ಸಹಜೀವಿತದಲ್ಲಿ ನಡೆಯುತ್ತಿರುವ ಸ್ಥಿತ್ಯಂತರವನ್ನೂ ದುರ್ಲಕ್ಷಿಸಿ ಗಂಗಾ–ಕಾವೇರಿ ಜೋಡಣೆಯ 'ಅಭಿವೃದ್ಧಿಯ' ನೀಲನಕ್ಷೆ ಹಾಕಿಕೊಂಡಿರುವ ಭ್ರಷ್ಟಾಚಾರಿಗಳು ನಾವು. ನದೀ ನೀರಿನಂತಹ ಸಂಪನ್ಮೂಲದ ಬಳಕೆಯ ಬಗ್ಗೆ ಅತ್ಯಂತ ಸಮರ್ಥವಾದ ಪೂರ್ವಸಿದ್ಧತೆಯೊಂದಿಗೆ ಹಕ್ಕೊತ್ತಾಯವನ್ನು ಮಂಡಿಸುವ ಕೆಲಸ ಕರ್ನಾಟಕದಿಂದ ಆಗಬೇಕು.



ಕಾವೇರಿ ಜಲ ವಿವಾದದ ವಿಷಯದಲ್ಲಿ ಎರಡೂ ರಾಜ್ಯಗಳಲ್ಲೂ ದೊಂಬಿ, ಸಾವು–ನೋವು, ಆಸ್ತಿಹಾನಿ, ಹೊಡೆದಾಟಗಳ ಕೆಟ್ಟ ಚರಿತ್ರೆಯಿದೆ. ಜನಬದುಕಿನ ಸಾಮರಸ್ಯವನ್ನು ಹದಗೆಡವಿದ ಸಾಕಷ್ಟು ಪ್ರಕರಣಗಳಿವೆ. ಇಂತಹ ಉದ್ವೇಗಕಾರಿ ನಡವಳಿಕೆಗಳಿಂದ ನ್ಯಾಯಾಧಿಕರಣದ ತೀರ್ಮಾನದ ಮೇಲೆ ಪ್ರಭಾವ ಬೀರಲು ಸಾಧ್ಯವಾಗುತ್ತದೆಯೇ? ಹೆಚ್ಚೆಂದರೆ, ಸಮಸ್ಯೆಯನ್ನು ತಾತ್ಪೂರ್ತಿಕವಾಗಿ ಮುಂದೂಡಬಹುದು– ಹೆಗ್ಗಣವನ್ನೊಳಗಡೆಯಿಟ್ಟು ಮೇಲೆ ಗುದ್ದು ಬಡಿದಂತೆ, ಈಗ ಮತ್ತೆ ಅಂತಹ ಉನ್ಮಾದಕಾರಿ ವಾತಾವರಣ ನಿರ್ಮಾಣವಾಗುತ್ತಿದೆ. ಪ್ರಾದೇಶಿಕ ಪಕ್ಷಗಳ ನೆಲ ತಮಿಳುನಾಡಿನಲ್ಲಿ ಮತ್ತೆ ಹೊಸ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳುತ್ತಿರುವ ಸಂದರ್ಭದಲ್ಲಿ ಕಾವೇರಿ ವಿವಾದವು ಅವರಿಗೆ ಅನಿವಾರ್ಯವೂ ಹೌದು. ಜನರನ್ನು ಭಾವನಾತ್ಮಕವಾಗಿ ಪ್ರಚೋದಿಸಿ, ಭಾಷಾವಾರು ಸಮುದಾಯಗಳಾಗಿ ವಿಂಗಡಿಸಿ ಪರಸ್ಪರ ದಬಾವಣೆಗೆ ಆಸ್ಪದ ಒದಗಿಸಿದರೆ, ಜನಬದುಕು ತಲ್ಲಣಗೊಳ್ಳುತ್ತದೆ. ಮುಕ್ತ ಮಾರುಕಟ್ಟೆಯು ರಾಜ್ಯ–ರಾಜ್ಯಗಳ, ದೇಶ–ದೇಶಗಳ ಜನರನ್ನು ಕಲಸಿಟ್ಟ ಕಾಲವಿದು. ಇದು ಕದಡತೊಡಗಿದರೆ ದೀರ್ಘಕಾಲದ ಸಾಮಾಜಿಕ ಅಸ್ವಸ್ಥತೆ ನಿರ್ಮಾಣವಾದೀತು. ಈಗಾಗಲೇ 'ಧರ್ಮಕಾರಣ'ದ ಫಲವನ್ನು ಉಣ್ಣುತ್ತಿದ್ದೇವೆ. ಜನ ಚಳುವಳಿಗಳು ಜನಮಾನಸದಲ್ಲಿ ವಿರೋಧವನ್ನು ಬಿತ್ತುವಂತಿರಬಾರದು, ಬೆಸೆಯುವಂತಿರಬೇಕು. ಉದಾತ್ತ ಚಲನೆಯಿಲ್ಲದಿದ್ದರದು ದೊಂಬಿಯಾಗುತ್ತದೆ.

ಇತ್ತೀಚಿನ ದಿನಗಳಲ್ಲಿ, ಮತಾಂಧ ಶಕ್ತಿಗಳು ಮಧ್ಯ ಪ್ರವೇಶಿಸಿ ಯೋಗ್ಯ ವಿಷಯದ ಕುರಿತ ಪ್ರತಿರೋಧ ಆಯೋಗ್ಯ ರೀತಿಯ ಹಿಂಸಾಪ್ರವೃತ್ತಿಯಾಗಿ ಬೆಳೆಯುವಂತೆ ಮಾಡುತ್ತವೆ. ಸಾರಾಸಾರ ಯೋಚನೆಯಿಲ್ಲದೆ ಸಿಡಿದೇಳುವ ಒಂದು ದಂಡು ಸದಾ ಕಾರ್ಯಪ್ರವೃತ್ತವಾಗಿರುವಂತೆ ನೋಡಿಕೊಳ್ಳುತ್ತವೆ. ನಾಡು–ನುಡಿ ಪರವಾದ ಚಿಂತನೆಗಳು ರಾಷ್ಟ್ರೀಯತೆಯ ಪರಿಭಾಷೆಗೆ ತರ್ಜುಮೆಗೊಂಡಾಗ, ಮತೀಯವಾದ ವಿಜೃಂಭಿಸುತ್ತದೆ. ಜನಸಮುದಾಯದ ಎದುರು ನಿರಂತರವಾಗಿ ಕಲ್ಪಿತ ವೈರಿಯನ್ನು ಎದುರಿಡುತ್ತ; ಮೂಲಭೂತವಾದ ತನ್ನ ಕತ್ತಿಯನ್ನು ಮಸೆಯುತ್ತಲೇ ಇರುತ್ತದೆ. ಅನ್ಯಾಯವನ್ನು ಮಾಡಿದವರು ಸುರಕ್ಷಿತರಾಗಿರುತ್ತಾರೆ. ಜನ ಬದುಕು ಕುದ್ದು ಹಳಸತೊಡಗುತ್ತದೆ. ಜನರು ದೊಂಬಿಯನ್ನು ಹಿಂಸೆಯನ್ನು ಆಸ್ವಾಧಿಸತೊಡಗಿದರೆಂದರೆ, ತಮ್ಮ ನಿಜವಾದ ವೈರಿಗಳು ಬಿತ್ತಿ ಬೆಳೆಸಿದ ಕಲ್ಪಿತ ವೈರವನ್ನೇ ವಿಜೃಂಭಿಸುತ್ತ ಅವರ ಸಮರ್ಥಕರೇ ಆಗುವ ಅಪಾಯ ಸಂಭವಿಸುತ್ತದೆ. ಸರಿಯಾದ ಕಾರಣಕ್ಕೆ ಮಾತ್ರವಲ್ಲ ಸರಿಯಾದ ರೀತಿಯಲ್ಲಿ ಪ್ರತಿರೋಧದ ಸಿದ್ಧತೆಯನ್ನು, ಜನಹೋರಾಟವನ್ನು ಮುನ್ನಡೆಸುವುದು ಕಾಲದ ಅಗತ್ಯ ಇಲ್ಲದಿದ್ದರೆ ಎಲ್ಲವೂ ಮತೀಯವಾದಿಗಳ ಕೈವಸ್ತ್ರಗಳಾಗುತ್ತವೆ.



ಸಂವಾದ ಆರಂಭಿಸಲು ಕಾಶ್ಮೀರಿಗಳ ಪರಕೀಯ ಭಾವವನ್ನು ನಿವಾರಿಸಬೇಕು



ಕದನ ವಿರಾಮದ ಮೊದಲ ಇಪ್ಪತ್ತು ದಿನಗಳಲ್ಲಿ ಒಟ್ಟಾರೆ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿದ್ದರೂ ಕಣಿವೆಯಲ್ಲಿನ ಜನರಿಗೆ ಒಂದು ರಾಜಕೀಯ ಇತ್ಯರ್ಥ ಕಂಡುಕೊಳ್ಳುವತ್ತ ರಾಜಕೀಯ ಸಂವಾದದ ಸಾಧ್ಯತೆಯ ಬಗ್ಗೆ ಹೆಚ್ಚು ವಿಶ್ವಾಸವಿಲ್ಲ. ಕಾಶ್ಮೀರದ ಜನರು ಮತ್ತು ಕೇಂದ್ರದ ನಡುವೆ ಸ್ವಲ್ಪ ಮಟ್ಟಿಗಿನ ವಿಶ್ವಾಸವನ್ನು ಪುನರ್‌ಸ್ಥಾಪಿಸಲು ಕ್ರಮಗಳನ್ನು ಕೈಗೊಳ್ಳುವುದು ಒಂದು ಅರ್ಥಪೂರ್ಣ ಸಂವಾದ ಆರಂಭಿಸಲು ಅಗತ್ಯವಾದ ಹೆಜ್ಜೆಯಾಗಿದೆ. ಆ ಮೂಲಕ ಸಂವಾದಕ್ಕೆ ಪರಿಸ್ಥಿತಿಯನ್ನು ಸೃಷ್ಟಿಸಬಹುದಾಗಿದೆ.



ಪ್ರಕಾಶ ಕಾರಟ್

ಮತ್ತೊಮ್ಮೆ, ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿರುವ ಮಾತುಕತೆಗಳ ಬಗ್ಗೆ ಕೆಲವು ಮಾತುಗಳು ಕೇಳಿ ಬರುತ್ತಿವೆ. ಹುರಿಯತ್ ಕಾನ್ಫರೆನ್ಸ್ ಇಂತಹ ಮಾತುಕತೆಗಳಿಗೆ ಸಿದ್ಧವಿದ್ದರೆ ಅದರೊಂದಿಗೆ ಮಾತುಕತೆ ನಡೆಸಲು ಸರಕಾರ ಸಿದ್ಧವಿದೆ ಎಂಬುದಾಗಿ ಕೇಂದ್ರ ಗೃಹ ಸಚಿವ ರಾಜನಾಥ ಸಿಂಗ್ ಮೇ 26ರಂದು ಮಾಧ್ಯಮ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಪಾಕಿಸ್ತಾನಕ್ಕೆ ಸಂಬಂಧಿಸಿ ಹೇಳುವುದಾದರೆ, ಅದರ ಜೊತೆ ಮಾತುಕತೆ ನಡೆಸಲು ಸರಕಾರ ಸಿದ್ಧವಿದೆ, ಆದರೆ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ನಿಲ್ಲಬೇಕು ಎಂದು ಅವರು ಹೇಳಿದ್ದಾರೆ

ಅದಾಗಿ ಮೂರು ದಿನಗಳ ನಂತರ, ಸಂವಾದ ಕುರಿತ ಅಸ್ಪಷ್ಟತೆಯನ್ನು ಕೇಂದ್ರ ಸರಕಾರ ತೊಡೆದುಹಾಕಿದರೆ ತಾವು ಮಾತುಕತೆಗೆ ಸಿದ್ಧ ಎಂದು ಸಯ್ಯದ್ ಗಿಲಾನಿ, ಮಿರ್ವೈಜ್ ಉಮರ್ ಫಾರೂಕ್ ಮತ್ತು ಮಹಮದ್ ಯಾಸಿನ್ ಮಲಿಕ್‌ರನ್ನು ಒಳಗೊಂಡ ಹುರಿಯತ್‌ನ ಜಂಟಿ ಪ್ರತಿರೋಧ ನಾಯಕತ್ವ ಪ್ರತಿಕ್ರಿಯಿಸಿತು. "ಸಂಬಂಧಪಟ್ಟ ಮೂರೂ ಪಕ್ಷಗಳ ನಡುವೆ ಮಾತುಕತೆ ನಡೆಯುವುದು ಉತ್ತಮ ಪ್ರಕ್ರಿಯೆ ಹಾಗೂ ಲಭ್ಯವಿರುವ ಆಯ್ಕೆಯಾಗಿದೆ" ಎಂದೂ ಅವರು ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಭಾರತ, ಜಮ್ಮು ಮತ್ತು ಕಾಶ್ಮೀರದ ಜನರು ಹಾಗೂ ಪಾಕಿಸ್ತಾನ ಇವೇ ಆ ಮೂರು ಪಕ್ಷಗಳಾಗಿವೆ.

ರಮ್ಜಾನ್ ಅವಧಿಯಲ್ಲಿ ಉಗ್ರಗಾಮಿಗಳ ವಿರುದ್ಧ ಕೇಂದ್ರ ಸರಕಾರ ಘೋಷಿಸಿದ ಕದನ ವಿರಾಮದ ಹಿನ್ನೆಲೆಯಲ್ಲಿ ಈ ಬೆಳವಣಿಗೆಗಳು ನಡೆದಿವೆ. ಮೇ 29ರಂದು ಭಾರತ ಮತ್ತು ಪಾಕಿಸ್ತಾನಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರುಗಳು (ಡಿಜಿಎಂಓ) ಪರಸ್ಪರ ಭೇಟಿಯಾಗಿ ಚರ್ಚಿಸಿದರು ಹಾಗೂ ನಿಯಂತ್ರಣ ರೇಖೆಯಲ್ಲಿ 2003ರಲ್ಲಿ ಘೋಷಿಸಲಾದ ಕದನ ವಿರಾಮವನ್ನು ಮತ್ತು ಗಡಿಗುಂಟ ಶೆಲ್ ದಾಳಿ ಮಾಡಬಾರದೆಂಬ ಒಪ್ಪಂದವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಒಪ್ಪಿಕೊಂಡರು.

ಕಣಿವೆಯಲ್ಲಿ ಉಗ್ರಗಾಮಿಗಳು ಕೆಲವು ಆಕ್ರಮಣಗಳನ್ನು ಮಾಡಿದರೂ ಕದನ ವಿರಾಮದ ಮೊದಲ ಇಪ್ಪತ್ತು ದಿನಗಳಲ್ಲಿ ಒಟ್ಟಾರೆ ಪರಿಸ್ಥಿತಿಯಲ್ಲಿ ಹಾಗೂ ಬಿಗುವು ಕಡಿಮೆಯಾಗುವಲ್ಲಿ ಸುಧಾರಣೆ ಕಂಡುಬಂದಿದೆ.

ಆದರೂ ಕಣಿವೆಯಲ್ಲಿನ ಜನರಿಗೆ ಒಂದು ರಾಜಕೀಯ ಇತ್ಯರ್ಥ ಕಂಡುಕೊಳ್ಳುವತ್ತ ರಾಜಕೀಯ ಸಂವಾದದ ಸಾಧ್ಯತೆಯ ಬಗ್ಗೆ ಹೆಚ್ಚು ವಿಶ್ವಾಸವಿಲ್ಲ. ನಾಲ್ಕು ವರ್ಷಗಳ ಹಿಂದೆ ಮೋದಿ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಕಣಿವೆಯಲ್ಲಿನ ಪರಿಸ್ಥಿತಿ ಬಿಗಡಾಯಿಸಿದೆ. ತುಂಬಾ ಕಠಿಣ ಭದ್ರತಾ ನಿಲುವನ್ನು ತಳೆದಿರುವುದು ಹಾಗೂ ಜನಪ್ರಿಯ ಪ್ರತಿರೋಧಗಳನ್ನು ಬಗ್ಗುಬಡಿಯಲು ದಮನದ ಸಾಧನಗಳನ್ನು' ಬಳಸಿಕೊಂಡಿರುವುದು ಉಗ್ರಗಾಮಿ ಚಟುವಟಿಕೆಯಲ್ಲಿ ಹೆಚ್ಚಳವಾಗಲು ಕಾರಣವಾಗಿದೆ, ದೊಡ್ಡ ಸಂಖ್ಯೆಯಲ್ಲಿ ಸ್ಥಳೀಯ ಯುವಜನರು ಇದರಲ್ಲಿ ಭಾಗವಹಿಸಿರುವುದರಿಂದ ಅದಕ್ಕೆ ಹೆಚ್ಚು ಹುಮ್ಮಸ್ಸು ಬಂದಿದೆ.

ರಾಜಕೀಯ ಪ್ರಕ್ರಿಯೆಗಾಗಿ ರಂಗ ಸಿದ್ಧಪಡಿಸಲು ಸಂಧಾನಕಾರರು ಪ್ರಯತ್ನಗಳನ್ನು ನಡೆಸಿ ಅದಕ್ಕೆ ಯಾವುದೇ ಹೆಚ್ಚಿನ ಫಲ ಸಿಗದ ಇತಿಹಾಸವೂ ನಮ್ಮ ಮುಂದಿದೆ. ವಾಜಪೇಯಿ ಮತ್ತು ಯುಪಿಎ ಸರಕಾರದ ಅವಧಿಯಲ್ಲಿ ಇಂಥ ಅನೇಕ ಮಧ್ಯಸ್ಥಿಕೆದಾರರು ಇದ್ದರು. ದಿಲೀಪ್ ಪಡಗಾಂವ್ಕರ್ ನೇತೃತ್ವದ ತ್ರಿಸದಸ್ಯ ತಂಡವೇ ಕೊನೆಯದಾಗಿದೆ. ಇಂಥ ಮಧ್ಯಸ್ಥಿಕೆದಾರರ ಯಾವುದೇ ವರದಿಗಳ ಅಥವಾ ಶಿಫಾರಸುಗಳ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ.

ಬಿಜೆಪಿ ನೇತೃತ್ವದ ಸರಕಾರ ಬೇಹುಗಾರಿಕೆ ದಳದ ಮಾಜಿ ಮುಖ್ಯಸ್ಥ ದಿನೇಶ್ವರ್ ಶರ್ಮಾ ಅವರನ್ನು ಸಂಧಾನಕಾರರನ್ನಾಗಿ ಕಳೆದ ವರ್ಷ ನೇಮಿಸಿತ್ತು. "ಜನರ ಭಾವನೆಗಳಿಗೆ ಸ್ಪಂದಿಸಿ ಹಿಂಸೆಯನ್ನು ತಗ್ಗಿಸದ ಹೊರತು ಯಾವುದೇ ರಾಜಕೀಯ ಮಾತುಕತೆ, ಯಾವುದೇ ರಾಜಕೀಯ ಪರಿಹಾರದ ಬಗ್ಗೆ ಯೋಚಿಸುವುದು ಕಷ್ಟ" ಎಂದು ಶರ್ಮಾ ಇತ್ತೀಚೆಗೆ ಹೇಳಿದ್ದಾರೆ.

ಕೇಂದ್ರ ಸರಕಾರದ ದೋಷಪೂರ್ಣ ತಿಳಿವಳಿಕೆಯನ್ನು ಇದು ಪ್ರತಿಬಿಂಬಿಸುತ್ತದೆ. ನೂರಾರು ಯುವಜನರು ಉಗ್ರಗಾಮಿ ಚಟುವಟಿಕೆಗಳತ್ತ ಹಿಂಡುಗಟ್ಟಿ ಸಾಗುತ್ತಿರುವ ಸನ್ನಿವೇಶದಲ್ಲಿ ಹಿಂಸೆಯನ್ನು ಕಡಿಮೆ ಮಾಡುವ ಪ್ರಯತ್ನಗಳು ಭದ್ರತಾ ಪಡೆಗಳು ಯುವ ಉಗ್ರಗಾಮಿಗಳನ್ನು ಕೊಲ್ಲುವಲ್ಲಿ ಪರ್ಯಾವಸಾನವಾಗುತ್ತಿವೆ ಹಾಗೂ ಅವರ 'ಹುತಾತ್ಮತೆ' ಇನ್ನಷ್ಟು ಯುವಜನರನ್ನು ಉಗ್ರಗಾಮಿತ್ವದತ್ತ ಸೆಳೆಯುತ್ತದೆ. ಶರ್ಮಾ ಪ್ರಸ್ತಾವಿಸುವ 'ಭಾವನೆಗಳು' ಭಾರತೀಯ ಪ್ರಭುತ್ವದತ್ತ ಜನರಲ್ಲಿ ಇರುವ ತೀರ ಆಳವಾದ ಪರಕೀಯ ಭಾವನೆಗೆ ಒಂದು ನಯವಾದ ಪದವಷ್ಟೇ.

ಕಾಶ್ಮೀರದ ಜನರು ಮತ್ತು ಕೇಂದ್ರದ ನಡುವೆ ಸ್ವಲ್ಪ ಮಟ್ಟಿಗಿನ ವಿಶ್ವಾಸವನ್ನು ಪುನರ್‌ಸ್ಥಾಪಿಸಲು ಕ್ರಮಗಳನ್ನು ಕೈಗೊಳ್ಳುವುದು ಒಂದು ಅರ್ಥಪೂರ್ಣ ಸಂವಾದ ಆರಂಭಿಸಲು ಅಗತ್ಯವಾದ ಹೆಜ್ಜೆಯಾಗಿದೆ. ಆ ಮೂಲಕ ಸಂವಾದಕ್ಕೆ ಪರಿಸ್ಥಿತಿಯನ್ನು ಸೃಷ್ಟಿಸಬಹುದಾಗಿದೆ.

ಇದಕ್ಕಾಗಿ ಅನೇಕ ಕ್ರಮಗಳು ಅಗತ್ಯ. ಕದನ ವಿರಾಮ ನಂತರದ ಪರಿಸ್ಥಿತಿಯ ಅವಲೋಕನಕ್ಕಾಗಿ ಜೂನ್ 7ರಂದು ಶ್ರೀನಗರಕ್ಕೆ ತೆರಳುವ ರಾಜನಾಥ ಸಿಂಗ್, ಮುಂದಿನ ನಿರ್ದಿಷ್ಟ ಸಮಯದ ವರೆಗೆ ಕದನ ವಿರಾಮವನ್ನು ವಿಸ್ತರಿಸಬೇಕು. ಇದುವರೆಗೆ ಅನುಸರಿಸಿದ ಅಮಾನುಷ ದಬ್ಬಾಳಿಕೆಯ ನೀತಿಯಲ್ಲಿ ಬದಲಾವಣೆ ತರುವ ಸಂದೇಶ ಸಾರುವ ಸಲುವಾಗಿ, ಕಲ್ಲು ತೂರುವವರು ಮತ್ತು ಯುವಜನರ ವಿರುದ್ಧ ಪೆಲ್ಲೆಟ್ ಗನ್ ಬಳಕೆ ಮಾಡುವುದಿಲ್ಲ ಎಂದು ಅಧಿಕಾರಿಗಳು ಪ್ರಕಟಿಸಬೇಕು. ಜೈಲುಗಳಲ್ಲಿ ಸಾಮಾನ್ಯ ಕ್ರಿಮಿನಲ್‌ಗಳಂತೆ ಪರಿಗಣಿಸಲಾಗುತ್ತಿರುವ ಶಬೀರ್ ಷಾನಂಥ ಪ್ರತ್ಯೇಕತಾವಾದಿ ನಾಯಕರನ್ನು ಬಿಡುಗಡೆ ಮಾಡಬೇಕು. ಭದ್ರತಾ ಪಡೆಗಳು ನಾಗರಿಕರ ಮೇಲೆ ಅತಿರೇಕವಾಗಿ ವರ್ತಿಸಿದ್ದರೆ ಅವುಗಳ ಬಗ್ಗೆ ತನಿಖೆ ನಡೆಸುವುದಾಗಿ ಹಾಗೂ ಸೂಕ್ತ ಕ್ರಮಕೈಗೊಳ್ಳುವುದಾಗಿ ಪ್ರಕಟಿಸಬೇಕು.

ಪ್ರತ್ಯೇಕತಾವಾದಿ ನಾಯಕತ್ವದ ಜೊತೆ ಮಾತುಕತೆ ನಡೆಸುವ ನಿರ್ದಿಷ್ಟ ಪ್ರಸ್ತಾವದ ಜೊತೆಜೊತೆಯಲ್ಲೇ ಇಂಥ ಕೆಲವು ಕ್ರಮಗಳನ್ನು ಪ್ರಕಟಿಸಿದರೆ ಆಗ ಒಂದು ರಾಜಕೀಯ ಸಂವಾದ ಆರಂಭಿಸಲು ಅವಕಾಶ ಸಿಗುತ್ತದೆ.

ಅದರೊಂದಿಗೆ, ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವ ಬಗ್ಗೆ ರಾಜನಾಥ ಸಿಂಗ್ ಮಾಡಿರುವ ಪ್ರಸ್ತಾವನೆಯನ್ನು ಮುಂದಕ್ಕೊಯ್ಯಬೇಕು. ಆದರೆ ಅದು ಷರತ್ತುಬದ್ಧವಾಗಿರಬಾರದು. ಅಂದರೆ ಗೃಹ ಸಚಿವರು ಹಾಗೂ ರಕ್ಷಣಾ ಸಚಿವರು ಹೇಳಿದಂತೆ ಮಾತುಕತೆ ಮತ್ತು ಭಯೋತ್ಪಾದನೆ ಒಟ್ಟಿಗೆ ಸಾಗಲಾರದು ಎಂಬ ನಿಲವು ಇರಬಾರದು. ಉಭಯ ದೇಶಗಳ ಭದ್ರತಾ ಸಲಹೆಗಾರರು ಭೇಟಿಯಾಗಿ ಮಾತುಕತೆ ನಡೆಸಲು ಸಾಧ್ಯವಾಗುವುದಾದರೆ, ಉಭಯ ಡಿಜಿಎಂಓಗಳು ಚರ್ಚೆ ನಡೆಸಲು ಸಾಧ್ಯವಾಗುವುದಾದರೆ ಪಾಕಿಸ್ತಾನದೊಂದಿಗೆ ಒಂದು ವಿಶಾಲವಾದ ಸಂವಾದವನ್ನು ನಡೆಸದಿರಲು ಯಾವುದೇ ಕಾರಣ ಇರಬಾರದು. ಮಾತುಕತೆಗಾಗಿ ವುಹಾನ್‌ನಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿಂಗ್‌ಪಿಂಗ್ ಜೊತೆ ಪ್ರಧಾನಿ ನರೇಂದ್ರ ಮೋದಿ ಒಂದು ಮಾರ್ಗೋಪಾಯ ಕಂಡುಕೊಂಡಂತೆ ಅದೇ ರೀತಿ ಪಾಕಿಸ್ತಾನ ವಿಚಾರದಲ್ಲೂ ಒಂದು ರಾಜತಾಂತ್ರಿಕ ಮುತುವರ್ಜಿ ಅಗತ್ಯವಾಗಿದೆ.

ಅನು: ವಿಶ್ವ

ತೂತುಕುಡಿ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು, ಹೈಕೋರ್ಟ್ ಉಸ್ತುವಾರಿಯಲ್ಲಿ ನಡೆಯಬೇಕು– ಯೆಚುರಿ



ಮೇ 22–23ರಂದು ತಮಿಳುನಾಡಿನ ತೂತುಕುಡಿಯಲ್ಲಿ ಪರಿಸರ ಮಾಲಿನ್ಯ ಮಾಡುತ್ತಿರುವ ಸ್ಟೆರ್ಲೈಟ್ ಕಾರ್ಖಾನೆಯನ್ನು ಮುಚ್ಚಬೇಕೆಂದು ಪ್ರತಿಭಟನೆ ಮಾಡುತ್ತಿದ್ದ ಜನಗಳ ಮೇಲೆ ಗೋಲೀಬಾರಿನಿಂದ 13 ಜನರ ಸಾವು ಸಂಭವಿಸಿರುವ ಘಟನೆಯ ತನಿಖೆಯನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳ ಪ್ರಭಾವದಿಂದ ಹೊರಗಿರುವ ಸಂಸ್ಥೆಯೊಂದರಿಂದ ನಡೆಸಬೇಕು, ತನಿಖೆಯನ್ನು ಸಿಬಿಐಗೆ ವಹಿಸಬೇಕು, ಅದು ಮದ್ರಾಸ್ ಹೈಕೋರ್ಟಿನ ಉಸ್ತುವಾರಿಯಲ್ಲಿ ಈ ತನಿಖೆ ನಡೆಸುವಂತಾಗಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಆಗ್ರಹಿಸಿದ್ದಾರೆ.



ಅವರು ಜೂನ್ 3ರಂದು ತೂತ್ತುಕುಡಿಗೆ ಬಂದು ಸಾವು ಉಂಟಾಗಿರುವ ಕುಟುಂಬಗಳನ್ನು ಮತ್ತು ಗಾಯಗೊಂಡಿರುವವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರನ್ನು ಉದ್ದೇಶಿಸಿ ಮಾತಾಡುತ್ತ ಈ ಆಗ್ರಹವನ್ನು ಮಾಡಿದ್ದಾರೆ.

ಬಹಳ ವರ್ಷಗಳಿಂದ ಹೋರಾಟ ಮಾಡುತ್ತ ಬಂದಿರುವ ಜನರು ತಮ್ಮ ಹೋರಾಟದ ಇತ್ತೀಚಿನ ಘಟ್ಟದ "100ನೇ ದಿನ ಜಿಲ್ಲಾಧಿಕಾರಿ ಕಚೆರಿಯ ಮುಂದೆ ಧರಣಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದರು. ಆದರೆ ಅವರು ಪೊಲಿಸ್ ಸ್ನೈಪರ್ ಬುಲೆಟ್‌ಗಳನ್ನು, ಕಂಡಲ್ಲಿ ಗುಂಡು ಆದೇಶವನ್ನು ಎದುರಿಸಬೇಕಾಯಿತು. ಆ ದಿನ ಜಿಲ್ಲಾ ಮುಖ್ಯಕಚೇರಿಯಲ್ಲಿ ಕಲೆಕ್ಟರ್ ಇರಲಿಲ್ಲ, ಪೋಲಿಸ್ ಸೂಪರಿಂಟೆಂಡೆಂಟರೂ ಇರಲಿಲ್ಲ ಎಂದು ನನಗೆ ತಿಳಿದು ಬಂತು. ಹಾಗಿದ್ದರೆ ಗೋಲೀಬಾರಿನ ಆದೇಶ ಕೊಟ್ಟವರಾರು?" ಎಂದು ಯೆಚುರಿ ಪ್ರಶ್ನಿಸಿದರು. ಕಲೆಕ್ಟರ್ ಈ ಅಧಿಕಾರವನ್ನು ಯಾರಿಗಾದರೂ ವಹಿಸಿದ್ದರೇ, ಅಥವ ಯಾರೋ ತಾವಾಗಿಯೇ ಈ ಅಧಿಕಾರವನ್ನು ವಹಿಸಿಕೊಂಡರೇ ಎಂದು ಅವರು ಕೇಳಿದರು.

"ಆ ಪ್ರತಿಭಟನೆಯಲ್ಲಿ ಯಾವುದೇ ಪಕ್ಷದ ಬಾವುಟಗಳು ಇರಲಿಲ್ಲ. ನಾವು ಕೂಡ ನಮ್ಮ ಪಕ್ಷದ ಬಾವುಟಗಳೊಂದಿಗೆ ಅಲ್ಲಿ ಇರಲಿಲ್ಲ. ಆದರೂ ನಮ್ಮ ಕಾರ್ಯಕರ್ತರ ಮೇಲೆ ಕೇಸುಗಳನ್ನು ಹಾಕಲಾಗಿದೆ. ಪ್ರತಿಭಟನಾಕಾರರ ಮೇಲೆ ಹೇರಿರುವ ಎಲ್ಲ ಕೇಸುಗಳನ್ನೂ ಹಿಂತೆಗೆದುಕೊಳ್ಳಬೇಕು" ಎಂದು ಅವರು ಆಗ್ರಹಿಸಿದರು.

ಜಿಲ್ಲಾ ಕಲೆಕ್ಟರ್ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರನ್ನು ತನಿಖೆ ಮುಗಿಯುವ ವರೆಗೆ ಅಮಾನತಿನಲ್ಲಿಡಬೇಕಾಗಿತ್ತು. ಬದಲಾಗಿ ಅವರನ್ನು ವರ್ಗಾಯಿಸಲಾಗಿದೆ. ಈ ಕಾರ್ಖಾನೆಯನ್ನು ನಡೆಸುವ ವೇದಾಂತ ಗುಂಪು ಮತ್ತು ವಿವಿಧ ಸರಕಾರಗಳ ನಡುವೆ 'ಬಲವಾದ ಸಂಬಂಧಗಳಿವೆ'ಯಾದ್ದರಿಂದ ವಿಪರೀತ ಪರಿಸರ ದೂಷಣೆ ಮಾಡುತ್ತಿರುವ ಈ ಕಾರ್ಖಾನೆಯನ್ನು ನಡೆಯಲು ಬಿಡಲಾಗಿದೆ. ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ ಇದರ ವಿಸ್ತರಣೆಗೆ ಒಪ್ಪಿಗೆ ನೀಡಿದ್ದು ಯಾಕೆ ಎಂದು ಯೆಚುರಿ ಪ್ರಶ್ನಿಸಿದ್ದಾರೆ. 13 ಜನರನ್ನು ಪೋಲೀಸ್ ಗುಂಡುಗಳು ಬಲಿ ತೆಗೆದುಕೊಂಡು, ನೂರಾರು ಜನಗಳನ್ನು ಗಾಯ ಗೊಳಿಸಿದ ನಂತರ ಮೇ 29ರಂದು ತಮಿಳುನಾಡು ಸರಕಾರ ಸ್ಥಾವರದ ವಿಸ್ತರಣೆಗೆ ಭೂಮಿ ಮಂಜೂರಾತಿಯನ್ನು ರದ್ದು ಮಾಡಿದೆ, ಈಗಿರುವ ಘಟಕಕ್ಕೆ ಬೀಗಹಾಕಿ ಅದನ್ನು ಶಾಶ್ವತವಾಗಿ ಮುಚ್ಚಬೇಕು ಎಂದು ಪರಿಸರ ಮಾಲಿನ್ಯ ಹತೋಟಿ ಮಂಡಳಿಗೆ ಆದೇಶ ನೀಡಿದೆ ಎಂದು ವರದಿಯಾಗಿದೆ.

ಬೆಳೆ ಸಾಲ ಮನ್ನಾದ ಪ್ರಯೋಜನ ಯಾರಿಗೆ ?

ಯು. ಬಸವರಾಜ್

ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆ–18ರ ಪೂರ್ವ ರೈತರ ಸಾಲ ಮನ್ನಾ ವಿಚಾರ ಗಮನ ಸೆಳೆದಿತ್ತು.ಅದಕ್ಕೆ ಮುಖ್ಯವಾದ ಕಾರಣವೆಂದರೆ,ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಳೆದ ಐದುವರ್ಷಗಳ ಅವಧಿಯಲ್ಲಿ ರೈತರ ಆತ್ಮಹತ್ಯೆಗಳು ಮತ್ತಷ್ಟುವ್ಯಾಪಕಗೊಂಡವು. ಸರಿ ಸುಮಾರು 6,000 ದಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡರು. ಕಳೆದ 2016ರಲ್ಲಿ ಸರಾಸರಿ ಪ್ರತಿ ದಿನ 5.68 ಅಂದರೇ 5 ಕ್ಕಿಂತ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ವಾಸ್ತವಿಕವಾಗಿ ಇವುಗಳು ಆತ್ಮಹತ್ಯೆಗಳಾಗಿರಲಿಲ್ಲ ಬದಲಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಪ್ರಾಯೋಜಿತ ವ್ಯವಸ್ಥಿತ ಕಗ್ಗೊಲೆಗಳಾಗಿದ್ದವು. ಕೆಲ ರೈತರ ಆತ್ಮಹತ್ಯೆಗಳಂತೂ ಹೃದಯ ವಿದ್ರಾವಕಗಳಾಗಿದ್ದವು. ಇವು ರಾಜ್ಯದ ಜನತೆಯ ಮನವನ್ನು ಕಲಕಿದ್ದವು. (ಕರ್ನಾಟಕದಲ್ಲಿ 2000 ದಿಂದ 2016 ವರೆಗಿನವರ್ಷವಾರು ರೈತರ ಆತ್ಮಹತ್ಯೆಯ ಅಂಕೆಸಂಖ್ಯೆಗಳನ್ನು ಕೋಷ್ಟಕದಲ್ಲಿ ಕೊಡಲಾಗಿದೆ. ಮೂರೂ ಪಕ್ಷಗಳ ಸರಕಾರಗಳ ವಿವಿಧ ಮುಖ್ಯಮಂತ್ರಿಗಳ ಆಳ್ವಿಕೆಯಲ್ಲಿ ರೈತರ ಆತ್ಮಹತ್ಯೆಗಳು ನಿರಂತರವಾಗಿ ಮುಂದುವರೆದಿವೆ ಎಂದು ಗಮನಿಸಬಹುದು)

ಸಾಲ ಮನ್ನಾ ಘೋಷಣೆಗಳಲ್ಲಿ ರೈತರನ್ನು ರಕ್ಷಿಸುವ ನಿಜ ಕಾಳಜಿಗಳಿರಲಿಲ್ಲ?!

ರಾಜ್ಯದ ಜನರ ಸಹಾನುಭೂತಿ ಮತ್ತು ಜನಚಳುವಳಿಗಳ ಒತ್ತಡಗಳ ಪರಿಣಾಮವಾಗಿ, ಸಿದ್ಧರಾಮಯ್ಯನವರು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಪರಿಹಾರವನ್ನು ಮೊದಲು 2 ಲಕ್ಷಕ್ಕೆ ನಂತರ 5 ಲಕ್ಷಕ್ಕೆ ಹೆಚ್ಚಿಸುವ ಒತ್ತಡಕ್ಕೊಳಗಾದರು. ಮಾತ್ರವಲ್ಲ, ಚುನಾವಣೆಯಲ್ಲಿ ಇದು ನಕಾರಾತ್ಮಕ ಪರಿಣಾಮ ಬೀರಬಹುದೆಂದು ಹೆದರಿ ಕೊನೆಯಲ್ಲಿ, ಒಲ್ಲದ ಮನಸ್ಸಿನಿಂದ ಸಹಕಾರ ಬ್ಯಾಂಕುಗಳ ರೈತರ 50,000 ರೂ.ಗಳ ಸಾಲ ಮನ್ನಾ ಘೋಷಿಸಿದರು. ಅದೇ ರೀತಿ, ಬಿಜೆಪಿ ನಾಯಕತ್ವವನ್ನು ಮತ್ತು ಕೇಂದ್ರ ಸರಕಾರವನ್ನು ರಾಷ್ಟ್ರೀಕೃತ ಬ್ಯಾಂಕುಗಳ ಸಾಲಮನ್ನಾ ಮಾಡಲು ಒತ್ತಾಯಿಸಿದರು. ಸಿದ್ಧರಾಮಯ್ಯನವರ ಸಾಲ ಮನ್ನಾ ಸಮರ್ಪಕವಾಗಿಲ್ಲದಿರುವುದರಿಂದ ರೈತರ ಆತ್ಮಹತ್ಯೆಗಳು ಮುಂದುವರೆದವು.

ಕಳೆದ 2018ರ ವಿಧಾನ ಸಭಾ ಚುನಾವಣೆಯಲ್ಲಿ ರೈತರ ಅಸಂತೃಪ್ತಿಯ ಲಾಭ ಪಡೆಯಲು ಜೆಡಿಎಸ್ ಪಕ್ಷ ರೈತರ ಎಲ್ಲಾ ಬಗೆಯ ಸಾಲವನ್ನು ತಾನು ಅಧಿಕಾರ ಪಡೆದ 24 ಗಂಟೆಯೊಳಗೆ ಒಟ್ಟು 53 ಸಾವಿರ ಕೋಟಿ ರೂ ಮನ್ನಾ ಮಾಡುವುದಾಗಿ ಘೋಷಿಸಿದರೆ, ತಾನು ಅಧಿಕಾರ ಪಡೆದ ಮೊದಲ ಸಚಿವ ಸಂಪುಟದಲ್ಲಿಯೇ ರೈತರು ಸಹಕಾರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಒಂದು ಲಕ್ಷ ರೂಗಳ ಸಾಲಮನ್ನಾ ಮಾಡುವುದಾಗಿ ಘೋಷಿಸಿತ್ತು. ವಾಸ್ತವಿಕವಾಗಿ, ಜನ ಬೆಂಬಲದ ಕೊರತೆಯಿಂದ ಜೆಡಿಎಸ್ ನಾಯಕತ್ವ ತಾನೆ ಸ್ವತಃ ಸರಕಾರ ರಚಿಸುವ ವಿಶ್ವಾಸವನ್ನು ಹೊಂದಿರಲಿಲ್ಲ. ಅದರ ನಾಯಕರೇ ಪ್ರಕಟಿಸಿದಂತೆ ಅವರಿಗೆ ಈ ಬಾರಿ ಜೆಡಿಎಸ್ ಕಿಂಗ್ ಮೇಕರ್ ಆಗ ಬಹುದೆಂಬ ಅಭಿಪ್ರಾಯವಿತ್ತು. ಹೀಗಾಗಿ ಜೆಡಿಎಸ್‌ಗೆ ಮರಳಿ ಜನ ಬೆಂಬಲ ಗಳಿಸಬೇಕಾಗಿತ್ತು. ಆ ಕಾರಣದಿಂದಲೇ ಸಾಲ ಮನ್ನಾ ಘೋಷಣೆ ಮಾಡಿತ್ತು.

ಬಿಜೆಪಿಗೂ, ಅದಕ್ಕಿಂತಲೂಭಿನ್ನವಾದ ಉದ್ದೇಶವೇನೂ ಇರಲಿಲ್ಲ. ಬಿಜೆಪಿ ಪಕ್ಷಕ್ಕೆ ರೈತರ ಸಾಲಮನ್ನಾ ಮಾಡ ಬೇಕೆಂದಿದ್ದರೇ ಅದಕ್ಕೆ ಅಧಿಕಾರವೇನೂ ಬೇಕಿರಲಿಲ್ಲ, ಅದಕ್ಕೆ ನಿಜವಾದ ಉದ್ದೇಶವಿದ್ದಲ್ಲಿ ತನ್ನ ಕೇಂದ್ರ ಸರಕಾರದ ಮೂಲಕ ಕ್ರಮವಹಿಸಬಹುದಾಗಿತ್ತು. ಈ ಕುರಿತು ಎಂದೂ ಸ್ವತಃ ಆಗಲೀ ಅಥವಾ ದೇಶದಾದ್ಯಂತ ರೈತ ಚಳುವಳಿಗಳು ಒತ್ತಾಯಿಸಿದಾಗಾಗಲೀ ಕೇಂದ್ರ ಸರಕಾರ ತಲೆ ಕೆಡಿಸಿಕೊಳ್ಳಲಿಲ್ಲ. ಮಾತ್ರವಲ್ಲ, ಶ್ರೀ ಯೆಡಿಯೂರಪ್ಪನವರು ಕಳೆದ ಬಾರಿ ಚುನಾವಣೆಯಲ್ಲಿ ಸಾಲ ಮನ್ನಾ ಮಾಡುವುದಾಗಿ ಹೇಳಿ ಅಧಿಕಾರಕ್ಕೆಬಂದ ನಂತರ ಸಾಲ ಮನ್ನಾ ಮಾಡಲು ತಾನೇನು ಹಣ ಮುದ್ರಿಸುವ ಪ್ರಿಂಟಿಂಗ್ ಮೆಷೀನ್ ಇಟ್ಟಿಲ್ಲವೆಂದಿದ್ದು ಇನ್ನೂ ಜನ ಮರೆತಿರಲಿಲ್ಲ.

ಹೀಗಾಗಿ, ವಾಸ್ತವಿಕವಾಗಿ ತಾನು ಸ್ವತಂತ್ರವಾಗಿ ಅಧಿಕಾರ ಗಳಿಸಲು ಸಾದ್ಯವಿಲ್ಲವೆಂಬ ಹಿನ್ನೆಲೆಯಲ್ಲಿ ಜೆಡಿಎಸ್ ಕನಿಷ್ಟ ಕಿಂಗ್ ಮೇಕರ್ ಆದರೂ ಆಗಬೇಕೆಂಬ ಹಿನ್ನೆಲೆಯಲ್ಲಿ ಸಾಲಮನ್ನಾವನ್ನು ಘೋಷಿಸಿತು. ಅದೇ ರೀತಿ, ತಾವು ಅಧಿಕಾರ ಹಿಡಿಯುವುದು ಕಷ್ಟ ಸಾದ್ಯವಿರುವುದರಿಂದ ಈ ಪ್ರಕಟಣೆಯಿಂದ ಜನ ಬೆಂಬಲಗಳಿಕೆ ಮಾಡಬಹುದೆಂಬ ಉದ್ದೇಶದಿಂದ ಬಿಜೆಪಿ ರೈತರ ಒಂದು ಲಕ್ಷದ ವರೆಗಿನ ಸಾಲ ಮನ್ನಾ ಘೋಷಿಸಿತು.

ಕೃಪೆ: ಪಿ. ಮಹಮ್ಮದ್, ವಿ.ಕ.



> ಬದಲಾದ ಸ್ವರೂಪದ ವ್ಯವಸಾಯದಲ್ಲಿ ತೊಡಗಿದ ಈ ಜನ ಸಮುದಾಯಕ್ಕೆ ಬಹುತೇಕ ಸ್ವಂತ ಭೂಮಿಯೂ ಇಲ್ಲ, ಗೇಣಿಯಲ್ಲಿ ತೊಡಗಿದವರಿಗೆ ಸಾಂಸ್ಥಿಕ ಸಾಲ ಸೌಲಭ್ಯವೂ ಇಲ್ಲ. ಅವರನ್ನು ಸರಕಾರ ಗುರುತಿಸಿ ನೋಂದಣಿಯನ್ನೂ ಮಾಡಿಲ್ಲ. ಗ್ರಾಮೀಣ ಪ್ರದೇಶದ ವ್ಯವಸಾಯದಲ್ಲಿ ತೊಡಗಿ ಭಾದಿತರಾದ ನಿಜವಾದ ಸಾಲಗಾರರೆಂದರೇ ಇವರಾಗಿದ್ದಾರೆ. ಆದ್ದರಿಂದ ಈ ಸಾಂಸ್ಥಿಕ ಸಾಲಮನ್ನಾಗಳಿಂದ ಗ್ರಾಮೀಣ ಪ್ರದೇಶದ ಈ ಬಡವರಿಗೆ ಬಹುತೇಕ ಮಟ್ಟಿಗೆ ಪ್ರಯೋಜನವಿಲ್ಲ. ವ್ಯವಸಾಯದಲ್ಲಿ ತೊಡಗಿ, ಅದರಿಂದ ವಿವಿಧ ಕಾರಣಗಳಿಗಾಗಿ ನಷ್ಟ ಉಂಟಾಗಿ, ಬಾಧಿತನಾದ ಈ ಬಡ ರೈತನಿಗೆ, ಕೂಲಿಕಾರ, ಕಸುಬುದಾರ, ಗೇಣಿ/ಗುತ್ತಿಗೆ ಬೇಸಾಯದಾರನಿಗೆ ಸಾಲ ಪರಿಹಾರ ದೊರೆಯ ಬೇಕಾದುದು ಮತ್ತು ಅಂತಹವರು ಸಾಲ ಬಾಧೆಯಿಂದ ಮುಕ್ತರನ್ನಾಗಿಸುವುದು ಅಗತ್ಯವಿದೆ.ರೈತರನ್ನು ಋಣಮುಕ್ತರನ್ನಾಗಿಸುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ ಮತ್ತು ರೈತರ ಆತ್ಮಹತ್ಯೆಗಳನ್ನು ತಡೆದ ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಈ ಹಿಂದಿನ ಸರಕಾರದ ಋಣ ಮುಕ್ತ ಕಾಯ್ದೆ ನಮಗೆ ಮಾದರಿಯಾಗಿದೆ.

ಇಲ್ಲಿ ಕಾಂಗ್ರೆಸ್ ಸೇರಿದಂತೆ ಈ ಮೂರು ಪಕ್ಷಗಳಿಗೆ ಅವುಗಳ ಅಧಿಕಾರದ ಆಸೆಗಳು ಕಂಡು ಬರುತ್ತವೆಯೆ ಹೊರತು ರೈತರ ಸಾಲಮನ್ನಾದ ಕುರಿತು ನಿಜ ಕಾಳಜಿ ಕಂಡು ಬರಲಿಲ್ಲ.

ಹೊಸ ಸನ್ನಿವೇಶ –ಅಧಿಕಾರಕ್ಕಾಗಿ ಮರಳಿ ಸಾಲ ಮನ್ನಾ ಮುನ್ನೆಲೆಗೆ :

ಈ ವಿಧಾನ ಸಭಾ ಚುನಾವಣೆಯಲ್ಲಿ ಅಸಂತೃಪ್ತ ಜನತೆ ಯಾವುದೇ ಒಂದು ಪಕ್ಷಕ್ಕೆ ಬಹು ಮತ ನೀಡದ ಕಾರಣ, ರಾಜ್ಯದಲ್ಲಿ ಹೊಸ ಸನ್ನಿವೇಶ ಉಂಟಾಯಿತು, ಕಾಂಗ್ರೆಸ್ ಪಕ್ಷ ತನ್ನ ವಿರುದ್ಧ ಜನಮತ ನೀಡಿದರೂ, ಈ ಹೊಸ ಸನ್ನಿವೇಶವನ್ನು ಉಪಯೋಗಿಸಿಕೊಂಡು ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು, ಚುನಾವಣೋತ್ತರ ಮೈತ್ರಿಯನ್ನು ಜೆಡಿಎಸ್‌ನೊಂದಿಗೆ ಹೊಂದಲು ಇಚ್ಛಿಸಿ,ಅದಕ್ಕೆ ಬೇಷರತ್ ಬೆಂಬಲಘೋಷಿಸಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಮೈತ್ರಿ ಸರಕಾರ ರಚಿಸಲು ಮುಂದಾಯಿತು. ಬಿಜೆಪಿ ತನಗೆ ವಾಸ್ತವಿಕವಾಗಿ ಅಗತ್ಯ ಬಹುಮತವಿಲ್ಲದಿದ್ದರೂ, ಅತಿಹೆಚ್ಚು ಸ್ಥಾನ ಪಡೆದ ಪಕ್ಷವೆಂಬುದನ್ನು ಮುಂದೆ ಮಾಡಿ, ಹೇಗಾದರೂ ಮಾಡಿ ತಾನು ಅಧಿಕಾರ ಹಿಡಿಯಲೇ ಬೇಕೆಂದು,ಕೇಂದ್ರ ಸರಕಾರದಮತ್ತು ರಾಜ್ಯಪಾಲರ ಅಧಿಕಾರ ದುರುಪಯೋಗ ಮಾಡಿಕೊಂಡು, ಶ್ರೀ ಯೆಡಿಯೂರಪ್ಪನವರ ಮೂಲಕ ಸರಕಾರ ರಚನೆಗೆ ಮುಂದಾಯಿತು. ಅಧಿಕಾರ ದುರುಪಯೋಗ ಮತ್ತು ಹಣ ಹಾಗೂ ಮಂತ್ರಿಗಿರಿ ನೀಡುವ ಅಮಿಷಗಳನ್ನು ಒಡ್ಡಿ ಅನೈತಿಕ ಆಪರೇಷನ್ ಕಮಲದಮೂಲಕ ವಿರೋಧ ಪಕ್ಷಗಳ ಶಾಸಕರನ್ನು ಸೆಳೆದು ಬಹುಮತ ಸಾಬೀತಿಗೆ ಯತ್ನಿಸಿತು.ಬಹುಮತ ಸಾಬೀತು ಯಶಸ್ವಿಯಾಗುವ ಲಕ್ಷಣ ಕಾಣದೇ ಹೋದಾಗ, ಮುಂಬರುವ ದಿನಗಳಲ್ಲಿ ರೈತರ ಬೆಂಬಲ ಮತ್ತು ರಾಜ್ಯದ ಮತದಾರರಅನುಕಂಪಗಳಿಸುವ ತಂತ್ರ ಹೂಡಿ, ತಮಗೆ ಬಹುಮತವಿಲ್ಲ ಮತ್ತು ತಮ್ಮಿಂದ ಸಾಲಮನ್ನಾ ಸಾದ್ಯವಿಲ್ಲವೆಂದು ಗೊತ್ತಿದ್ದರೂ, ಒಂಟಿ ಸದಸ್ಯರ ಸಚಿವ ಸಂಪುಟ ಸಭೆ ನಡೆಸಿ, ಸಹಕಾರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಒಂದು ಲಕ್ಷ ರೂ ವರೆಗಿನ ಸಾಲ ಮನ್ನಾ ಮಾಡಿರುವುದಾಗಿ ಮುಖ್ಯ ಮಂತ್ರಿ ಯೆಡಿಯೂರಪ್ಪನವರ ಮೂಲಕ ಪ್ರಕಟಿಸಿತು. ನಿಜವಾಗಲೂ, ಇದೊಂದು ತಮಾಷೆಯ ಸಂಗತಿಯಾಗಿತ್ತು. ಆದಾಗಲೂ ಇದು ರೈತರ ಸಾಲಮನ್ನಾದ ಪ್ರಶ್ನೆಯನ್ನು ಮರಳಿ ಮುನ್ನೆಲೆಗೆ ತಂದಿತು.

ಮುಂದೆ 224 ಸದಸ್ಯ ಬಲದ ವಿಧಾನ ಸಭೆಯಲ್ಲಿ ಕೇವಲ 38 ಸ್ಥಾನಗಳನ್ನು ಮಾತ್ರ ಪಡೆದ ಜೆಡಿಎಸ್ ಅನಿರೀಕ್ಷಿತವಾಗಿ ಕಾಂಗ್ರೆಸ್ ನೀಡಿದ ಬೇಷರತ್ ಬೆಂಬಲದೊಂದಿಗೆ ಮುಖ್ಯಮಂತ್ರಿ ಸ್ಥಾನ ಪಡೆಯಿತು. ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಶ್ರೀ ಹೆಚ್.ಡಿ. ಕುಮಾರ ಸ್ವಾಮಿಯವರಿಗೆ, ಯೆಡಿಯೂರಪ್ಪನವರು ಜೆಡಿಎಸ್ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಅಧಿಕಾರ ಸ್ವೀಕರಿಸಿದ 24 ಗಂಟೆಯೊಳಗೆ ರೈತರ ಎಲ್ಲ ಬಗೆಯ 53,000 ಕೋಟಿ ರೂಗಳ ಸಾಲವನ್ನು ಮನ್ನಾ ಮಾಡುವಂತೆ ಒತ್ತಾಯಿಸಿದ್ದಾರೆ. ಇಲ್ಲದಿದ್ದಲ್ಲಿ ತಾವು ಚಳುವಳಿಯನ್ನು ನಡೆಸುವುದಾಗಿ ಗುಟುರು ಹಾಕಿದ್ದಾರೆ. ಈ ಗುಟುರು ಹಾಕುವುದರ ಹಿಂದೆ ಮುಖ್ಯಮಂತ್ರಿ ಶ್ರೀ ಕುಮಾರ ಸ್ವಾಮಿ ಆ ಪ್ರಮಾಣದಲ್ಲಿ ರೈತರ ಸಾಲ ಮನ್ನಾ ಮಾಡಲು ಸಾದ್ಯವಿಲ್ಲ. ಹೀಗಾಗಿ, ಈ ಪ್ರಶ್ನೆಯನ್ನೆತ್ತಿಕೊಂಡು ರೈತರ ವಿಶ್ವಾಸವನ್ನು ಗಳಿಸುತ್ತೇನೆಂಬ ಕುಹಕದ ದ್ವನಿಯು ಸ್ಪಷ್ಟವಾಗಿತ್ತು. ವಿಧಾನಸಭಾ ಅದಿವೇಶನದ ವಿಶ್ವಾಸ ಮತದಿಂದ ಹೊರ ನಡೆಯುವ ಮುಂಚೆ ಹೆಚ್.ಡಿ.ಕುಮಾರ ಸ್ವಾಮಿಯವರು ತಮಗೆ ಜನತೆ ಬಹುಮತ ನೀಡಿಲ್ಲದಿರುವಾಗ ಅದು ಹೇಗೆ ಸಾಲ ಮನ್ನಾ ಮಾಡುವುದೆಂದ ಹೇಳಿಕೆಯನ್ನು ಅಸ್ತ್ರ ಮಾಡಿಕೊಂಡು ಯೆಡಿಯೂರಪ್ಪನವರು ಕರ್ನಾಟಕ ಬಂದ್‌ಗೂ ಮುಂದಾದರು. ವಿಶ್ವಾಸ ಮತದ ಚರ್ಚೆಗೆ ಉತ್ತರಿಸುತ್ತಾ ಮುಖ್ಯಮಂತ್ರಿಗಳು ಪುನಃ ಸಾಲಮನ್ನಾಕ್ಕೆ ತಾವು ಬದ್ಧವೆಂದು ಘೋಷಿಸಿದ್ದಾರೆ. ಆಮೂಲಕ ಬಿಜೆಪಿ ಅದರ ಲಾಭ ಪಡೆಯಲಾಗದೆಂದು ಹೇಳಿದ್ದಾರೆ. ಮಾತ್ರವಲ್ಲ, ರಾಜ್ಯ ಮಟ್ಟದಲ್ಲಿ ರೈತ ಸಂಘಗಳಮುಖಂಡರ, ಪ್ರಗತಿಪರ ರೈತರ, ವಿರೋಧ ಪಕ್ಷಗಳ ಮುಖಂಡರ ಸಭೆ ನಡೆಸಿ,ಸಣ್ಣ/ಅತಿ ಸಣ್ಣ ರೈತರ ಸಹಕಾರ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಬೆಳೆ ಸಾಲ ಮನ್ನಾ ಮೊದಲು ಮಾಡುವುದಾಗಿ ಘೊಷಿಸಿದ್ದಾರೆ. ಅದೇ ರೀತಿ, ಟ್ರಾಕ್ಟರ್ ಮುಂತಾದ ಉಳಿದ ಸಾಲ ಮನ್ನಾ ಮಾಡಲು ಸಮಯ ಕೇಳಿದ್ದಾರೆ. ಆ ಸಭೆಯು ಮುಖ್ಯಮಂತ್ರಿಗಳಿಗೆ ಬೆಂಬಲ ವ್ಯಕ್ತ ಪಡಿಸಿದೆ. ಈ ಎಲ್ಲದರ ಮೂಲಕ ಮುಖ್ಯಮಂತ್ರಿಕುಮಾರ ಸ್ವಾಮಿಯವರು ರೈತರ ಸಾಲ ಮನ್ನಾ ಮಾಡಲೇಬೇಕಾದ ಒತ್ತಡಕ್ಕೊಳಗಾಗಿದ್ದಾರೆ.

ಇಲ್ಲಿಯವರೆಗೆ, ಇದುವರೆಗೆ ಸಾಲಮನ್ನಾ ಮಾಡಿದ ಎಲ್ಲಾ ಸರಕಾರಗಳು ಕೇವಲ ಸಹಕಾರ ಬ್ಯಾಂಕುಗಳ ಸಾಲ ಮನ್ನಾ ಮಾಡುತ್ತಾಬಂದಿವೆ. ಅದೇ ರೀತಿ, ರಾಷ್ಟ್ರೀಕೃತ ಬ್ಯಾಂಕುಗಳ ಸಾಲಮನ್ನಾ ಮಾಡುವ ವಿಚಾರವನ್ನು ಕೇಂದ್ರ ಸರಕಾರಕ್ಕೆ ಬಿಡುತ್ತಾ ಬಂದಿವೆ. ಆದರೇ ಈ ಬಾರಿ ರಾಷ್ಟ್ರೀಕೃತ ಬ್ಯಾಂಕುಗಳ ಸಾಲಮನ್ನಾ ಮಾಡುವುದಾಗಿ ಹೇಳಲಾಗಿದೆ. ಮುಖ್ಯಮಂತ್ರಿಗಳು ರೈತರ ಸಭೆಯಲ್ಲಿಯಾರ್‍ಯಾರ ಸಾಲಮನ್ನಾ ಮಾಡ ಬೇಕೆಂಬ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಎತ್ತಿದ್ದಾರೆ. ನಿಜ ಅದೊಂದು ಸರಿಯಾದ ಪ್ರಶ್ನೆಯಾಗಿದೆ. ನಿಜ ಸಾಲಬಾದಿತರನ್ನು ಗುರುತಿಸುವುದು ಮತ್ತು ಅವರ ಸಾಲ ಮನ್ನಾ ಮಾಡುವುದು ಅಗತ್ಯವಾಗಿ ಆಗಬೇಕು. ಅದಾಗ ಬೇಕೆಂದರೇ ಅದು ಹೇಗೆ ? ಈಗ ಸಾಲ ಮನ್ನಾ ಮಾಡುವ ವಿಧಾನ ಸರಿ ಇದೆಯೇ ? ಅದರಲ್ಲಿನ ಲೋಪಗಳನ್ನು ಸೋರಿಕೆಗಳನ್ನು ತಡೆಯುವ ಬಗೆ ಹೇಗೆ ? ಈ ಪ್ರಶ್ನೆಗಳಿಗೆ ಸರಕಾರ ಮತ್ತು ರೈತರು ಸರಿಯಾದ ಉತ್ತರಗಳನ್ನು ಕಂಡು ಕೊಳ್ಳಬೇಕಾಗುತ್ತದೆ.

ಸಹಕಾರ / ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಪಡೆದವರಾರು? ಸಾಲ ಮನ್ನಾದ ಲಾಭ ಪಡೆದವರಾರು?

ನಮಗೀಗಾಲೇ ತಿಳಿದಿರುವಂತೆ, ಬಹಳ ಹಿಂದೆಯೇ ಸಣ್ಣ/ಅತಿಸಣ್ಣ ರೈತರಿಗೆ ಸಹಕಾರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು ಸಾಲನೀಡುವುದನ್ನು ನಿಲ್ಲಿಸಿವೆ. ಅದಾಗಲೇ ಅಲ್ಲಿ ಸಾಲ ಪಡೆದು,ಅದನ್ನು ತೀರಿಸಲಾಗದೇ ಡೀಫಾಲ್ಟರ್‌ಗಳೆಂದು ಬಹುತೇಕರು ಹೊರದಬ್ಬಲ್ಪಟ್ಟಿದ್ದಾರೆ. ಇಲ್ಲವೇ ಒಂದು ಬಾರಿ ಪರಿಹಾರದ ಯೋಜನೆ (ಒನ್ ಟೈಮ್ ಸೆಟಲ್‌ಮೆಂಟ್)ಗೊಳಗಾಗಿ ಹೊಸ ಸಾಲ ಅವುಗಳಿಂದ ಪಡೆಯುತ್ತಿಲ್ಲ. ಮಾತ್ರವಲ್ಲ, ಅದಾಗಲೇ ಬ್ಯಾಂಕುಗಳು ಗ್ರಾಮೀಣ ಸಾಲನೀಡಿಕೆಯನ್ನು ಕಡಿತ ಮಾಡಿವೆ. ನೀಡುವ ಸಾಲವನ್ನು ದೊಡ್ಡಮೊತ್ತದಲ್ಲಿ ಪಡೆವ ಕೆಲವೇ ಶ್ರೀಮಂತರಿಗೆ ನೀಡುತ್ತಿವೆ.

ಸಾಲನೀಡಿಕೆ ನೀತಿಯು ಸರಿಯಾಗಿಲ್ಲ. ಪ್ರತಿವರ್ಷ ಮೂರು ಲಕ್ಷ ರೂ. ಗಳವರೆಗೆ ಪಡೆದಸಾಲವನ್ನು ಮರು ಪಾವತಿ ಮಾಡುವವರಿಗೆ ಮಾತ್ರ ಬಡ್ಡಿಯನ್ನು ಬಿಡುವ ಯೋಜನೆಯನ್ನು ರಾಜ್ಯ ಸರಕಾರ ಜಾರಿಗೊಳಿಸುತ್ತದೆ.ಅದೇ ರೀತಿ, ರಾಷ್ಟ್ರೀಕೃತ ಬ್ಯಾಂಕುಗಳಲ್ಲೂ ಕೃಷಿಸಾಲಕ್ಕೆ ಬಡ್ಡಿ ರಿಯಾಯಿತಿಯನ್ನು ನೀಡಲಾಗುತ್ತಿದೆ. ಅದೆಲ್ಲವುಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿ ಮಾಡದಿದ್ದಲ್ಲಿ, ಅವರು ಪೂರ್ಣ ಪ್ರಮಾಣದ ಬಡ್ಡಿ ಮತ್ತು ಚಕ್ರಬಡ್ಡಿಯೊಂದಿಗೆ ಸಾಲದ ಮೊತ್ತವನ್ನು ಮುಂದೆ ಪಾವತಿಸಬೇಕಾಗುತ್ತದೆ. ಈ ಯೋಜನೆಯು ಬಡರೈತರಿಗೆ ಸಹಕಾರವಾಗುತ್ತದೆಂಬಂತೆ ಮೇಲ್ನೋಟಕ್ಕೆ ಕಂಡರೂ, ಬೆಳೆ ನಷ್ಟದಿಂದಾಗಿ, ಸಾಲ ಮರುಪಾವತಿ ಮಾಡಲಾಗದವರು ಮತ್ತು ಆ ಬಡ್ಡಿ ಸಹಾಯ ಪಡೆಯಲೇ ಬೇಕೆಂಬುವವರು ಕಡ್ಡಾಯವಾಗಿ ಮರುಪಾವತಿ ಸಾಲನೀಡಿಕೆಗಾಗಿ,ಅಲ್ಲಿ ಕಾದು ಕುಳಿತಿರುವ ಬಡ್ಡಿ ಸಾಹುಕಾರರ ನೆರವು

ಪುಟ 11 ಕ್ಕೆ



ಅಬ್ಬರದ 'ಪ್ರಧಾನ ಮಂತ್ರಿ ಯೋಜನಾ'ಗಳು ವಂಚನೆಯ ಕಥನಗಳ 'ಪ್ರಧಾನ' ಲಾಂಛನಗಳು

"ಬಡವರಿಗೆ ತಲುಪುತ್ತಿರುವ ಅಭಿವೃದ್ಧಿ–ಎಲ್ಲರಿಗೂ ಉತ್ತಮ ಜೀವನದ ಭರವಸೆ" ಇದು ಮೇ 26ರಂದು ತನ್ನ ನಾಲ್ಕು ವರ್ಷಗಳ ಅಬ್ಬರದ ಪ್ರಚಾರದ ಮುಂದುವರೆದ ಭಾಗವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ಮುಖಪುಟದ ವರ್ಣರಂಜಿತ ಜಾಹೀರಾತಿನ ಒಂದು ಶಿರೋನಾಮೆ.

ಕಳೆದ ನಾಲ್ಕು ವರ್ಷಗಳಲ್ಲಿ 'ಪ್ರಧಾನ ಮಂತ್ರಿ' ಹೆಸರು ಹೊತ್ತ ಹಲವು 'ಯೋಜನಾ'ಗಳನ್ನು ಪ್ರಕಟಿಸಲಾಯಿತು–ಜನಧನ, ಮುದ್ರಾ, ಉಜ್ವಲಾ, ಕೌಶಲ್ ವಿಕಾಸ್, ಆವಾಸ್ ಇತ್ಯಾದಿ ಇತ್ಯಾದಿ.

ಇವುಗಳಲ್ಲಿ ಪ್ರಧಾನ ಮಂತ್ರಿ ಜನಧನ ಯೋಜನೆ ಮತ್ತು ಪ್ರಧಾನ ಮಂತ್ರಿ ಮುದ್ರಾ ಯೋಜನೆಯ ಬಗ್ಗೆ ತುಸು ವಿವರವಾಗಿ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಇವೆರಡರ ಪ್ರಚಾರಕ್ಕೆ ಕೋಟಿಗಟ್ಟಲೆ ರೂ. ಖರ್ಚು ಮಾಡಿದರೂ ಅವು ಜನಸಾಮಾನ್ಯರನ್ನು ತಲುಪದ, ಈಡೇರದ ಭರವಸೆಗಳಾಗಿಯೇ ಉಳಿದವು ಎಂಬುದನ್ನು ಸರಕಾರದ ಅಂಕೆ–ಸಂಖ್ಯೆಗಳೇ ಹೇಳುತ್ತಿವೆ ಎಂಬುದನ್ನು ನೋಡಿದ್ದೀರಿ.

'ಪ್ರಧಾನ ಮಂತ್ರಿ' ಹೆಸರು ಹೊತ್ತಿರುವ ಈ ಎಲ್ಲ ಯೋಜನೆಗಳ ಒಂದು ಸಮಾನ ಅಂಶವೆಂದರೆ ಇವೆಲ್ಲವೂ ಈ ಸರಕಾರದ ವಂಚನೆಯ ಕಥನಗಳ ಪ್ರಧಾನ ಉದಾಹರಣೆಗಳು ಎಂದು ಜೂನ್ 1 ರಂದು ಸಿಪಿಐ(ಎಂ) ಪ್ರಕಟಪಡಿಸಿದ ನಾಲ್ಕು ಕಿರು ಹೊತ್ತಿಗೆಗಳಲ್ಲಿ ಮೊದಲನೆಯದು ವರ್ಣಿಸುತ್ತದೆ. ಅದು ಗುರುತಿಸಿರುವ ಇತರ ಸಮಾನಾಂಶಗಳು ಹೀಗಿವೆ:

* ಯುಕ್ತಾಯುಕ್ತತೆ ಇಲ್ಲದ, ಅರೆಬೆಂದ ಕಣ್ಣೋಟಗಳು* ಭಾರೀ ಭಾರೀ ಆಶ್ವಾಸನೆಗಳು * ವ್ಯಾಪಕ ಪ್ರಮಾಣದ ಪ್ರಾಯೋಜನೆ/ಪ್ರಚಾರ
* ತಪ್ಪುದಾರಿಗೆಳೆಯುವ ಅಂಕಿ–ಅಂಶಗಳು ಮತ್ತು 'ಗುರಿ ಸಾಧನೆ'ಗಳು * ಅಂತಿಮವಾಗಿ, ವಿಫಲತೆ–ದೇಶದ ಭವಿಷ್ಯಕ್ಕೆ ಕಳಂಕ

ಒಟ್ಟು ಸಾರಾಂಶವೆಂದರೆ–ಈ 'ಪ್ರಧಾನ ಮಂತ್ರಿ' 'ಯೋಜನಾ'ಗಳು ಮೋದಿ ಸರಕಾರದ ಕಾರ್ಯಹೀನತೆಯ, ವಿಫಲತೆಯ ಲಾಂಛನಗಳು.

ಈ ಸಂಚಿಕೆಯಲ್ಲಿ ಈ 'ಪ್ರಧಾನ ಮಂತ್ರಿ' ಸರಣಿಯ ಇನ್ನು ಮೂರು 'ಯೋಜನಾ'ಗಳು ಈ ನಾಲ್ಕು ವರ್ಷಗಳಲ್ಲಿ ಸಾಧಿಸಿದ್ದೇನು ಎಂಬುದರ ಒಂದು ಸ್ಥೂಲ ಚಿತ್ರವನ್ನು ನೋಡಿ:

'ಪ್ರಧಾನ ಮಂತ್ರಿ ಉಜ್ವಲಾ ಯೋಜನಾ'ದಿಂದಾಗಿ 3.8 ಕೋಟಿ ಕುಟುಂಬಗಳು ಹೊಗೆಮುಕ್ತ ಜೀವನ ಹೊಂದಿವೆ ಎಂದು ಹೇಳುತ್ತದ ಮೇ 26 ರ ಸರಕಾರೀ ಜಾಹೀರಾತು.

ವಾಸ್ತವ ಸಂಗತಿಯೇನು? 2015ರಲ್ಲಿ ಈ ಯೋಜನೆಯ ರೂಪುರೇಷೆಗಳನ್ನು ನಿರ್ಧರಿಸಲು ಒಂದು ಸರ್ವೆ ನಡೆಸಿತ್ತು. ಆದರೆ ಆ ಸರ್ವೇಯ ಫಲಿತಾಂಶಗಳಿಗೆ ಕಾಯದೆ ಮೇ 2016ರಲ್ಲಿ ಎರಡನೇ 'ವಾರ್ಷಿಕೋತ್ಸವ'ದಂದು ತರಾತುರಿಯಿಂದ ಆರಂಭಿಸಲಾಯಿತು.

ಇದಕ್ಕೆ ಸರಕಾರ ಸಬ್ಸಿಡಿ ಕೊಟ್ಟ ರೀತಿ ಮತ್ತು ಅದನ್ನು ಜಾರಿ ಮಾಡಿದ ರೀತಿ ಇಡೀ ಯೋಜನೆಯನ್ನು ನಿರರ್ಥಕಗೊಳಿಸಿದೆ.

ಅಡುಗೆ ಅನಿಲ(ಎಲ್‌ಪಿಜಿ) ಸಂಪರ್ಕ ಮತ್ತು ಅದನ್ನು ಅಳವಡಿಸುವ ವೆಚ್ಚವಾಗಿ ಸರಕಾರ ಸಾರ್ವಜನಿಕ ವಲಯದ ಎಲ್‌ಪಿಜಿ ಪೂರೈಸುವ ಕಂಪನಿಗಳಿಗೆ 1600ರೂ. ಕೊಡುತ್ತದೆ. ಫಲಾನುಭವಿ ಸ್ಟೋವ್ ಮತ್ತು ಅನಿಲ ಸಿಲಿಂಡರ್‌ಗೆ 1500ರೂ. ಕೊಡಬೇಕು. ಅದನ್ನು ಕೊಡಲಾರದವರಿಂದ ನಾಲ್ಕು ಅಥವ ಐದು ಕಂತುಗಳಲ್ಲಿ ಸಿಲಿಂಡರ್‌ಗಳಿಗೆ ಕೊಡುವ ಸಬ್ಸಿಡಿಯಲ್ಲಿ ವಸೂಲಿ ಮಾಡಲಾಗುತ್ತದೆ.

ಅಂದರೆ ಇಲ್ಲಿ ಅಡುಗೆ ಅನಿಲ ಮತ್ತು ಅದನ್ನು ಬಳಸುವ ಸ್ಟೋವ್ ಪುಕ್ಕಟೆಯಲ್ಲ, ಸಂಪರ್ಕ ಮಾತ್ರವೇ ಪುಕ್ಕಟೆ ಎಂಬುದನ್ನು ಗಮನಿಸಬೇಕು.

ಸಂಪರ್ಕ ಪಡೆದವರಲ್ಲಿ 85% ಮಂದಿಗೆ ಒಂದೇ ಕಂತಿನಲ್ಲಿ ಸ್ಟೋವ್ ಮತ್ತು ಸಿಲಿಂಡರಿನ ಬೆಲೆ ತೆರಲಾಗಲಿಲ್ಲ, 85% ಮಂದಿ ಕಂತಿನಲ್ಲಿ ಪಾವತಿಯನ್ನು ಆರಿಸಿಕೊಂಡರು ಎಂಬುದೇ ಈ ಕುಟುಂಬಗಳ

ಪುಟ 10 ನೋಡಿ

'ಪ್ರಧಾನ ಮಂತ್ರಿ ಆವಾಸ್ ಯೋಜನಾ' ಅಡಿಯಲ್ಲಿ ಒಂದು ಕೋಟಿ ಬಡ ಕುಟುಂಬಗಳು 'ಆವಾಸ್' ಅಂದರೆ ವಸತಿಯನ್ನು ಪಡೆಲಿದ್ದಾರೆ–ಇದು ಮೇ26ರ ಸರಕಾರೀ ಜಾಹೀರಾತಿನ ಮತ್ತೊಂದು ಘೋಷಣೆ.

ಈ ಯೋಜನೆಯ ನಾಲ್ಕು ವರ್ಷಗಳ ದಾಖಲೆಯನ್ನು ನೋಡಿದರೆ, ಇದು ಕೂಡ ಈ ಸರಕಾರದ ವಿಫಲ ಧೋರಣೆಗಳ ಇನ್ನೊಂದು ಸ್ಮಾರಕವಾಗುವಂತಿದೆ ಎನ್ನುತ್ತಾರೆ ಅರ್ಥಿಕ ವಿಚಾರಗಳ ವಿಶ್ಲೇಷಕ ಸುಭೋದ್ ವರ್ಮ(ನ್ಯೂಸ್‌ಕ್ಲಿಕ್, ಜೂನ್5).

ಈ ಸರಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆ ಪ್ರಕಟಿಸಿರುವ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ಈ ನಾಲ್ಕು ವರ್ಷಗಳಲ್ಲಿ 41ಲಕ್ಷ ಮನೆಗಳನ್ನು ಕಟ್ಟಲಾಗಿದೆ.

ಈ ಯೋಜನೆಯಲ್ಲಿ ಪ್ರತಿ ಮನೆಗೆ ಕೇಂದ್ರ ಸರಕಾರ 1.2 ಲಕ್ಷ ಕೊಡುತ್ತದೆ. ರಾಜ್ಯ ಸರಕಾರಗಳು ನಿರ್ಮಾಣ ವೆಚ್ಚದ 40% ಭರಿಸುತ್ತವೆ. ಇತರ ಕೆಲವು ಯೋಜನೆಗಳನ್ನು ತಳಕು ಹಾಕಿಕೊಂಡಿದೆ– ಮನೆ ನಿರ್ಮಾಣಕ್ಕೆ ಮನರೇಗ ಮತ್ತು ಶೌಚಾಲಯಗಳ ನಿಮಾಣಕ್ಕೆ ಸ್ವಚ್ಛ ಭಾರತ್ ಇತ್ಯಾದಿ.

ಈ ಯೋಜನೆಯ ನಗರಪ್ರದೇಶದ ಭಾಗ

ಪುಟ 10 ನೋಡಿ

'ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನಾ' –ಇದರ ಘೋಷಿತ ಉದ್ದೇಶ ಒಂದು ಉತ್ತಮ ಜೀವನಾಧಾರಕ್ಕಾಗಿ ಯುವಜನರನ್ನು ಉದ್ಯೋಗಾರ್ಹರನ್ನಾಗಿ ಮಾಡುವುದು, ಅಂದರೆ ಉದ್ದಿಮೆಗಳಿಗೆ ಬೇಕಾಗಿರುವ ಕೌಶಲಗಳನ್ನು ಅವರಿಗೆ ಕಲಿಸುವುದು.

12,000 ಕೋಟಿ ರೂ. ಗಳನ್ನು ಖರ್ಚು ಮಾಡಿ ಇದುವರೆಗೆ 41.3 ಲಕ್ಷ ಜನಗಳಿಗೆ ಕೌಶಲ ತರಬೇತಿ ನೀಡಲಾಗಿದೆ. ಆದರೆ ಇದರಲ್ಲಿ ಕೆಲಸ ಸಿಕ್ಕಿರುವುದು 6.15ಲಕ್ಷ ಮಂದಿಗೆ ಮಾತ್ರ–ಅಂದರೆ 15%ಮಂದಿಗೆ. ಇದು ರಾಜ್ಯಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿರುವ ಒಂದು ಉತ್ತರದಿಮದ ಪ್ರಕಟವಾಗಿರುವ ಸಂಗತಿ. ಹಾಗಿದ್ದರೆ ಇಷ್ಟು ಮಂದಿಯನ್ನು ನಿಜವಾಗಿ ಉದ್ಯೋಗಾರ್ಹನ್ನಾಗಿ ಮಾಡಲಾಗಿದೆ ಎಂದು ಉದ್ಯೋಗದಾತರಿಗೆ ಅನಿಸುತ್ತಿಲ್ಲವೇ ಅಥವ ಅಷ್ಟೊಂದು ಉದ್ಯೋಗಗಳೇ ಅವರ ಬಳಿ ಇಲ್ಲವೇ?

2016ರ'ಲ್ಲಿ ಕಾರ್ಯಾರಂಭ ಮಾಡಿದ ಈ ಯೋಜನೆ ಕುಂಟುತ್ತಲೇ ಸಾಗಿದೆ. ಕಾರಣ ಇದರ ಪರಿಕಲ್ಪನೆಯಲ್ಲೇ ದೋಷಗಳಿದ್ದವು ಎನ್ನುತ್ತಾರೆ ಪರಿಣಿತರು(ನ್ಯೂಸ್‌ಕ್ಲಿಕ್, ಮೇ7).

ಮೊದಲ ಘಟ್ಟದಲ್ಲಿ ಈ ಯೋಜನೆಯನ್ನು ಪರಾಮರ್ಶಿಸಿದ ಶಾರದಾ ಪ್ರಸಾದ್ ಸಮಿತಿ ಇದರ

ಪುಟ 10 ನೋಡಿ

"ಮೋದಿ ಸರಕಾರದ ದುರಾಡಳಿತದ ನಾಲ್ಕು ವರ್ಷಗಳು – ಅದು ಏಕೆ ಕೊನೆಗೊಳ್ಳಬೇಕು"

ಮೋದಿ ಸರಕಾರ ತನ್ನ ನಾಲ್ಕನೇ ವಾರ್ಷಿಕೋತ್ಸವವನ್ನು ಅದ್ದೂರಿಯಿಂದ ಆಚರಿಸುತ್ತಿರುವ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ, ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ, ಈ ನಾಲ್ಕು ವರ್ಷಗಳ ಆಳ್ವಿಕೆಯನ್ನು ಜನಸಾಮಾನ್ಯರ ದೃಷ್ಟಿಯಿಂದ ವಿಮರ್ಶಿಸುವ ನಾಲ್ಕು ಕಿರುಹೊತ್ತಿಗೆಗಳನ್ನು ಬಿಡುಗಡೆ ಮಾಡಿದೆ. ಜೂನ್ 1ರಂದು ದಿಲ್ಲಿಯಲ್ಲಿ ಕೇಂದ್ರ ಸಮಿತಿಯ ಕಚೇರಿಯಲ್ಲಿ ಕರೆದ ಪತ್ರಿಕಾಸಮ್ಮೇಳದಲ್ಲಿ ಇವನ್ನು ಬಿಡುಗಡೆ ಮಾಡಲಾಯಿತು. ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮಾತನಾಡಿದರು.

ಯೆಚುರಿಯವರು ಈ ಪುಸ್ತಕಗಳನ್ನು ಪರಿಚಯಿಸುತ್ತ ಈ ಸರಕಾರ ಹೋಗಲೇಬೇಕು, ಏಕೆಂದರೆ ಇದು ಜನತೆಯ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರಿದೆ, ಜನಸಾಮಾನ್ಯರ ಪರಿಸ್ಥಿತಿ ಈ ನಾಲ್ಕು ವರ್ಷಗಳಲ್ಲಿ ತುಂಬಾ ಹದಗೆಟ್ಟಿದೆ ಎಂದರು.

"ಮೋದಿ ಸರಕಾರದ ದುರಾಡಳಿತದ ನಾಲ್ಕು ವರ್ಷಗಳು– ಅದು ಏಕೆ ಕೊನೆಗೊಳ್ಳಬೇಕು" ಎಂಬುದು ಈ ನಾಲ್ಕು ಕಿರುಪುಸ್ತಕಗಳ ಮುಖ್ಯ ಶಿರೋನಾಮೆ . ಇದು ಜನಗಳನ್ನು ಲೂಟಿ ಮಾಡುವ, ಶ್ರೀಮಂತರ ಕೊಳ್ಳೆಗೆ ಸೌಕರ್ಯ ಒದಗಿಸುವ ಸರಕಾರ. ಅದೇ ವೇಳೆಗೆ ಸುಳ್ಳುಗಳನ್ನು, ಶುದ್ಧ ಸುಳ್ಳುಗಳನ್ನು ಹರಡುವ ಒಂದು ಸರಕಾರ ಎಂಬುದನ್ನು ಇವು ಬಿಂಬಿಸುತ್ತವೆ.

ಬೃಂದಾ ಕಾರಟ್ ಅವರು ಈ ನಾಲ್ಕು ಪುಸ್ತಕಗಳ ಬಗ್ಗೆ ವಿವರಿಸಿದರು.

ಮೊದಲ ಪುಸ್ತಿಕೆ ದೇಶದ ನುಚ್ಚುನೂರಾಗಿರುವ ಆರ್ಥಿಕ ಪರಿಸ್ಥಿತಿಯನ್ನು ಕುರಿತಾದದ್ದು. ಜನಗಳಿಗೆ ಪ್ರಯೋಜನಗಳಿಗಿಂತ ಆಡಂಬರದ ಮಾತುಗಳೇ ಹೆಚ್ಚು. ಈ ಸರಕಾರ ಲಾಭಕೋರರ ಸರಕಾರ, ಯುವಜನರಿಗೆ ಪಕೋಡಾಗಳನ್ನು ಮಾರಿ ಎಂಬ ಉಪದೇಶವಲ್ಲದೆ ಬೇರೇನೂ ಇಲ್ಲ. ಮೋದಿ ಆಳ್ವಿಕೆಯಲ್ಲಿ ಭ್ರಷ್ಟಾಚಾರ ಸಮೃದ್ಧವಾಗಿ ತುತ್ತ ತುದಿಯಲ್ಲಿದೆ.


ದೇಶದ ರಾಜಕೀಯ ರಚನೆಯ ಮೇಲೆ ದಾಳಿಯನ್ನು ವಿವರಿಸುವ ಎರಡನೇ ಪುಸ್ತಿಕೆ ಸಂವಿಧಾನವನ್ನು ಹೇಗೆ ದುರ್ಬಲಗೊಳಿಸಲಾಗುತ್ತಿದೆ, ಕಳಚಿ ಹಾಕಲಾಗುತ್ತಿದೆ ಎಂಬುದನ್ನು ವಿವರಿಸುತ್ತದೆ. ದೇಶದಲ್ಲಿನ ಸುಮಾರಾಗಿ ಎಲ್ಲ ಪ್ರಮುಖ ಸ್ಥಾನಗಳನ್ನು 'ಸಂಘ' ಕೈವಶ ಮಾಡಿಕೊಂಡಿದೆ ಮತ್ತು ಒಕ್ಕೂಟ ರಚನೆಯ ಮೇಲೆ ಗಂಭೀರ ಪ್ರಹಾರ ನಡೆಸಲಾಗುತ್ತಿದೆ.

ಮೂರನೇ ಪುಸ್ತಿಕೆ ಬಿಜೆಪಿ ಕೊಟ್ಟಿರುವ ಆಶ್ವಾಸನೆಗಳು ಮತ್ತು ಅದರ ಸಂಪೂರ್ಣ ವಿಶ್ವಾಸಘಾತಗಳನ್ನು ವರ್ಣಿಸಿದೆ. ಇದರಲ್ಲಿ ನಾಲ್ಕು ವರ್ಷಗಳ ದುರಾಡಳಿತದ ಸಾಮಾಜಿಕ ಆಯಾಮಗಳ ಮೇಲೆ ವಿಶೇಷ ಒತ್ತು ನೀಡಲಾಗಿದೆ. ಈ ಆಯಾಮಗಳನ್ನು ಪರಿಶೀಲಿಸುತ್ತ ಅದು ಆದಿವಾಸಿಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಅಭೂತಪೂರ್ವ ದಾಳಿಗಳು ನಡೆಯುತ್ತಿವೆ ಎಂಬುದನ್ನು ತೋರಿಸುತ್ತದೆ. ಅದರೊಂದಿಗೆ, ಮೀಸಲಾತಿ ಸವಲತ್ತುಗಳನ್ನು ಕೂಡ ದುರ್ಬಲಗೊಳಿಸುವ ರೀತಿಯಲ್ಲಿ ಆರ್ಥಿಕ ಧೋರಣೆಗಳನ್ನು ರೂಪಿಸಲಾಗುತ್ತಿದೆ ಎಂಬ ಸಂಗತಿಯತ್ತ ಅದು ಗಮನ ಸೆಳೆಯುತ್ತದೆ. ಮೀಸಲಾತಿಗಳನ್ನು ನಿರಾಕರಿಸಲು ಕೇಂದ್ರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ ದಲಿತರ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ.


ನಾಲ್ಕನೇ ಪುಸ್ತಿಕೆ ಅಪಾಯಕ್ಕೊಳಗಾಗಿರುವ ಜನಗಳ ಬದುಕು ಮತ್ತು ಭವಿಷ್ಯದ ಕುರಿತಾಗಿದೆ. ಈ ನಾಲ್ಕು ವರ್ಷಗಳ ಅವಧಿ ಹೇಗೆ ಖಾಸಗಿ ದುರಾಸೆ ಮತ್ತು ಕೇಸರಿ ಅಜೆಂಡಾಕ್ಕಾಗಿ ವಿದ್ಯಾರ್ಥಿಗಳನ್ನು ಬಲಿಗೊಡಲಾಗುತ್ತಿದೆ, ಹೇಗೆ ಜನತೆಯ

ಪುಟ 10 ನೋಡಿ

ಆರ್ಥಿಕ ಪರಿಸ್ಥಿತಿ ನುಚ್ಚುನೂರು




ಸಂವಿಧಾನ: ನಿರಾಕರಣೆ, ಸತ್ವಗುಂದಿಕೆ, ಕಳಚುವಿಕೆ



ಆಶ್ವಾಸನೆಗಳನ್ನು ಮುರಿದು ಜನತೆಗೆ ವಿಶ್ವಾಸಘಾತ



ಬದುಕು ಮತ್ತು ಭವಿಷ್ಯ ಅಪಾಯಕ್ಕೊಳಗಾದಾಗ



‘ಪ್ರಧಾನ ಮಂತ್ರಿ ಉಜ್ವಲಾ ಯೋಜನಾ’

ಪುಟ ೧ ರಿಂದ

ಆರ್ಥಿಕ ದುಸ್ಥಿತಿಯನ್ನು ಹೇಳುತ್ತದೆ.

ಈಗಲೂ 14.2 ಕೆ.ಜಿ. ಎಲ್‌ಪಿಜಿ ಸಿಲಿಂಡರಿನ ಮೇಲಿನ ಸಬ್ಸಿಡಿ ಮೊತ್ತ 20ರಿಂದ 300ರೂ.ಇದೆ. ಅಂದರೆ ಸ್ಟೋವ್ ಮತ್ತು ಸಿಲಿಂಡರಿನ ಬೆಲೆ ತೆರಲು ಕನಿಷ್ಟ 5ರಿಂದ 7 ಸಿಲಿಂಡರುಗಳನ್ನು ಅದರ ಸಬ್ಸಿಡಿ–ರಹಿತ ಪೂರ್ಣ ಬೆಲೆಗಳಲ್ಲಿ ಈ ಬಡಕುಟುಂಬಗಳು ಪಡೆಯಬೇಕಾಗುತ್ತದೆ. ಅಲ್ಲದೆ ಈ ಅವಧಿಯಲ್ಲಿ ಅಡುಗೆ ಅನಿಲದ ಬೆಲೆಗಳಲ್ಲಿ ಸುಮಾರು 20% ಹೆಚ್ಚಳವಾಗಿದೆ.

ಎಷ್ಟು ಕುಟುಂಬಗಳಿಗೆ ಪುಕ್ಕಟೆ ಸಂಪರ್ಕ ಕೊಡಲಾಯಿತು ಎಂಬುದನ್ನು ಸರಕಾರ ಹೇಳುತ್ತಿದೆ. ಆದರೆ ಇವುಗಳಲ್ಲಿ ಎಷ್ಟು ಕುಟುಂಬಗಳಿಗೆ ಮೊದಲ ಸಿಲಿಂಡರಿನ ನಂತರ ಎಷ್ಟು ಸಿಲಿಂಡರುಗಳನ್ನು ಬಳಸಲು ಸಾಧ್ಯವಾಗಿದೆ, ಇವುಗಳಲ್ಲಿ ಎಷ್ಟು ಕುಟುಂಬಗಳಿಗೆ ತಮ್ಮ ಎಲ್ಲ ಅಡುಗೆ ಅಗತ್ಯಗಳಿಗೆ ಎಲ್‌ಪಿಜಿ ಕೊಳ್ಳಲು/ಬಳಸಲು ಸಾಧ್ಯವಾಗಿದೆ, ಅಂದರೆ ನಿಜವಾಗಿಯೂ ‘ಹೊಗೆಮುಕ್ತ’ವಾಗಿವೆ ಎಂಬ ಅಂಕಿ–ಅಂಶಗಳನ್ನು ಸರಕಾರ ಕೊಡುತ್ತಿಲ್ಲ.

ಒಟ್ಟಾರೆಯಾಗಿ ಅನಿಲ ಸಂಪರ್ಕಗಳಲ್ಲಿ ಈ ಎರಡು ವರ್ಷಗಳಲ್ಲಿ 16% ಏರಿಕೆಯೇನೋ ಆಗಿದೆ. ಆದರೆ ಎಲ್‌ಪಿಜಿ ಬಳಕೆಯಲ್ಲಿ ಆಗಿರುವ ಏರಿಕೆ 9% ಮಾತ್ರ. ಇದು ಈ ಯೋಜನೆ ಜಾರಿಯಾಗುವ ಮೊದಲು ಇದ್ದುದಕ್ಕಿಂತಲೂ ಕಡಿಮೆ. ಇದರ ಅರ್ಥವೇನು?

ಈ ಯೋಜನೆ ಆರಂಭವಾಗುವ ಮೊದಲೂ ಪೂರ್ಣವಾಗಿ ಎಲ್‌ಪಿಜಿ ಬಳಕೆ ಅಗತ್ಯದ 60 ರಿಂದ 80%ವನ್ನು ಮಾತ್ರ ಪೂರೈಸುತ್ತಿತ್ತು, ಉಜ್ವಲಾ ಫಲಾನುಭವಿಗಳಲ್ಲಿ ಇದು 35ರಿಂದ 50ಶೇ. ಮಾತ್ರ ಎಂದು ಅಧಿಕೃತ ಅಂದಾಜುಗಳು ಸೂಚಿಸುತ್ತವೆ. ಅಂದರೆ ಈ ಫಲಾನುಭವಿಗಳು ಇತರ ಭಾರತೀಯರಿಗಿಂತ ಕಡಿಮೆ ಎಲ್‌ಪಿಜಿ ಬಳಸುತ್ತಾರೆ, ಅದು ಅವರ ಆರ್ಥಿಕ ದುಸ್ಥಿತಿಯನ್ನು ಅವರಿಗೆ ಎಲ್‌ಪಿಜಿ ಸೇವೆಗಳು ಸಮರ್ಪಕವಾಗಿ ಸಿಗುತ್ತಿಲ್ಲೆಂಬುದನ್ನು ಕೂಡ ಬಹುಶಃ ಸೂಚಿಸುತ್ತವೆ ಎಂದೊಬ್ಬ ಅಧ್ಯಯನಕಾರರು (ಅಶ್ವಿನಿ ದಬಾಡ್ಗೆ, ಇಪಿಡಬ್ಲ್ಯು, ಮೇ 19, 2018) ಹೇಳುತ್ತಾರೆ.

ಒಟ್ಟಿನಲ್ಲಿ, ಬಹುಮಂದಿ ಭಾರತೀಯರ ಆರ್ಥಿಕ ದುಸ್ಥಿತಿ, ಎಲ್‌ಪಿಜಿ ಯ ವಿಪರೀತ ಬೆಲೆಗಳು, ವಿಶೇಷವಾಗಿ ಹಳ್ಳಿ ಪ್ರದೇಶಗಳಲ್ಲಿ ಎಲ್‌ಪಿಜಿ ಪೂರೈಕೆ ಮತ್ತು ಸುರಕ್ಷತೆಯ ಉಸ್ತುವಾರಿಯ ಕ್ರಮಗಳ ಕೊರತೆಯಿಂದಾಗಿ ವಿಫಲತೆಗಳು ಉಂಟಾಗಿದೆ ಎಂಬುದನ್ನು ಸರಕಾರ ಮರೆಮಾಚುತ್ತಿದೆ. ಇದರಿಂದಾಗಿ ನಿಜವಾಗಿ ‘ಹೊಗೆಮುಕ್ತ’ವಾಗಬೇಕಿದ್ದ ಕುಟುಂಬಗಳಲ್ಲಿ ಬಹಳಷ್ಟು ಅದೇ ಹೊಗೆಯುಕ್ತ ಪರಿಸ್ಥಿತಿಗೆ ಹಿಂದಿರುಗಬೇಕಾಗಿದೆ ಎಂಬ ಸಾಧ್ಯತೆಗಳೇ ಹೆಚ್ಚು.

ಪ್ರಧಾನ ಮಂತ್ರಿ ಆವಾಸ್ ಯೋಜನಾ’

ಪುಟ ೧ ರಿಂದ

ಪಿಪಿಪಿ(ಅಂದರೆ ಖಾಸಗಿ–ಸರ್ವಜನಿಕ ಭಾಗೀದಾರಿಕೆ) ಮಾದರಿಯನ್ನು ಆರಿಸಿಕೊಂಡಿದೆ. ಅಂದರೆ ಖಾಸಗಿ ಬಿಲ್ಡರುಗಳು, ಮತ್ತಿತರ ರಿಯಲ್ ಎಸ್ಟೇಟ್ ಮಂದಿಗಳನ್ನು ಒಳಗೊಳ್ಳುವುದು.ವಸತಿ ಮತ್ತು ನಗರಾಭಿವೃದ್ಧಿ ವ್ಯವಹಾರಳ ಮಂತ್ರಿಗಳ ಪ್ರಕಾರ ಇದುವರೆಗೆ 2.1ಲಕ್ಷ ಘಟಕಗಳು ಮಾತ್ರ ಮಂಜೂರಾಗಿವೆ ಅದರಲ್ಲಿ 67,000 ಪೂರ್ಣಗೊಂಡಿದ್ದು, 43,574ರಲ್ಲಿ ವಾಸಕ್ಕೆ ಬಂದಿದ್ದಾರೆ.ಸರಕಾರ ನೇಮಿಸಿರುವ ತಾಂತ್ರಿಕ ಗುಂಪಿನ ಅಂದಾಜು ಪ್ರಕಾರ ಸದ್ಯಕ್ಕೆ ಕನಿಷ್ಟ ಒಂದು ಕೋಟಿ ವಸತಿಗಳ ಕೊರತೆಯಿದೆ. ಅಂದರೆ ಇದರಲ್ಲಿ ಕೇವಲ 4.4% ವನ್ನು ಪೂರೈಸಲು ಸಾಧ್ಯವಾಗಿದೆ.

ಇದಕ್ಕೆ ನೀಡಿರುವ ಹಣದಲ್ಲಿಯೂ ಬಹಳ ಕೊರತೆಯಿದೆ. ಖಾಸಗಿಯವರು ಇದರಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ, ಎಕೆಂದರೆ ಅವರ ಜೀವಾಳವಾದ ಲಾಭದ ಪ್ರಮಾಣ ಇಲ್ಲಿ ಅವರು ನಿರೀಕ್ಷಿಸುವ ಮಟ್ಟದಲ್ಲಿಲ್ಲ. ಆದರೂ ಅದೇಕೋ ಸರಕಾರ ಅವರನ್ನು ಒಳಗೊಳ್ಳ ಬಯಸುತ್ತದೆ. ಇದರ ಒಟ್ಟು ಪರಿಣಾಮವಾಗಿ ನಗರ ಪ್ರದೇಶಗಳ ವಸತಿವಂಚಿತರ ನಿರೀಕ್ಷೆ ನೆರವೇರುವ ಸಾಧ್ಯತೆಗಳು ಇಲ್ಲ.

ಜೂನ್ 5ರಂದು ಪ್ರಧಾನಿಗಳು ಈ ಬಗ್ಗೆ ವೀಡಿಯೋ ಸಂವಾದ ನಡೆಸಿ ಸರಕಾರ ದ’ಸಾಧನೆ’ಗಳ ಡಂಗುರ ಬಾರಿಸುತ್ತ 2022ರೊಳಗೆ 3 ಕೋಟಿ ಗ್ರಾಮೀಣ ಮತ್ತು 2ಕೋಟಿ ನಗರಪ್ರದೇಶಗಳಲ್ಲಿ ಮನೆ ನಿರ್ಮಿಸುವುದಾಗಿ ಅಬ್ಬರಿಸಿದ್ದಾರೆ, ಹಿಂದಿನ ಸರಕಾರಗಳು ಈ ನಿಟ್ಟಿನಲ್ಲಿ ಏನೂ ಮಾಡಿಲ್ಲ ಎಂಬ ತಮ್ಮ ಎಂದಿನ ಅಬ್ಬರವನ್ನು ಮೋದಿ ಪುನರುಚ್ಚರಿಸಿದ್ದಾರೆ. ಆದರೆ ತಮ್ಮ ಸರಕಾರ ನಿಜವಾಗಿ ಮಾಡಿರುವುದೆಷ್ಟು ಎಂದು ಹೇಳಿಲ್ಲ.

‘ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನಾ’

ಪುಟ ೧ ರಿಂದ

ಫಲಿತಾಂಶ ಕಂಡುಹಿಡಿಯಲು ಇದರ ಮೌಲ್ಯಮಾಪನ ಮಾಡಿಲ್ಲೆಂದು ಸಂಬಂಧಪಟ್ಟವರೊಂದಿಗೆ ಸಮಾಲೋಚನೆಯಿಂದ ತಿಳಿದು ಬಂದಿದೆ ಎಂದಿದೆ.

ಇಲ್ಲಿ ಸಂಖ್ಯೆಗಳ ಬೆನ್ನಟ್ಟಿ ಹೋಗಲಾಗುತ್ತಿದೆಯಷ್ಟೇ ಎಂದು ಇನ್ನು ಕೆಲವು ಪರಿಣಿತರು ಹೇಳುತ್ತಾರೆ. ಇದರಿಂದ ಖಾಸಗಿ ವಲಯದವರಿಗೆ ತರಬೇತಿಯ ಹೆಸರಲ್ಲಿ 2500 ಕೋಟಿ ರೂ.ಸರಕಾರದ ಬೊಕ್ಕಸದಿಂದ ಹರಿದು ಹೋಯಿತಷ್ಟೇ, ಯುವಜನರಿಗೆ ಗೌರವಪೂರ್ಣ ವೇತನದ ಉದ್ಯೋಗ ಕೊಡಿಸುವ ಮತ್ತು ಉದ್ದಿಮೆಗಳ ಅಗತ್ಯವನ್ನು ಪೂರೈಸುವ ಉದ್ದೇಶ ಈಡೇರಲಿಲ್ಲ, ಆ ಬಗ್ಗೆ ತಲೆ ಕಡಿಸಿಕೊಂಡಿಲ್ಲ ಕೂಡ ಎಂಬುದು ಈ ವರದಿಯಿಂದ ತಿಳಿದು ಬರುವ ಸಂಗತಿ.

ಕೌಶಲ ಅಭಿವೃದ್ಧಿ ಮಾಡಿದರೆ ಕೌಶಲ ಕೆಲಸಕ್ಕೆ ಬರುವುದು ನಿಜವಾಗಿಯೂ ಉದ್ಯೋಗ ಇದ್ದಾಗ ಮಾತ್ರ. ಉದ್ಯೋಗವೇ ಇಲ್ಲದಾಗ ಕೌಶಲ ತರಬೇತಿ ಯಾರಿಗಾಗಿ?

ಬಹುಶಃ ಪ್ರಧಾನಿಗಳು ಜನಗಳಿಗೆ ಕೌಶಲ ನೀಡಿದರೆ ಅವರೇ ಅಪಾರ ಸ್ವ–ಉದ್ಯೋಗಗಳನ್ನು ನಿರ್ಮಿಸಿಕೊಳ್ಳುತ್ತಾರೆ ಎಂದೂ ನಂಬಿದ್ದಿರಬೇಕು ಎನ್ನುತ್ತಾರೆ ವಿಶ್ಲೇಷಕರು. ಆದರೆ ಅದೂ ನಿಜವಾಗಲಿಲ್ಲ. ತರಬೇತಿ ಪಡೆದವರಲ್ಲಿ ಸ್ವ–ಉದ್ಯೋಗ ಆರಂಭಿಸಲು ಸಾಧ್ಯವಾದದ್ದು 24% ಮಂದಿಗೆ ಮಾತ್ರ.

‘ದುಡಿಮೆಗೆ ಅರ್ಹರಾದವರು’ ಸಿಗುತ್ತಿಲ್ಲ ಎಂಬ ತಮ್ಮ ಕಾರ್ಪೊರೇಟ್ ಮಿತ್ರರ ರಾಗಕ್ಕೆ ಮಾರು ಹೋಗಿ, ವಾಸ್ತವವಾಗಿ ಅವರು ತಮ್ಮ ಗರಿಷ್ಟ ಲಾಭಗಳಿಗಾಗಿ ‘ಅರ್ಹ’ರಿಗೆ ಸರಿಯಾದ ಸಂಬಳ ಕೊಡದಿರುವುದೇ ನಿಜವಾದ ಕಾರಣವಿರಬಹುದು ಎಂಬುದು ಪ್ರಧಾನಿಗಳ ಅಥವ ಅವರ ಸಲಹೆಗಾರರ ಅರಿವಿಗೆ ಬರದೇ ಹೋಗಿರುವುದೂ ಈ ಕಾರ್ಯಕ್ರಮದ ಭಾರೀ ವಿಫಲತೆಗೆ ಕಾರಣವಿರಬಹುದು ಎಂದೂ ಪರಿಣಿತರು ಭಾವಿಸುತ್ತಾರೆ.

“ಮೋದಿ ಸರಕಾರದ ದುರಾಡಳಿತದ ನಾಲ್ಕು ವರ್ಷಗಳು...”

ಪುಟ ೧ ರಿಂದ

ಆರೋಗ್ಯವಂತ ಕಾರ್ಪೊರೇಟ್‌ಗಳಿಗಾಗಿ ಜನತೆಯ ಆರೋಗ್ಯದ ವಿಷಯದಲ್ಲಿ ರಾಜಿಮಾಡಿಕೊಂಡು ಜನಸಮೂಹಗಳನ್ನು ಕಾಯಿಲೆಪೀಡಿತರನ್ನಾಗಿ ಮಾಡಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ನಾಲ್ಕು ವರ್ಷಗಳ ಆಳ್ವಿಕೆಯಲ್ಲಿ ಆಹಾರ ಭದ್ರತೆಗೆ ವಿಪರೀತ ಹಾನಿಯುಂಟಾಗಿದೆ ಎಂಬುದನ್ನು ಈ ಪುಸ್ತಿಕೆ ವಿವರಿಸುತ್ತದೆ.

ಒಟ್ಟಿನಲ್ಲಿ, ಈ ಸರಕಾರ ಜನತೆಯ ಲೂಟಿಗೆ ಅನುವು ಮಾಡಿ ಕೊಡುವ ಕೆಲಸ ಮಾಡುತ್ತಿದೆ, ಅದೇ ವೇಳೆಗೆ ತನ್ನ 4 ವರ್ಷಗಳ ದುರಾಡಳಿತದ ಮೇಲೆ ಪರದೆ ಹಾಕಲು ಸುಳ್ಳುಗಳನ್ನು ಹರಡುತ್ತಿದೆ ಎಂದು ಬೃಂದಾ ಕಾರಟ್ ಹೇಳಿದರು.

ಭ್ರಷ್ಟಾಚಾರದ ವಿರುದ್ಧ ಸಮರ ಎಂಬ ಬೊಗಳೆ



2014ರಲ್ಲಿ ಭ್ರಷ್ಟಾಚಾರದ ಖಂಡನೆಗಳು ನರೇಂದ್ರ ಮೋದಿಯವರ ಚುನಾವಣಾ ಪ್ರಚಾರ ಭಾಷಣಗಳಲ್ಲಿ ಪ್ರಮುಖ ವಿಷಯುವಾಗಿದ್ದವು. ಅವರ ಆಗಿನ ಘೋಷವಾಕ್ಯಗಳನ್ನು ನೆನಪಿಸಿಕೊಳ್ಳಿ:

* ನ ಖಾವೂಂಗಾ, ನ ಖಾನೇ ದೂಂಗಾ’ (ತಿನ್ನುವುದಿಲ್ಲ–ತಿನ್ನಲು ಬಿಡುವುದಿಲ್ಲ)
* ನನ್ನನ್ನು ಸಾಮಾನ್ಯ ಚೌಕೀದಾರ (ಕಾವಲುಗಾರ)ನಾಗಿ ನೇಮಿಸಿ.
* 100 ದಿನಗಳೊಳಗೆ ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ಹಿಂದಕ್ಕೆ ತಂದು ಪ್ರತಿಯೊಬ್ಬ ಬಡ ಭಾರತೀಯನ ಬ್ಯಾಂಕ್ ಖಾತೆಯಲ್ಲಿ 15ಲಕ್ಷ ರೂ. ಜಮಾ ಮಾಡಲಾಗುವುದು.

ಕಳೆದ ನಾಲ್ಕು ವರ್ಷಗಳಲ್ಲಿ ಇವೆಲ್ಲ ಕೆಟ್ಟ ಜೋಕುಗಳಾಗಿ ಬಿಟ್ಟಿವೆ.

ಗಂಭೀರ ಸಂಗತಿಯೆಂದರೆ, ಈ ನಾಲ್ಕು ವರ್ಷಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ಹೋರಾಟವನ್ನು ಬುಡಮೇಲು ಮಾಡುವುದರಲ್ಲೇ ಅವರ ಸರಕಾರ ಸಕ್ರಿಯವಾಗಿ ತೊಡಗಿದೆ.

ಮೂರು ಭ್ರಷ್ಟಾಚಾರ–ವಿರೋಧಿ ಮಸೂದೆ/ಕಾನೂನುಗಳ ಗತಿಯೇನಾಗಿದೆ?

ಇವರು ಅಧಿಕಾರ ವಹಿಸಿಕೊಳ್ಳುವ ವೇಳೆಗೆ ಸಾರ್ವಜನಿಕ ಹುದ್ದೆಗಳಲ್ಲಿ ಭ್ರಷ್ಟಾಚಾರ ತಡೆಯಲೆಂದು ಸಿದ್ಧವಾಗಿದ್ದ ಮೂರು ಮಸೂದೆಗಳ ಗತಿಯೇನಾಗಿದೆಯೆಂಬುದು ಈ ವಿಷಯದಲ್ಲಿ ಈ ಸರಕಾರದ ಬೂಟಾಟಿಕೆಯನ್ನು ಬಯಲು ಮಾಡುತ್ತಿದೆ.

* ಲೋಕಪಾಲ ಮಸೂದೆ ಎಲ್ಲಿದೆ? ನಾಲ್ಕು ವರ್ಷಗಳಾದರೂ ಲೋಕಪಾಲರ ನೇಮಕ ಏಕಾಗಿಲ್ಲ? ಅಧಿಕೃತ ಪ್ರತಿಪಕ್ಷ ಇಲ್ಲವಾದ್ದರಿಂದ ಲೋಕಪಾಲರನ್ನು ಆರಿಸಬೇಕಾದ ಸಮಿತಿಯಲ್ಲಿ ಪ್ರತಿಪಕ್ಷದ ಮುಖಂಡರಿಲ್ಲವಲ್ಲಾ ಎಂಬ ನೆವ ಒಡ್ಡಲಾಯಿತು. ಕೊನೆಗೂ ಆ ಬಗ್ಗೆ ಸೂಕ್ತ ತಿದ್ದುಪಡಿ ತಂದು ಸಂಸತ್ತಿನ ಸ್ಥಾಯೀಸಮಿತಿ ಮಸೂದೆ ಕುರಿತ ವರದಿಯನ್ನು ಡಿಸೆಂಬರ್ 2015ರಲ್ಲಿ ಸಲ್ಲಿಸಿತು. ಆದರೆ ಇನ್ನೂ ಈ ಮಸೂದೆ ಶಾಸನವಾಗಿಲ್ಲ.

ಇದೇನೂ ಕಾಕತಾಳೀಯವಲ್ಲ. ಇವರ ಮಾದರಿ ರಾಜ್ಯ ಗುಜರಾತಿನಲ್ಲಿ ಮಾದರಿ ಮುಖ್ಯಮಂತ್ರಿಗಳಾಗಿದ್ದ ಲೋಕಾಯುಕ್ತ ಹುದ್ದೆಗೆ ನೇಮಕ ಮಾಡಿದ್ದು ನ್ಯಾಯಾಲಯ ಬಲವಂತ ಮಾಡಿದ ಮೇಲೆಯೇ.

* ಎರಡನೆಯುದ್ದು, ಭ್ರಷ್ಟಾಚಾರ–ನಿರೋಧ ಕಾಯ್ದೆಗೆ ತಿದ್ದುಪಡಿ. ಲೋಕಪಾಲ ಅಥವ ಲೋಕಾಯುಕ್ತರ ಮಂಜೂರಾತಿ ಇಲ್ಲದೆ ಸಾರ್ವಜನಿಕ ಹುದ್ದೆಯಲ್ಲಿರುವವರ ಮೇಲಿನ ಭ್ರಷ್ಟಾಚಾರದ ವಿಚಾರಣೆ ಮಾತ್ರವಲ್ಲ, ತನಿಖೆಯೂ ನಡೆಯುವಂತಿಲ್ಲ ಎಂಬ ಈ ತಿದ್ದುಪಡಿ ಈ ಕಾನೂನನ್ನು ದುರ್ಬಲಗೊಳಿಸುವ ಹುನ್ನಾರವಲ್ಲದೆ ಬೇರೇನೂ ಅಲ್ಲ. ಲೋಕಪಾಲ ನೇಮಕ ಆಗಿಲ್ಲವಾದ್ದರಿಂದ ಸಾರ್ವಜನಿಕ ಹುದ್ದೆಗಳಲ್ಲಿ ಇರುವವರ ಭ್ರಷ್ಟಾಚಾರಗಳ ತನಿಖೆಯೇ ಸಾಧ್ಯವಿಲ್ಲ. ಲೋಕಾಯುಕ್ತರಿಲ್ಲದ ರಾಜ್ಯಗಳಲ್ಲೂ ಇದೇ ಕತೆ.
* ಮೂರನೆಯದು, ವಿಸಲ್ ಬ್ಲೋವರ್ಸ್ ಪ್ರೊಟೆಕ್ಷನ್ ಆಕ್ಟ್, ಅಂದರೆ ಭ್ರಷ್ಟಾಚಾರದ ಸಂಕೇತ ನೀಡುವವರ ರಕ್ಷಣೆಯ ಕಾಯ್ದೆ. ಇದನ್ನು ಸಾರ್ವಜನಿಕ ಸ್ಥಾನಗಳಲ್ಲಿ ಭ್ರಷ್ಟಾಚಾರದ ಸಂಕೇತ ನೀಡಿ ಅವನ್ನು ಬಯಲಿಗೆ ತರುವಲ್ಲಿ ನೆರವಾಗುವವರ ಮೇಲೆ ಸೇಡಿನ ಕ್ರಮ ಕೈಗೊಳ್ಳದಂತೆ ತಡೆಯಲು 2014ರಲ್ಲಿ ತರಲಾಯಿತು. ದೇಶದ ಭದ್ರತೆ ಮತ್ತು ರಾಷ್ಟ್ರೀಯ ಹಿತಗಳ ರಕ್ಷಣೆಯ ಹೆಸರಲ್ಲಿ ದೇಶದ ಆರ್ಥಿಕ ಹಿತಗಳು, ಸಾಮರಿಕ ಹಿತಗಳು ಮುಂತಾದ ವಿಷಯಗಳಿಗೆ ತೊಂದರೆ ಉಂಟು ಮಾಡುವಂತಹ ಸಂಕೇತಗಳನ್ನು ಕೊಡುವವರನ್ನು ಶಿಕ್ಷಿಸುವ ತಿದ್ದುಪಡಿಗಳನ್ನು ತರಲಾಗಿದೆ.

ಕಪ್ಪು ಹಣದ ವಿರುದ್ಧ ಹೋರಾಟದ ಬೂಟಾಟಿಕೆ

ಕಪ್ಪುಹಣ ತಂದು 15ಲಕ್ಷ ರೂ. ಜಮಾ ಮಾಡುವ ಆಶ್ವಾಸನೆ ಕೇವಲ ಚುನಾವಣಾ ಬೊಗಳೆ ಎಂದು ಸ್ವತಃ ಆಳುವ ಪಕ್ಷದ ಅಧ್ಯಕ್ಷರೇ ಹೇಳಿ ಜೋಕುಗಳ ಸರಮಾಲೆಯೇ ಸೃಷ್ಟಿಯಾಗಿರುವುದು ಈಗ ಹಳೆಯ ಸಂಗತಿ.

* ವಿದೇಶಗಳಿಂದ ಕಪ್ಪು ಹಣ ತರಲಿಲ್ಲ ಮಾತ್ರವಲ್ಲ, ಸರಕಾರ ಈ ರೀತಿ ಹಣ ಕದ್ದೊಯ್ದವರ ಬಗ್ಗೆ ವಿದೇಶಿ ಬ್ಯಾಂಕುಗಳು ನೀಡಿರುವ ಪಟ್ಟಿಯನ್ನೂ ಬಹಿರಂಗಪಡಿಸಲು ನಿರಾಕರಿಸುತ್ತ ಬಂದಿದೆ.
* ಪತ್ರಕರ್ತರು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಶ್ರಮಪಟ್ಟು ಮಾಡಿದ ತನಿಖೆಗಳ ನಂತರ ಪ್ರಕಟಿಸಿದ ಪನಾಮಾ ಪೇಪರ್ಸ್‌ಗಳಲ್ಲಿ ಇರುವ ಭಾರತೀಯ ಹೆಸರುಗಳ ಬಗ್ಗೆ ಈ ಸರಕಾರದ್ದು ಕಿವಿಗಳಿಗೆ ಅಪ್ಪಳಿಸುವಂತಹ ಮೌನ!
* ಇತ್ತೀಚೆಗೆ ತೆರಿಗೆ ತಪ್ಪಿಸಲು ಅನುಕೂಲ ಮಾಡಿಕೊಡುವ ಸ್ಥಳಗಳಲ್ಲಿ ಅಂಬಾನಿಗಳು 2100 ಕೋಟಿ ರೂ. ಪೇರಿಸಿಟ್ಟಿದ್ದಾರೆ ಎಂಬ ಸುದ್ದಿಯ ಬಗ್ಗೆಯೂ ಈ ಸರಕಾರದ ಪ್ರತಿಕ್ರಿಯೆ/ಕ್ರಮ ಶೂನ್ಯ.
* ಕಪ್ಪು ಹಣದ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂಬ ಕಟು ಟೀಕೆಗಳ ಬಗ್ಗೆ ಹತಾಶೆಯಿಂದ ತನ್ನ **ಕಪ್ಪುಹಣ–ವಿರೋಧಿ ಪರಾಕ್ರಮದ ಪ್ರದರ್ಶನಕ್ಕೆಂದು ನಡೆಸಿದ ನಡುರಾತ್ರಿ ನೋಟುರದ್ದತಿ ನಾಟಕ** –ಕನಿಷ್ಟ 3–4ಲಕ್ಷ ಕೋಟಿ ರೂ. ಕಪ್ಪು ಹಣ ಹೊರಬರುತ್ತದೆ ಎಂದು ಬೆನ್ನು ತಟ್ಟಿಕೊಂಡ ಈ ಕ್ರೂರದಿಮದ ಆರ್ಥಿಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು, ಸಾವಿರಾರು ಸಣ್ಣ ಉದ್ದಿಮೆಗಳು ಮುಚ್ಚಿ ಹೋದವು, ಲಕ್ಷಾಂತರ ಉದ್ಯೋಗಗಳು ನಾಶವಾದವು, ಕಪ್ಪು ಹಣ ಮಾತ್ರ ಹೊರ ಬರಲಿಲ್ಲ. ಏನಾದರೂ ಸ್ವಲ್ಪ ಹೊರಬಂದಿದ್ದರೆ, ಅದರೊಂದಿಗೇ, ಕಪ್ಪು ಹಣ ಪೇರಿಸಿಟ್ಟವರಿಗೆ ಕ್ಷಮಾದಾನ’ದ ಎಂದಿನ ಯೋಜನೆಯಿಂದ ಮಾತ್ರ!

ಹಗರಣಗಳ ದೊಡ್ಡಪಟ್ಟಿ

ಹಿಂದಿನ ಸರಕಾರಗಳ ಹಗರಣಗಳ ಬಗ್ಗೆ ಮಾತಾಡಿದ್ದೇ ಮಾತಾಡಿದ್ದು– ಆದರೆ ಮೊದಲ ವರ್ಷ ಮುಗಿಯುತ್ತಿದ್ದಂತೆ ಈ ಸರಕಾರದ ಹಗರಣಗಳ ದೊಡ್ಡ ಪಟ್ಟಿ ಬಿಚ್ಚಿಕೊಳ್ಳಲಾರಂಭಿಸಿತು

* ಸಾರ್ವಜನಿಕ ವಲಯದ ಬ್ಯಾಂಕಿಗೆ ಕೋಟಿಗಟ್ಟಲೆ ರೂ.ಗಳ ಪಂಗನಾಮ ಹಾಕಿ ದೇಶ ಬಿಟ್ಟು ಹೋಗಿರುವ ನೀರವ್ ಮೋದಿ, ‘ಚೋಕ್ಸಿ ‘ಭಾಯಿ’, ಅದರ ಮೊದಲು ವಿಜಯ ಮಲ್ಯ, ಲಲಿತ್ ಮೋದಿ– ಇವರೆಲ್ಲ ಒತ್ತಟ್ಟಿಗೆ.
* ಇನ್ನೊಂದೆಡೆಯಲ್ಲಿ, ಆಳುವ ಪಕ್ಷದ ಅಧ್ಯಕ್ಷ ಅಮಿತ್‌ಷಾ ಮಗ ಜಯ್ ಷಾ ಕಂಪನಿಯ ವ್ಯವಹಾರದಲ್ಲಿ ಎರಡೇ ವರ್ಷಗಳಲ್ಲಿ 16ಸಾವಿರ ಪಟ್ಟು ಹೆಚ್ಚಳ! ಇದು ಕೇವಲ ಕಾಕತಾಳೀಯವೇ? ಹಾಗಿದ್ದರೆ ಈ ಬಗ್ಗೆ ಚರ್ಚಿಸಬಾರದೆಂದು ಮಾಧ್ಯಮಗಳ ಬಾಯಿ ಮುಚ್ಚಿಸಿರುವುದೇಕೆ?
* ಇದಕ್ಕೆ ಮೊದಲು ಮಧ್ಯಪ್ರದೇಶದ ಮುಖ್ಯಮಂತ್ರಿಗಳೇ ಶಾಮೀಲಾಗಿರುವರೆನ್ನಲಾದ ವ್ಯಾಪಂ ಹಗರಣ, ಅದರ ಮೊದಲು ರಾಜಸ್ತಾನದ ಮುಖ್ಯಮಂತ್ರಿಗಳ ಹೆಸರನ್ನು ಮತ್ತು ವಿದೇಶಾಂ ಗಮಂತ್ರಿಗಳ ಹೆಸರನ್ನು ಒಳಗೊಂಡ ಲಲಿತ್ ಮೋದಿ ಹಗರಣ. ಮಹಾರಾಷ್ಟ್ರದಲ್ಲಿ ಕೇಂದ್ರ ಮಂತ್ರಿ ನಿತಿನ್ ಗಡ್ಕರಿಯವರ ಮೇಲೆ ಬಂದ ಆಪಾದನೆ, ರಾಜ್ಯದ ಮಂತ್ರಿ ಪಂಕಜಾ ಮುಂಡೆಯವರ ಮೇಲಿನ ಆಪಾದನೆ
* ಪ್ರಧಾನಿಗಳ ನಿಕಟ ಉದ್ಯಮಿ ಗೆಳೆಯ ಅದಾನಿಯ ವ್ಯವಹಾರಗಳ ಬಗ್ಗೆ ಇರುವ ಅನುಮಾನಗಳನ್ನು ಗಟ್ಟಿಗೊಳಿಸಿರುವ ಇತ್ತೀಚಿನ ಸಿಎಜಿ ವರದಿ ಬಯಲು ಮಾಡಿದ ಹಡಗು ಸಾಗಾಣಿಕೆಯಲ್ಲಿನ ಹಗರಣ.
* ಪ್ರಧಾನ ಮಂತ್ರಿಗಳೇ ನಡೆಸಿದ ರಫೇಲ್ ‘ವ್ಯವಹಾರ’
* ಶಾರ್ಧಾ ಚಿಟ್‌ಪಂಡ್ ಹಗರಣದಲ್ಲಿ ಆಪಾದಿತನಾದ ಮುಕುಲ್ ರಾಯ್‌ಗೆ ಬಿಜೆಪಿಯಲ್ಲಿ ಸ್ವಾಗತ
* ಇತ್ತೀಚೆಗೆ ಕರ್ನಾಟಕದಲ್ಲಿ ಯೆಡ್ಯೂರಪ್ಪನನವನರನ್ನು ಮುಖ್ಯಮಂತ್ರಿ ಅಭ್ಯರ್ಥಿ ಮಾಡಿದ್ದು, ನಂತರ ಬಹುಮತವಿಲ್ಲದಿದ್ದರೂ ಮುಖ್ಯಮಂತ್ರಿ ಪ್ರತಿಜ್ಞೆಯನ್ನೂ ಮಾಡಿಸಿಯೇ ಬಿಟ್ಟದ್ದು

ಇಷ್ಟೆಲ್ಲ ಆಗಿದ್ದರೂ, ಭ್ರಷ್ಟಾಚಾರ–ವಿರೋಧಿ ಹೋರಾಟಗಾರನೆಂಬ ಬೂಟಾಟಿಕೆ ಬಿಟ್ಟಿಲ್ಲ. ನಾಲ್ಕನೇ ವಾರ್ಷಿಕೋತ್ಸವ ಸಂದರ್ಭದ ಭಾಷಣದಲ್ಲಿ ಪ್ರತಿಪಕ್ಷಗಳು ತನ್ನ ಭ್ರಷ್ಟಾಚಾರ–ವಿರೋಧಿ ಕ್ರಮಗಳಿಂದಾಗಿ ತನ್ನ ವಿರುದ್ಧ ಒಟ್ಟು ಸೇರಿದ್ದಾರೆ ಎಂದಿರುವುದು ಈ ಸರಕಾರದ ಹೊಸ ಭ್ರಷ್ಟಾಚಾರ–ವಿರೋಧಿ ಜೋಕು.



ಬೆಳೆ ಸಾಲದ ಮನ್ನಾದ ಪ್ರಯೋಜನ ಯಾರಿಗೆ ?.......

ಪುಟ 8 ರಿಂದ

ಪಡೆಯಲೇ ಬೇಕಾಗಿದೆ.

ಕೆಲ ಭೂಮಾಲಕ–ಬಂಡವಾಳದಾರರು ಮತ್ತು ಬಡ್ಡಿ ವ್ಯಾಪಾರಿಗಳು, ಈ ದಿನಗಳಿಗಾಗಿ ಹಣದ ಥೈಲಿ ಹಿಡಿದುಕೊಂಡು ಕಾಯ್ದು ಕುಳಿತಿರುತ್ತಾರೆ. ಬ್ಯಾಂಕ್ ಸಿಬ್ಬಂದಿಗಳ ಗ್ಯಾರಂಟಿಯೊಂದಿಗೆ ಕನಿಷ್ಠ ಶೇ 36 ರ ಬಡ್ಡಿದರ ದಲ್ಲಿ ಒಂದೆರಡು ತಿಂಗಳಿಗೆ ಇಂತಹ ರೈತರ ಬ್ಯಾಂಕ್ ಸಾಲ ಮರುಪಾವತಿಗೆ ತಾವು ಸಾಲ ನೀಡಿ, ಈ ರೈತರು ಬ್ಯಾಂಕುಗಳ ಸಾಲವನ್ನು ನವೀಕರಿಸಿಕೊಳ್ಳಲು ನೆರವಾಗುತ್ತಾರೆ. ಮಾತ್ರವಲ್ಲ, ಕೇವಲ ಒಂದೆರಡು ತಿಂಗಳಿಗೆ ಇಂತಹ ರೈತರಸಾಲ ನವೀಕರಿಸಲು ನೆರವಾಗಿ, ಲಕ್ಷಾಂತರ ರೂಗಳ ಆದಾಯವನ್ನು ಗಳಿಸುತ್ತಾರೆ. ಈ ಕ್ರಮದಿಂದ ಹಳೆಯ ಸಾಲವು, ಈ ಬಡ್ಡಿ ಸಾಹುಕಾರರಿಗೆ ನೀಡುವ ಬಡ್ಡಿಯೊಂದಿಗೆ ನವೀಕರಿಸಿದ ರೀತಿಯಲ್ಲಿ ಬೆಳೆದಿರುತ್ತದೆಯೇ ಹೊರತು, ಆ ವರ್ಷದ ಬೆಳೆಗೆ ಆ ರೈತರಿಗೆ, ನಿಜವಾಗಿ ಬೇಕಾದ ಸಾಲ ದೊರೆಯುವುದಿಲ್ಲ. ಆದುದರಿಂದ, ಅವರುಅಂತಹದ್ದೇ ಭೂಮಾಲಕ – ಬಂಡವಾಳಶಾಹಿಗಳಅಥವಾ ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಬೀಜ ಮುಂತಾದ ಹೂಡಿಕೆಗಳನ್ನು ಮಾರಾಟಮಾಡುವವರ ಬಳಿ, ದುಬಾರಿ ಬಡ್ಡಿ ಸಾಲಕ್ಕೆ ಮೊರೆ ಹೋಗ ಬೇಕಾಗುತ್ತದೆ.

ಹೀಗಾಗಿ, ವಾಸ್ತವಿಕವಾಗಿ ಕೆಲವೇ ರೈತರಿಗಾದರೂ ಸಾಲನೀಡುವ ಬ್ಯಾಂಕುಗಳು,ಅವರಿಗೆ ನಿಜವಾದ ಸಾಲ ನೀಡುತ್ತಿಲ್ಲ. ಬದಲಿಗೆ, ಬಡ್ಡಿರಹಿತ ಸಾಲದ ನಿಜವಾದ ಬಹುತೇಕ ಫಲಾನುಭವಿಗಳೆಂದರೇ ಗ್ರಾಮೀಣ ಪ್ರದೇಶದ ಭೂಮಾಲಕ–ಬಂಡವಾಳಶಾಹಿ ಶ್ರೀಮಂತರೇ ಆಗಿದ್ದಾರೆ. ತಮ್ಮ ದೊಡ್ಡ ಹಿಡುವಳಿಗಳನ್ನು ತಮ್ಮ ಕುಟುಂಬದ ಸದಸ್ಯರ ನಡುವೆ ಚಿಕ್ಕ ಚಿಕ್ಕ ಹಿಡುವಳಿಗನ್ನಾಗಿಸಿ ದೊಡ್ಡ ಪ್ರಮಾಣದ ಬಡ್ಡಿರಹಿತ ಸಾಲಪಡೆದು ತಮ್ಮ ಜಮೀನುಗಳನ್ನು ಗೇಣಿಗೆ ಬೇಸಾಯ ಮಾಡುವಬಡ ರೈತರು, ಕೂಲಿಕಾರರಿಗೆ ದುಬಾರಿ ಬಡ್ಡಿಯ ಸಾಲ ಬಂಡವಾಳವಾಗಿ ಅದನ್ನು ಹೂಡುತ್ತಾರೆ.

ಹೀಗಾಗಿ, ಬ್ಯಾಂಕುಗಳ ಬಹುತೇಕ ಫಲಾನುಭವಿಗಳು ಇವರೇ ಆಗಿದ್ದಾರೆ. ಈಗ ರಾಷ್ಟ್ರೀಕೃತ ಹಾಗೂ ಸಹಕಾರಿ ಬ್ಯಾಂಕುಗಳ ಸಾಲ ಮನ್ನಾ ಎಂದರೆ, ನಿಜವಾಗಿ ಬೇಸಾಯದಲ್ಲಿ ತೊಡಗದ ಮತ್ತು ಬಡ್ಡಿ ರಹಿತ ಸಾಲವನ್ನು ಪಡೆದು ಅದನ್ನು ದುಬಾರಿ ಬಡ್ಡಿ ಸಾಲನೀಡಿಕೆಯ ಬಂಡವಾಳವನ್ನಾಗಿಸುವ ಇವರಿಗೆ ಸಹಾಯಕವಾಗಿದೆ. ಸಾಲಮನ್ನಾದ ಸಿಂಹ ಪಾಲು ಇವರಿಗೆ ದೊರೆಯುತ್ತದೆ. ಇದರೊಂದಿಗೆ ಇವರು ಮತ್ತಷ್ಟು ಶ್ರೀಮಂತರಾಗಲು ಅದು ಸಹಾಯವಾಗಲಿದೆ. ವಾಸ್ತವದಲ್ಲಿ, ಶೇ 90ರಷ್ಟು ನಿಜವಾದ ವ್ಯವಸಾಯದಲ್ಲಿ ತೊಡಗಿದ ರೈತರಿಗೆ/ಗೇಣಿದಾರರಿಗೆ, ಕೂಲಿಕಾರರಿಗೆ ಇದರಿಂದ ಏನೇನು ಪ್ರಯೋಜನವಾಗುವುದಿಲ್ಲ ಎಂದರೇ ಅತಿಶಯೋಕ್ತಿಯೇನಲ್ಲ !

ಈ ಮಾದರಿಯ ಸಾಲಮನ್ನಾ ಕ್ರಮದ ನಿಜವಾದ ಹೂರಣವೇನು ?

ಖಂಡಿತಾ, ಸಾಲಮನ್ನಾದ ಈ ಕ್ರಮಗಳಿಂದ ನಿಜವಾದ ಬಹುತೇಕ ರೈತರಿಗೆ ಸಹಾಯವಾಗುವುದಿಲ್ಲ ಮತ್ತು ಅದು ವ್ಯವಸಾಯದಲ್ಲಿ ನೇರವಾಗಿ ತೊಡಗದ ಗ್ರಾಮೀಣ ಶ್ರೀಮಂತರು ಮತ್ತು ಪಟ್ಟಭದ್ರರಾದ ಭೂಮಾಲಕ ಬಂಡವಾಳದಾರರಿಗೆ ಶೇ75ಕ್ಕಿಂತಲೂ ಹೆಚ್ಚು ಪ್ರಯೋಜನಕಾರಿಯಾಗುತ್ತದೆಯೆಂಬುದು ನಮ್ಮ ಆಳುವ ಸರಕಾರಗಳಿಗೆ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ಗೊತ್ತಿರುವ ವಿಷಯವೇ ವಾಗಿದೆ. ಆದಾಗಲೂ ಅಗಾಗ್ಗೆ ಈ ಸಾಲಮನ್ನಾವನ್ನು ಈ ವ 'ಾದರಿಯಲ್ಲಿಯೇಮಾಡಲಾಗುತ್ತದೆ. ಯಾಕೆಂದರೆ, ಸರಕಾರದ ಹಣಕಾಸು ಸಂಪನ್ಮೂಲವನ್ನು ತನ್ನ ಪಕ್ಷದ ಹಿಂಬಾಲಕರಿಗೆ ಮತ್ತು ಈ ಪಕ್ಷಗಳು ಪ್ರತಿನಿಧಿಸುವ ಗ್ರಾಮೀಣ ಆಳುವ ಶ್ರೀಮಂತ ವರ್ಗಗಳಿಗೆ ವರ್ಗಾವಣೆ ಮಾಡುವ ತಂತ್ರದಬಾಗವೇ ಇದಾಗಿದೆ.ರಾಜ್ಯ ಸರಕಾರ ನಿಜ ಸಾಲಬಾಧಿತ ರೈತರ ಸಾಲಮನ್ನಾ ಮಾಡುವ ಬದಲು ಗ್ರಾಮೀಣ ಶ್ರೀಮಂತರ ಸಾವಿರಾರು ಕೋಟಿ ಸಾಲ ಮನ್ನಾ ಮಾಡಿ ನೆರವಾದರೆ, ಕೇಂದ್ರ ಸರಕಾರವು ನಿಜ ರೈತರ ಸಾಲಮನ್ನಾ ಮಾಡುವುದನ್ನು ನಿರಾಕರಿಸಿ ದೊಡ್ಡ ಬಂಡವಾಳದಾರರಮತ್ತು ಕಾರ್ಪೋರೇಟ್ ಸಂಸ್ಥೆಗಳ ಲಕ್ಷಾಂತರ ಕೋಟಿರೂಗಳನ್ನು ಮನ್ನಾ ಮಾಡುತ್ತದೆ.

ಇಲ್ಲಿ ಗಮನಿಸ ಬೇಕಾದ ಮತ್ತೊಂದು ಅಂಶವೇನೆಂದರೆ, ಸಾಮ್ರಾಜ್ಯವಾದಿ ಜಾಗತೀಕರಣದ ನೀತಿಗಳನ್ನು ಕೃಷಿ ರಂಗದ ಮೇಲೆ ಹೇರುವ ಮೂಲಕ, ಕೃಷಿ ಉತ್ಪನ್ನಗಳ ಉತ್ಪಾದನಾವೆಚ್ಚವನ್ನು ವ್ಯಾಪಕವಾಗಿ ಹೆಚ್ಚಿಸಿ, ಕೃಷಿ ಉತ್ಪನ್ನಗಳಿಗೆ ನಷ್ಟದಾಯಕ ಬೆಲೆಗಳು ದೊರೆಯುವಂತೆ ಮಾಡಿ, ಈ ಸಾಲದ ಹೊರೆಯನ್ನು ಗ್ರಾಮೀಣ ದುಡಿಯುವ ಜನರ ಮೇಲೆ ಬಲವಂತವಾಗಿ ಹೇರಿದ ಅಪರಾಧಿಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳೇ ಆಗಿವೆ. ಕಂಪನಿ/ಕಾರ್ಪೋರೇಟ್ ಬೇಸಾಯವನ್ನು ಗ್ರಾಮೀಣ ಪ್ರದೇಶದ ಮೇಲೆ ಬಲವಂತವಾಗಿ ಹೇರುವ ಮತ್ತು ಅದಕ್ಕಾಗಿ ರೈತಾಪಿ ಆಧಾರಿತ ಸಾಂಪ್ರದಾಯಿಕ ಬೇಸಾಯವನ್ನು ನಾಶ ಮಾಡುವ ದುರುದ್ದೇಶದಿಂದಲೇ ಗ್ರಾಮೀಣ ದುಡಿಯುವ ಜನರ ಮೇಲೆ ಇದನ್ನು ಹೇರಲಾಗಿದೆ. ಹೀಗಾಗಿ ಸಾಲಮನ್ನಾದ ತೀವ್ರತರನಾದ ಒತ್ತಡ ಜನಗಳಿಂದ ಬಂದರೆ, ನಿಜ ಸಾಲಗಾರರಿಗೆ ಅದು ದೊರೆಯದಂತೆ ಮಾಡಲು,ಈ ರೀತಿ ಕ್ರಮವಹಿಸಿ ನಿಜ ರೈತರನ್ನು ಕೃಷಿಯಿಂದ ದೂರ ತಳ್ಳುವ ತಂತ್ರಗಳನ್ನು ಆಳುವ ವರ್ಗಗಳು ಅನುಸರಿಸುತ್ತಿವೆ.

ಕರ್ನಾಟಕದಲ್ಲಿ ರೈತ ಆತ್ಮಹತ್ಯೆಗಳು (2000–16)			
ಕ್ರಸಂ	ವರ್ಷ	ಕರ್ನಾಟಕದಲ್ಲಿ ರೈತ ಆತ್ಮಹತ್ಯೆಗಳ ಸಂಖ್ಯೆ	ಮುಖ್ಯ ಮಂತ್ರಿಗಳು
01	2000	2630	ಎಸ್.ಎಂ. ಕೃಷ್ಣ
02	2001	2510	–ಅದೇ–
03	2002	2340	–ಅದೇ–
04	2003	2680	–ಅದೇ–
05	2004	1960	ಧರ್ಮಸಿಂಗ್
06	2005	1880	–ಅದೇ–
07	2006	1720	ಕುಮಾರಸ್ವಾಮಿ
08	2007	2140	–ಅದೇ–
09	2008	1740	ಯೆಡಿಯೂರಪ್ಪ
10	2009	2280	–ಅದೇ–
11	2010	2590	–ಅದೇ–
12	2011	2100	–ಅದೇ–
13	2012	1880	ಸದಾನಂದಗೌಡ
14	2013	1400	ಜಗದೀಶ್ ಶೆಟ್ಟರ್
15	2014	770	ಸಿದ್ಧರಾಮಯ್ಯ
16	2015	1569	–ಅದೇ–
17	2016	2074	–ಅದೇ–
	ಒಟ್ಟು	34,363	

ಬದಲಾದ ಗ್ರಾಮೀಣ ಪರಿಸ್ಥಿತಿ ಮತ್ತು ನಿಜ ಸಾಲಗಾರರು:

ಅದಾಗಲೇ ಗ್ರಾಮೀಣ ಪ್ರದೇಶದಲ್ಲಿ ಜಾಗತೀಕರಣ ನೀತಿಗಳ ಕಾರಣದಿಂದ ಉಂಟಾಗಿರುವ ವ್ಯಾಪಕವಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ದುಡಿಯುವ ರೈತರು, ಗೇಣಿದಾರರು,ಕೂಲಿಕಾರರು, ಕಸುಬುದಾರರು ದೊಡ್ಡ ಪ್ರಮಾಣದಲ್ಲಿ ವ್ಯವಸಾಯಕ್ಕಾಗಿ ಮತ್ತು ಜೀವನ ನಿರ್ವಹಣೆಗಾಗಿ ಸಾಲ ಮಾಡಿ ತೀರಿಸಲಾಗದೇ ಇದ್ದ ಬದ್ದ ಆಸ್ತಿ–ಪಾಸ್ತಿಗಳನ್ನು ದುಬಾರಿ ಸಾಲ ನೀಡಿದ ಶ್ರೀಮಂತರಿಗೆ ಮಾರಿಕೊಂಡಿದ್ದಾರೆ. ಗ್ರಾಮೀಣ ಶ್ರೀಮಂತರಲ್ಲಿ ಅದಾಗಲೇ ಬೇನಾಮಿ ಹೆಸರಿನಲ್ಲಿ ಸಾವಿರಾರು ಎಕರೆ ಸೇರ್ಪಡೆ ಗೊಂಡಿದೆ. ಕಳೆದ 2015ಜೂನ್ ತಿಂಗಳಲ್ಲಿ ಸಿದ್ಧರಾಮಯ್ಯನವರ ಸರಕಾರ ಭೂ ಸುಧಾರಣೆಯ ತಿದ್ದಪಡಿ ವಿಧೆಯಕ–2015ನ್ನು ವಿಧಾನ ಸಭೆಯ ಅಧಿವೇಶನದ ಕೊನೆಯದಿನ ತರಾತುರಿಯಲ್ಲಿ ಮಂಡಿಸಿ,ಅಂಗೀಕರಿಸಿದ ಕಾಯ್ದೆಯು ಇಂತಹ ಶ್ರೀಮಂತರು ಬೇನಾಮಿ ಹೆಸರಿನ ತಮ್ಮ ಸಾವಿರಾರು ಎಕರೆ ಜಮೀನುಗಳನ್ನು ಅಧಿಕೃತಗೊಳಿಸಿಕೊಳ್ಳಲು ನೆರವು ನೀಡಿದೆ.ವಾರ್ಷಿಕ ತಲಾ 25 ಲಕ್ಷದಷ್ಟು ಆದಾಯ ಹೊಂದಿದ ಯಾರು ಬೇಕಾದರೂ ಸಾವಿರಾರು ಎಕರೆ ಜಮೀನು ಹೊಂದಲು ಅವಕಾಶ ನೀಡಿದೆ. ಆಮೂಲಕ ಸಾಲಬಾದಿತ ರೈತರಿಗೆ ಜಮೀನು ಮಾರಾಟಮಾಡಿಕೊಳ್ಳಲು ಮಾರುಕಟ್ಟೆಯನ್ನು ತೆರೆದಿದೆ. ಬಾದಿತ ರೈತರು ವ್ಯವಸಾಯದಿಂದ ಹೊರನಡೆಯಲು ದಾರಿಯನ್ನು ತೋರಿದೆ. ಇದೇ ಸಂದರ್ಭದಲ್ಲಿ ಹಾಲಿ ಇರುವ ಬಹುತೇಕ ಮಧ್ಯಮವರ್ಗದ ಕುಟುಂಬಗಳು ತಮ್ಮ ಜಮೀನುಗಳಲ್ಲಿ ವ್ಯವಸಾಯ ಮಾಡುವುದನ್ನು ನಿಲ್ಲಿಸಿವೆ.ವ್ಯವಸಾಯವು ಲಾಭದಾಯಕವಾಗಿಲ್ಲ ಎಂಬ ಕಾರಣಕ್ಕೆ ಅವುಗಳುಕೂಡಾ ಭೂಮಾಲಕ ಬಂಡವಾಳದಾರರಂತೆ, ತಮ್ಮ ಜಮೀನುಗಳನ್ನು ಬಹುತೇಕವಾಗಿ, ಗೇಣಿ/ಗುತ್ತಿಗೆ ಆಧಾರದಲ್ಲಿ ವ್ಯವಸಾಯ ಮಾಡುವ ಬಡವರಿಗೆ ನೀಡುತ್ತಿವೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸ್ತವಿಕವಾಗಿಬಡ ರೈತರು, ಕೂಲಿಕಾರರು, ಕಸುಬುದಾರರು ಗೇಣಿದಾರರಾಗಿ ನೀರಾವರಿ ಪ್ರದೇಶದ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಅವರು ದುಬಾರಿ ಗೇಣಿ ನೀಡಿ ಸಾಗುವಳಿಯಲ್ಲಿ ತೊಡಗುತ್ತಿರುವುದಿದೆ. ಇವರಿಗೆ ಸಾಲ ನೀಡುತ್ತಿರುವುದು ಶೇ 90ರಷ್ಟು ಸಾಂಸ್ಥಿಕ ಸಂಸ್ಥೆಗಳಾಗಿಲ್ಲ. ಬದಲಿಗೆ ಖಾಸಗೀ ಸಾಹುಕಾರರು, ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಒದಗಿಸುವ ಭೂಮಾಲಕ ಬಂಡವಾಳದಾರರು ಇಲ್ಲವೇ ಕೃಷಿ ಉತ್ಪನ್ನಗಳನ್ನು ಖರೀಧಿಸುವ ವ್ಯಾಪಾರಿಗಳು ಆಗಿದ್ದಾರೆ. ಇವರ ದುಬಾರಿ ಬಡ್ಡಿ/ಚಕ್ರಬಡ್ಡಿಗಳು ಹಾಗೂ ಅವರ ವಸೂಲಿಯ ಒತ್ತಡ ಮತ್ತು ದೌರ್ಜನ್ಯಗಳು ಅವರನ್ನು ಬಲಿ ಪಡೆಯುತ್ತಿವೆ.

ಮಳೆ ಆಧಾರಿತ ಪ್ರದೇಶದಲ್ಲಿ ಕೆಲವರಿಗೆ ಲಾವಣಿ/ಗೇಣಿಗೆ ನೀಡಿ, ಹೆಚ್ಚಿನವರು ಬದುಕಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ನಡೆದಿದೆ.

ಈ ಬದಲಾದ ಸ್ವರೂಪದ ವ್ಯವಸಾಯದಲ್ಲಿ ತೊಡಗಿದ ಈ ಜನ ಸಮುದಾಯಕ್ಕೆ ಬಹುತೇಕ ಸ್ವಂತ ಭೂಮಿಯೂ ಇಲ್ಲ, ಗೇಣಿಯಲ್ಲಿತೊಡಗಿದವರಿಗೆ ಸಾಂಸ್ಥಿಕ ಸಾಲ ಸೌಲಭ್ಯವೂ ಇಲ್ಲ. ಅವರನ್ನು ಸರಕಾರಗುರುತಿಸಿ ನೋಂದಣಿಯನ್ನೂ ಮಾಡಿಲ್ಲ. ಗ್ರಾಮೀಣ ಪ್ರದೇಶದ ವ್ಯವಸಾಯದಲ್ಲಿ ತೊಡಗಿ ಭಾದಿತರಾದ ನಿಜವಾದ ಸಾಲಗಾರರೆಂದರೇ ಇವರಾಗಿದ್ದಾರೆ. ಆದ್ದರಿಂದ ಈ ಸಾಂಸ್ಥಿಕ ಸಾಲಮನ್ನಾಗಳಿಂದ ಗ್ರಾಮೀಣ ಪ್ರದೇಶದ ಈ ಬಡವರಿಗೆ ಬಹುತೇಕ ಮಟ್ಟಿಗೆ ಪ್ರಯೋಜನವಿಲ್ಲ.

ಆದ್ದರಿಂದ ಸಾಲಮನ್ನಾವೆಂಬುದು ನಿಜವಾದ ವ್ಯವಸಾಯದಲ್ಲಿ ತೊಡಗಿದ ನಿಜವಾದ ಈ ಫಲಾನುಭವಿಗಳಿಗೆ ತಲುಪ ಬೇಕಾದಲ್ಲಿ, ಸಾಲ ಬಾಧಿತರು ಸಾಲ ಪರಿಹಾರವನ್ನು ಪಡೆಯುವ ನೀತಿಯನ್ನು ಸರಕಾರಗಳು ಮೊದಲು ಜಾರಿಗೊಳಿಸ ಬೇಕಾಗುತ್ತದೆ.ಆ ಮೂಲಕ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಿರುವ ಸಾಲಬಾದಿತ ರೈತರಿಗೆ, ಆತ್ಮಹತ್ಯೆಗೆ ಮನಸ್ಸು ಮಾಡದಂತೆ ಧೃಢ ವಿಶ್ವಾಸವನ್ನು ನೀಡಬೇಕಾಗುತ್ತದೆ.

ಸಾಲಮನ್ನಾ ಹೇಗೆ? ಕೇರಳ ಮಾದರಿ ಋಣಮುಕ್ತ ಕಾಯ್ದೆ ಜಾರಿ!

ವ್ಯವಸಾಯದಲ್ಲಿ ತೊಡಗಿ, ಅದರಿಂದ ವಿವಿಧ ಕಾರಣಗಳಿಗಾಗಿ ನಷ್ಟ ಉಂಟಾಗಿ, ಬಾಧಿತನಾದ ಈ ಬಡ ರೈತನಿಗೆ, ಕೂಲಿಕಾರ,ಕಸುಬುದಾರ, ಗೇಣಿ/ಗುತ್ತಿಗೆ ಬೇಸಾಯದಾರನಿಗೆ ಸಾಲ ಪರಿಹಾರ ದೊರೆಯ ಬೇಕಾದುದು ಮತ್ತು ಅಂತಹವರು ಸಾಲ ಬಾಧೆಯಿಂದ ಮುಕ್ತರನ್ನಾಗಿಸುವುದು ಅಗತ್ಯವಿದೆ. ಆದರೇ ನಿಜವಾದ ಸಾಲ ಬಾಧಿತರನ್ನು ಗುರುತಿಸುವುದು ಹೇಗೆ ಎಂಬ ಪ್ರಶ್ನೆ ಇಲ್ಲಿ ಇದೆ. ಸಾಲಬಾಧಿತರನ್ನು ಸರಿಯಾಗಿ ಗುರುತಿಸಬೇಕಾದರೇ ಸಾಲ ಬಾಧಿತರಿಗೆ ಸಾಲ ಪರಿಹಾರ ನೀಡುವ ಯೋಜನೆ/ ಕಾಯ್ದೆಯನ್ನು ರೂಪಿಸ ಬೇಕಾಗುತ್ತದೆ.

ಇಂತಹದೊಂದು ಕಾಯ್ದೆಯನ್ನು ರೂಪಿಸಿ ಅಲ್ಲಿ ರೈತರನ್ನು ಋಣಮುಕ್ತರನ್ನಾಗಿಸುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ ಮತ್ತು ರೈತರ ಆತ್ಮಹತ್ಯೆಗಳನ್ನು ತಡೆದ ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಈ ಹಿಂದಿನ ಸರಕಾರದ ಋಣ ಮುಕ್ತ ಕಾಯ್ದೆ ನಮಗೆ ಮಾದರಿಯಾಗಿದೆ.

ಅದರ ಪ್ರಕಾರ, ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದ ರೈತ ಪ್ರತಿನಿದಿಗಳು ಮತ್ತು ವಿವಿಧ ಪರಿಣಿತರಿರುವ ಋಣಮುಕ್ತ ಆಯೋಗವು, ರಾಜ್ಯದ ಸಾಲ ಬಾಧಿತರಿಂದ ಅಹವಾಲುಗಳನ್ನುಪಡೆದು, ನಿಜವಾದ ಬಾಧಿತರನ್ನು ಮತ್ತು ಅವರ ಸಾಲಬಾದೆಯನ್ನು ಪರಿಶೀಲಿಸುತ್ತದೆ, ಮಾತ್ರವಲ್ಲ ಅದುನಿಜ ಬಾಧಿತರು ಮತ್ತು ಅವರ ಸಾಲಬಾಧೆಯ ಪ್ರಮಾಣವನ್ನು ಗುರುತಿಸಿ, ಅವರಿಗೆ ಅಗತ್ಯವಿರುವ ಪರಿಹಾರವನ್ನು ರಾಜ್ಯ ಸರಕಾರ ನೀಡುವಂತೆಕ್ರಮವಹಿಸುತ್ತದೆ. ಆ ಮೂಲಕ ನಿಜ ಫಲಾನುಭವಿಗಳು ಪರಿಹಾರ ಪಡೆಯುವಂತೆ ಮಾಡಲಾಗಿದೆ.

ಆದರೆ ಇದುವರೆಗೆ ಸಾಲ ಮನ್ನಾ ಮಾಡಿದ ನಮ್ಮ ರಾಜ್ಯ ಸರಕಾರಗಳು ಆ ರೀತಿಯಾಗಿ ಸಾಲಬಾಧಿತರಿಗೆ ಪರಿಹಾರದ ಭರವಸೆಯನ್ನು ನೀಡಿ, ನಿಜ ಸಾಲಬಾಧಿತರನ್ನು ಮತ್ತು ಅವರ ಸಾಲದ ಬಾಧೆಯ ಪ್ರಮಾಣವನ್ನು ಗುರುತಿಸಿ, ನೆರವು ನೀಡುವ ಕ್ರಮದ ಬದಲಿಗೆ, ತೀರ ಸರಳವಾಗಿ ಸಾಲಬಾದಿತರ ಹೆಸರಿನಲ್ಲಿ ಸಹಕಾರ ಬ್ಯಾಂಕುಗಳಲೂಟಿಕೋರ ಪಟ್ಟಭದ್ರ ಭೂಮಾಲಕ–ಬಂಡವಾಳದಾರರಿಗೆನೆರವನ್ನು ಘೋಷಿಸಿ ರೈತರ ಸಾಲ ಮನ್ನಾಮಾಡಲಾಗಿದೆಯೆನ್ನಲಾಗುತ್ತದ '. ಹಾಗಾದರೆ, ಈ ಸಾಲಮನ್ನಾದ ಪ್ರಯೋಜನ ರೈತರಿಗೆ ಸಿಕ್ಕಿಲ್ಲವೇ ಎಂದು ಪ್ರಶ್ನಿಸಿದರೇ ಖಂಡಿತ ಸಿಕ್ಕಿದೆ. ಆದರೇ ಅದರ ಪ್ರಮಾಣ ಸಣ್ಣದಾಗಿದೆ.

ಆದ್ದರಿಂದ ಇಂತಹದ್ದೊಂದು ಋಣಮುಕ್ತ ಕಾಯ್ದೆಯೊಂದನ್ನು ಕೇರಳದ ಮಾದರಿಯಲ್ಲಿ ಕೇಂದ್ರಸರಕಾರ ಅಂಗೀಕರಿಸಿ ದೇಶದ ಎಲ್ಲ ರಾಜ್ಯಗಳಲ್ಲೂ ಅದು ಜಾರಿಗೆಬರುವಂತೆ ಕ್ರಮವಹಿಸುವುದು ಅಗತ್ಯವಿದೆ. ನಮ್ಮ ರಾಜ್ಯ ಸರಕಾರವು ಅದನ್ನು ಅಳವಡಿಸಿಕೊಳ್ಳಬೇಕಾಗಿದೆ.

ಇದರ ಜೊತೆಯಲ್ಲಿ ರಾಜ್ಯದ ರೈತರು, ನಾಗರಿಕರು ಗಮನಿಸಲೇಬೇಕಾದ ಮತ್ತೊಂದು ಪ್ರಮುಖ ಅಂಶವೇನೆಂದರೆ, ನಿರಂತರ ಸಾಲ ಮನ್ನಾ ಕೇಳುವುದೊಂದೇ ಪರಿಹಾರವೆಂದು ಭಾವಿಸಬಾರದು. ರೈತರು ಮತ್ತು ವ್ಯವಸಾಯ ಸಾಲಬಾಧಿತವಾಗದಂತೆ ಅದನ್ನು ಲಾಭದಾಯಕವನ್ನಾಗಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ, ಡಾ. ಎಂ.ಎಸ್ ಸ್ವಾಮಿನಾಥನ್ ಅದ್ಯಕ್ಷತೆಯ ರಾಷ್ಟ್ರೀಯ ಕೃಷಿ ಅಯೋಗದ ಸಲಹೆಯಂತೆ, ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚಕ್ಕೆ ಶೇ 50ರಷ್ಟು ಲಾಭಾಂಶ ಸೇರಿಸಿ, ನಿಗದಿಸುವ ಬೆಂಬಲ ಬೆಲೆಯನ್ನು ಕಾಯ್ದೆಯನ್ನಾಗಿಸಿ ಅದನ್ನು ಖಾತರಿಯಾಗಿ ದೊರೆಯುವಂತೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಬೇಕಾಗಿದೆ.

ಈ ಪಕ್ಷಗಳು ಮತ್ತು ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮಿಂದ ತಾವಾಗಿಯೇ ರೈತರ ಪರ ನಿಂತು ಅವರನ್ನು ರಕ್ಷಿಸುತ್ತವೆಂದು ನಿರೀಕ್ಷಿಸುವುದು ತಪ್ಪು ಲೆಕ್ಕಾಚಾರವಾಗುತ್ತದೆ. ಆದ್ದರಿಂದ, ಕಂಪೆನಿ/ಕಾರ್ಪೋರೇಟ್ ಕೃಷಿಯ ಕಡೆ ಮೋರೆ ಮಾಡಿರುವ ಸರಕಾರಗಳ ಮೋರೆಯನ್ನು ಇಂತಹ ಕ್ರಮಗಳ ಕಡೆ ಬಲವಂತವಾಗಿ ತಿರುಗಿಸಲು ಸಾದ್ಯವಾಗಬೇಕಾಗಿದೆ. ಅದು ಬಲವಾದ ಮತ್ತು ಧೃಢವಾದ ಚಳುವಳಿಗಳಿಂದ ಮಾತ್ರವೇ ಸಾದ್ಯ. ಆಗ ಮಾತ್ರವೇ ನಿಜವಾದ ಪರಿಹಾರ ಸಿಗುವ ಸಾದ್ಯತೆ ಇದೆ.

ಈ ಎರಡು ಮಹತ್ವದ ಕ್ರಮಗಳಿಗಾಗಿ, ದೇಶದ 170 ಕ್ಕೂ ಹೆಚ್ಚು ರೈತ ಸಂಘಗಳು ಒಟ್ಟಾಗಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡು, ಕಳೆದ ಒಂದು ವರ್ಷದಿಂದ ದೇಶವ್ಯಾಪ್ತಿಯಾಗಿ ಚಳುವಳಿಯಲ್ಲಿ ತೊಡಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ರಾಜ್ಯದ ರೈತರು/ರೈತ ಚಳುವಳಿಗಳು ರಾಜ್ಯ ಹಾಗೂ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಲು ಇವುಗಳಜೊತೆಕ್ಕೈ ಜೋಡಿಸಿ ಒತ್ತಾಯಿಸುವುದು ಅಗತ್ಯವಿದೆ.

ರಾಜ್ಯ ಸರಕಾರ ರೂಪಿಸಲಾಗುವ ಸಾಲ ಮನ್ನಾ ಯೋಜನೆಯು ನಿಜ ರೈತರಿಗೆ ತಲುಪಿಸಲು ಅಗತ್ಯ ಕ್ರಮಗಳಿಗಾಗಿಯೂ ಸಾಲಬಾದಿತ ರೈತರು/ ರೈತ ಮತ್ತಿತರ ಪ್ರಗತಿಪರ ಸಂಘಗಳು ಶ್ರಮಿಸಬೇಕಾಗಿದೆ. ●

ಇಂಧನ ಸುಂಕ ಸುಲಿಗೆಯನ್ನು ಮುಂದುವರೆಸಲು ಒಎನ್‌ಜಿಸಿ ಬಲಿ ಕೇಳುವ ಯೋಚನೆ!



ಒಎನ್‌ಜಿಸಿ ಅಂದರೆ ತೈಲ ಮತ್ತು ನೈಸರ್ಗಿಕ ಅನಿಲ ಕಾರ್ಪೊರೇಷನ್– ತೈಲ ಉತ್ಪಾದನೆ ಮತ್ತು ಶೋಧನೆಯಲ್ಲಿ ತೊಡಗಿರುವ ದೇಶದ ಸಾರ್ವಜನಿಕ ವಲಯದ 'ಮಹಾರತ್ನ' ಕಂಪನಿಗಳಲ್ಲಿ ಒಂದು. ಅಂದರೆ ಅತ್ಯಂತ ಲಾಭದಲ್ಲಿರುವ ಉದ್ದಿಮೆಗಳಲ್ಲಿ ಪ್ರಮುಖವಾದುದು.

ಪೆಟ್ರೋಲ್/ಡೀಸೆಲ್ ಬೆಲೆಗಳ ಏರಿಕೆಗಳೊಂದಿಗೆ ಸರಕಾರದ ವಿರುದ್ಧ ಆಕ್ರೋಶವೂ ಏರುತ್ತಿರುವುದನ್ನು ಕಂಡ ಅಚ್ಛೇದಿನ್(ಈಗ ಸಾಫ್ ನಿಯತ್!) ಸರಕಾರ ಚಿಂತಾಕ್ರಾಂತವಾಗಿದೆಯಂತೆ. ಕಳೆದ ಮೂರು ವರ್ಷಗಳಲ್ಲಿ ಜನಸಾಮಾನ್ಯರಿಂದ ಪೆಟ್ರೋಲ್/ಡೀಸೆಲ್ ಬೆಲೆಗಳ ಮೂಲಕ ಸುಲಿದಿರುವ ಅಬಕಾರಿ ಸುಂಕಗಳನ್ನು ಇಳಿಸುವ ಮಾರ್ಗ ತನ್ನ ಬಳಿಯಿದ್ದರೂ ಅದನ್ನು ಬಳಸುವುದಿಲ್ಲ ಎಂದು ಹೇಳಿಬಿಟ್ಟಿರುವ ಸರಕಾರ ಈಗ ಅ ಸುಲಿಗೆಯನ್ನು ಮುಂದುವರೆಸುತ್ತಲೇ ಪೆಟ್ರೋಲ್/ಡೀಸೆಲ್ ಬೆಲೆಯೇರಿಕೆಗಳನ್ನು ತಡೆಯುವ ಬಗ್ಗೆ ಯೋಚಿಸುತ್ತಿರುವಾಗ ಅದಕ್ಕೆ ಹೊಳೆದಿರುವುದು ಒಎನ್‌ಜಿಸಿ ಯನ್ನು ಹಿಂಡುವ ಯೋಚನೆ.

ಹೇಗೆ? ಈ ಸರಕಾರ ಇಂಧನ ಸಬ್ಸಿಡಿ ಕೊಡುತ್ತಿದ್ದಾಗ ಅದನ್ನು ತೈಲ ಉತ್ಪಾದಿಸುವ ಒಎನ್‌ಜಿಸಿ ಮತ್ತು ಒಐಎಲ್‌ನಿಂದ ಇಂಧನ ಮಾರಾಟ ಮಾಡುವ ಇಂಡಿಯನ್ ಆಯಿಲ್, ಹಿಂದುಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂ ಗಳಿಗೆ ವರ್ಗಾಯಿಸುತ್ತಿತ್ತು. ಜೂನ್ 2015ರಲ್ಲಿ ಆಗಿನ ತನ್ನ ಇಂಧನ ಸಬ್ಸಿಡಿಯ 40% ವನ್ನು ಹೀಗೆ ವಸೂಲು ಮಾಡಲಾಗಿತ್ತಂತೆ.

ಒಎನ್‌ಜಿಸಿ ದೇಶದ ಕಚ್ಚಾತೈಲ ಆವಶ್ಯಕತೆಯ 20%ವನ್ನು ಪೂರೈಸುತ್ತದೆ. ತಾನು ಪೂರೈಸುವ ತೈಲದ ಬೆಲೆಯನ್ನು ಅಂತರ್ರಾಷ್ಟ್ರೀಯ ಬೆಲೆಗಳಿಗಿಂತ ಕಮ್ಮಿ ಬೆಲೆಗಳಲ್ಲಿ ತೈಲ ಮಾರಾಟ ಕಂಪನಿಗಳಿಗೆ ಮಾರುವಂತೆ ಮಾಡುವುದು ಈ ಯೋಚನೆಯ ಸಾರ. ಅಂದರೆ ಒಎನ್‌ಜಿಸಿ ನಷ್ಟದ ವ್ಯವಹಾರ ನಡೆಸಿ ಸರಕಾರದ ಇಂಧನ ಅಬಕಾರಿ ಸುಂಕ ಸುಲಿಗೆಯನ್ನು ರಕ್ಷಿಸಬೇಕು.

ಆದರೆ ಈಗಾಗಲೇ ಒಂದು ವರ್ಷದಲ್ಲೇ ಎರಡು ಬಾರಿ ರೀತಿ ಹಿಂಡಿಸಿಕೊಂಡಿರುವ ಒಎನ್‌ಜಿಸಿಯ ಅಧ್ಯಕ್ಷರು, ಖಂಡಿತಾ ಸಾಧ್ಯವಿಲ್ಲ, ನಮ್ಮ ಜೇಬೇ ಖಾಲಿಯಾಗಿದೆ ಎಂದು ಪೆಟ್ರೋಲಿಯಂ ಮಂತ್ರಿಗಳಿಗೆ ಹೇಳಿರುವುದಾಗಿ ವರದಿಯಾಗಿದೆ. ಈ ಮೂಲಕ ಈ ಸರಕಾರದ ಕೊನೆಯ ವರ್ಷದಲ್ಲಿ ಅದರ ನಿಯತ್ತು ಎಷ್ಟು ಸ್ವಚ್ಛವಾಗಿದೆ ಎಂಬ ಸಂಗತಿಯತ್ತ ಗಮನ ಹರಿಸುವಂತಾಗಿದೆ.

ಈ 'ಮಹಾರತ್ನ'ದ ಜೇಬು ಖಾಲಿಯಾಗಿರುವುದು ಹೇಗೆ, ಅದನ್ನು ಖಾಲಿ ಮಾಡಿದವರು ಯಾರು? ಅದನ್ನು ಖಾಲಿ ಮಾಡಿದವರು ಈಗ ಸಾಫ್ ನಿಯತ್ತಿನ ಘೋಷಣೆಯ ಹಾಕುವ ಮಂದಿಯೇ ಎಂದು ಒಎನ್‌ಜಿಸಿ ಅಧ್ಯಕ್ಷರು ಪೆಟ್ರೋಲಿಯಂ ಮಂತ್ರಿಗಳ ಮುಖದೆದುರು ಹೇಳಿದ್ದಾರೆಯೇ? ಆಬಗ್ಗೆ ವರದಿಯಾಗಿಲ್ಲ. ಈಗ ದೇಶದಲ್ಲಿರುವ ವಾತಾವರಣದಲ್ಲಿ ಜೇಬು ಖಾಲಿಯಾಗಿದೆ ಎಂದು ಹೇಳಿರುವುದೇ ಧೈರ್ಯದ ಕೆಲಸ, ಇನ್ನು ನೀವೇ ಖಾಲಿ ಮಾಡಿದ್ದು ಎಂದು ಹೇಳಬೇಕೆನ್ನುವುದು ಅತಿ–ನಿರೀಕ್ಷೆಯೇ ಆಗುತ್ತದೆ.

ಆದರೆ ಈ ಸರಕಾರವೇ ಅದರ ಜೇಬು ಖಾಲಿ ಮಾಡಿದ್ದೆಂಬುದು ಮಾತ್ರ ನಿಜಸಂಗತಿ ಎನ್ನುತ್ತಾರೆ ವಿಶ್ಲೇಷಕರು.

ಒಎನ್‌ಜಿಸಿಯನ್ನು ಎರಡು ಬಾರಿ ಹಿಂಡಿರುವುದು ಹೇಗೆ?

ಕಳೆದ ಆಗಸ್ಟ್‌ನಲ್ಲಿ ಒಎನ್‌ಜಿಸಿ ಕೃಷ್ಣ–ಗೋದಾವರಿ ಕೊಳ್ಳದ (ಕೆಜಿ ಬೇಸಿನ್)ಅನಿಲ ಬ್ಲಾಕ್‌ನಲ್ಲಿ ಜಿಎಸ್‌ಪಿಸಿ ಅಂದರೆ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್‌ನ ಪಾಲಿನ 80%ವನ್ನು 7783 ಕೋಟಿ ರೂ. ತೆತ್ತು ಖರೀದಿಸಿತು. ಇದೊಂದು ಅತ್ಯಂತ ಪಶ್ನಾರ್ಹ ಹೂಡಿಕೆಯಾಗಿತ್ತು. ಜಿಎಸ್‌ಪಿಸಿ2005ರಲ್ಲಿ ಶೋಧಿಸಿತು ಎನ್ನಲಾದ ಈ ಅನಿಲ ಬ್ಲಾಕ್ ಮೇಲೆ 19, 576 ಕೋಟಿ ರೂ. ಹೂಡಿಕೆ ಮಾಡಿದರೂ, 2015ರ ವರೆಗೂ ಯಾವುದೇ ವಾಣಿಜ್ಯ ಉತ್ಪಾದನೆ ಮಾಡಲು ಸಾಧ್ಯವಾಗಿಲ್ಲ. ಇಂತಹ ವ್ಯವಹಾರವನ್ನು ಒಎನ್‌ಜಿಸಿ ಅಷ್ಟೊಂದು ದುಡ್ಡು ಸುರಿದು ನಡೆಸಿದ್ದೇಕೆ ಎಂಬ ಪ್ರಶ್ನೆ ಸಹಜ.

ಈ ಪ್ರಶ್ನೆಗೆ ಉತ್ತರ ಹುಡುಕುವ ಹಾದಿ ಈ ಸರಕಾರದ ನಿಯತ್ತಿನತ್ತ ಒಯ್ಯುತ್ತದೆ. ಈ ಜಿಎಸ್‌ಪಿಸಿ 'ಗುಜರಾತ್ ಮಾದರಿ'ಯ ಒಂದು ಅಭಿನ್ನ ಅಂಗ. ಹಾಲಿ ಪ್ರಧಾನಿಗಳು ಅಲ್ಲಿ ಮುಖ್ಯಮಂತ್ರಿಯಾಗಿದ್ದ ಕಾಲದ ಒಂದು ಪ್ರಮುಖ ಶೋಪೀಸ್ ಎನ್ನಲಾಗಿದೆ. ಇದನ್ನು ಹೇಗಾದರೂ ಉಳಿಸಲು, ಅಂದರೆ ಒಎನ್‌ಜಿಸಿ ಈ ವ್ಯವಹಾರ ನಡೆಸಲು ಒತ್ತಡ ಯಾರಿಂದ ಬಂತು ಎಂಬ ಬಗ್ಗೆ ಈಗ ಬಹಳಷ್ಟು ಮಂದಿಗೆ ಸಂದೇಹ ಉಳಿದಿಲ್ಲ. (ವಾಸುದೇವ ಚಕ್ರವರ್ತಿ, ನ್ಯೂಸ್‌ಕ್ಲಿಕ್, ಜೂನ್ 2)

"ಮೋದಿಯವರ ಅಡಿಯಲ್ಲಿನ ಜಿಎಸ್‌ಪಿಸಿ ಹಗರಣದಿಂದ ಪಾರಾಗಲು ಒಎನ್‌ಜಿಸಿಯ ರಕ್ತ ಬಸಿಯಲಾಗಿದೆ. ಮುಖ್ಯಮಂತ್ರಿಯಾಗಿ ಕೆಜಿ ಕೊಳ್ಳದಲ್ಲಿ 20ಟಿಸಿಎಫ್ ನೈಸರ್ಗಿಕ ಅನಿಲ ಸಿಗುತ್ತದೆಂಬ ಅವರ ದಾವೆಯ ಮೇಲೆ 15 ಸಾರ್ವಜನಿಕ ವಲಯದ ಬ್ಯಾಂಕುಗಳಿಂದ 20,000 ಕೋಟಿ ರೂ. ಸಾಲ ತರಲಾಯಿತು. ಅದನ್ನೀಗ ಒಎನ್‌ಜಿಸಿ ಮೂಲಕ ತೆರಲಾಗುತ್ತಿದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಈ ಕುರಿತು ಟಿಪ್ಪಣಿ ಮಾಡಿದ್ದಾರೆ.

ಆ ನಂತರ ನಡೆದಿರುವ ಎರಡನೇ ಹಿಂಡಿಕೆಯ ವಿಷಯದಲ್ಲಿ ಈ ಮೇಲಿನ ಹಿಂಡಿಕೆಯ ಬಗ್ಗೆ ಇರುವ ಸಂದೇಹವೇನೂ ಇಲ್ಲ. **ಹಿಂದುಸ್ತಾನ್ ಪೆಟ್ರೋಲಿಯಂನಲ್ಲಿ ಕೇಂದ್ರ ಸರಕಾರದ 51.11% ಶೇರುಗಳನ್ನು ಒಎನ್‌ಜಿಸಿ ಖರೀದಿಸಿದ್ದು. ಇದಕ್ಕಾಗಿ ಒಎನ್‌ಜಿಸಿ ನಾಲ್ಕು ಸರ್ಕಾರಿ ಒಡೆತನದ ಬ್ಯಾಂಕುಗಳು ಮತ್ತು ಮೂರು ಖಾಸಗಿ ಬ್ಯಾಂಕುಗಳಿಂದ 35,000 ಕೋಟಿ ರೂ.ಗಳಷ್ಟು ಭಾರೀ ಮೊತ್ತವನ್ನು ಎರವಲು ತರಬೇಕಾಯಿತು.**

ಇದು ಒಂದೆಡೆಯಲ್ಲಿ ಜಿಎಸ್‌ಟಿಯಿಂದ ಆಗಲಿದ್ದ ಆದಾಯ ಕೊರತೆಯಿಂದ ಹಣಕಾಸು ಕೊರತೆ ಜಿಡಿಪಿಯ 3.2%ಕ್ಕಿಂತ ಹೆಚ್ಚಾಗಬಾರದೆಂಬ ತಾನೇ ಹಾಕಿಕೊಂಡ ನವ–ಉದಾರವಾದಿ ಬೇಡಿಯೊಳಗೆ ಇರುವ ಪರದಾಟದ ಭಾಗವಾಗಿದ್ದರೆ, ಇನ್ನೊಂದೆಡೆಯಲ್ಲಿ, 72,000 ಕೋಟಿರೂ.ಗಳನ್ನು ಸಾರ್ವಜನಿಕ ವಲಯದ ಶೇರು ಮಾರಾಟದಿಂದ ಪಡೆಯಲು ಹಾಕಿಕೊಂಡಿದ್ದ ಬಜೆಟ್ ಗುರಿಯನ್ನು ತಲುಪುವ ಪರದಾಟದ ಭಾಗವೂ ಆಗಿತ್ತು.

ಒಂದೇ ಕಲ್ಲಿನಿಂದ ಅದೆಷ್ಟು ಹಕ್ಕಿಗಳನ್ನು ಹೊಡೆಯುವ ತಂತ್ರ?

ಇಲ್ಲಿ ತನ್ನ ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಗುರಿಯನ್ನು ತಲುಪಲು ಈ ಸರಕಾರ ಹಿಡಿದ ಮಾರ್ಗವೆಂದರೆ ಒಂದು ಸಾರ್ವಜನಿಕ ವಲಯದ ಉದ್ದಿಮೆಯಲ್ಲಿನ ತನ್ನ ಶೇರುಗಳನ್ನು ಇನ್ನೊಂದು ಸಾರ್ವಜನಿಕ ವಲಯದ ಕಂಪನಿ ಖರೀದಿಸುವಂತೆ ಮಾಡುವ 'ಜಾಣ'ತನ! ಇದರೊಂದಿಗೆ ಇಂಧನ ಸಬ್ಸಿಡಿಯನ್ನು ಹೊರುವಂತೆ ಮಾಡಿದರೆ?

ಒಎನ್‌ಜಿಸಿ ಇಂಧನ ಸಬ್ಸಿಡಿಯ ಹೊರೆಯನ್ನು ಹೊರುವಂತೆ ಮಾಡುವ ಯೋಚನೆಯ ಬಗ್ಗೆ ನ್ಯೂಸ್‌ಕ್ಲಿಕ್ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಅವರನ್ನು ಕೇಳಿದಾಗ ಅವರು "ಇಂಧನ ಬೆಲೆಗಳನ್ನು ಇಳಿಸುವುದು ಸರಕಾರದ 'ರಾಜಕೀಯ ಜವಾಬ್ದಾರಿ. ಅದನ್ನು ಅದು ಒಎನ್‌ಜಿಸಿ ಮೇಲೆ ದಾಟಿಸಲು ಪ್ರಯತ್ನಿಸುತ್ತಿದೆ" ಎಂದಿದ್ದಾರೆ. ಇದು ಈ 'ಮಹಾರತ್ನ'ದ ಮೇಲೆ ಎಂತಹ ಪರಿಣಾಮವನ್ನು ಬೀರಬಹುದು ಎಂಬ ಬಗ್ಗೆ ಹೇಳುತ್ತ, ಇದು ಅದರ ಹೂಡಿಕೆ ಸಾಮರ್ಥ್ಯವನ್ನು, ಆಮೂಲಕ ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸುವ ಶಕ್ತಿಯನ್ನು ಕುಗ್ಗಿಸಬಹುದು, ಏರ್ ಇಂಡಿಯಾ ಮಾರಾಟದ ಉದಾಹರಣೆ ನಮ್ಮ ಮುಂದಿದೆ, ಇದು ಈ ಸರಕಾರದ ಆಟದ ಯೋಜನೆ ಎಂದಿದ್ದಾರೆ.

ಹೌದು, ಈ 'ಮಹಾರತ್ನ'ದ ಲಾಭಗಳಿಗೆ ತೂತು ಬಿದ್ದು ಕ್ರಮೇಣ ಅವನತಿ ಆರಂಭವಾಗಿ ನಂತರ ಅದರ ಖಾಸಗೀಕರಣದ ಕೂಗು ಏಳುವಂತೆ ಮಾಡಬಹುದು– ತೈಲ ಶೋಧನೆಯ ರಂಗದಲ್ಲಿರುವ ಅಂಬಾನಿಯ ಕಂಪನಿಗೆ ಅಗ್ಗದಲ್ಲಿ ಎರಡೆರಡು ದೊಡ್ಡ ಆಸ್ತಿ ಸಿಗುವ ಅವಕಾಶ! ಅದರ ಜೊತೆಗೆ ಹಿಂದುಸ್ತಾನ್ ಪೆಟ್ರೋಲಿಯಂನ ಖಾಸಗೀಕರಣದ ಕೂಗೂ ಸೇರುತ್ತದೆ! ಒಂದೇ ಕಲ್ಲಿಗೆ ಎಷ್ಟೊಂದು ಹಕ್ಕಿಗಳು!

ಸಿಂಗಪುರದ ಪ್ರವಾಸದ ವೇಳೆಯಲ್ಲಿ ಪ್ರಧಾನಿಗಳು ನಾನ್ಯಾಂಗ್ ಟೆಕ್ನಿಕಲ್ ಯೂನಿವರ್ಸಿಟಿ(ಎನ್‌ಟಿಯು)ನಲ್ಲಿ ನಡೆದ 'ಸಂದರ್ಶನ'ದ ಕೊನೆಯಲ್ಲಿ ಸಂದರ್ಶಕ ಪ್ರೊ. ಸುರೇಶ್, ತಾವು ಯಾವಾಗಲೂ ಇಷ್ಟೊಂದು ಕಠಿಣ ಕೆಲಸವನ್ನು ಹೇಗೆ ಮಾಡುತ್ತೀರಿ ಎಂದು ಕೇಳಿದಾಗ ಬಡಜನರ ಸಂಕಟಗಳು ಮತ್ತು ಸೈನಿಕರ ತ್ಯಾಗಗಳ ನಡುವೆ ಶಾಂತಿಯಿಂದ ನಿದ್ದೆ ಮಾಡುವ ಶ್ರೀಮಂತಿಕೆ ಹೇಗೆ ಸಾಧ್ಯ ಎಂದ ಅವರು 2001ರಿಂದ 15 ನಿಮಿಷಗಳ ರಜೆಯನ್ನೂ ತಾನು ತಗೊಂಡಿಲ್ಲ ಎಂದರಂತೆ.

ಈ 'ಸಂದರ್ಶನ'ದ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಅಧಿಕೃತ ಅನುವಾದಕರ ಮಾತುಗಳನ್ನು ಕೇಳಿದರೆ ಪ್ರಶ್ನೆ ಮತ್ತು ಉತ್ತರಗಳು ಮೊದಲೇ ತಯಾರಾಗಿದ್ದವು ಎನಿಸುತ್ತಿತ್ತು

–ಸುದ್ದಿ 1

ರೈತರು ತಮ್ಮ ಬೆಳೆಗಳಿಗೆ ನ್ಯಾಯಯುತ ಬೆಲೆಗಳು ಬೇಕೆಂದು ಚಳುವಳಿಗಳನ್ನು ನಡೆಸುತ್ತಿರುವ ಬಗ್ಗೆ ಕೇಳಿದಾಗ ಮೋದಿ ಸರಕಾರದ ಕೃಷಿ ಮಂತ್ರಿಗಳು 'ರೈತರು ಪ್ರಚಾರ ಪಡೆಯಲಿಕ್ಕಾಗಿ ಚಳುವಳಿ ಮಾಡುತ್ತಾರೆ'ಎಂದು ಟಿಪ್ಪಣಿ ಮಾಡಿರುವುದಕ್ಕೆ ವ್ಯಾಪಕ ಪ್ರತಿಕ್ರಿಯೆಗಳು ಬಂದಿವೆ

–ಸುದ್ದಿ 2



ವ್ಯಂಗ್ಯಚಿತ್ರ: ಶೇಖರ್ ಗುರೇರ

ಬಡಜನರ ಸಂಕಟ ಶಮನಕ್ಕಾಗಿ ನೇಮಕರಾದವರು ಇವರು....

ಯುಪಿಎ–1 ಸರಕಾರದ ಅಡಿಯಲ್ಲಿ ಬಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಥವ ನರೇಗ ಮೊತ್ತ ಮೊದಲ ಬಾರಿಗೆ ವರ್ಷಕ್ಕೆ 100ದಿನಗಳ ಕೆಲಸ ಗ್ರಾಮೀಣ ಬಡಜನರ ಹಕ್ಕು ಎಂದು ಪ್ರತಿಪಾದಿಸಿತು. ಇದು ಮುಂದೆ 200 ದಿನಗಳಿಗೆ ಏರಬೇಕು ಎಂದಿತ್ತು.

ಇತ್ತೀಚೆಗಷ್ಟೇ ಬಡಜನರ ಸಂಕಟಗಳಿಂದಾಗಿ ಶಾಂತಿಯುತವಾಗಿ ನಿದ್ದೆ ಮಾಡಿಲ್ಲ, 2001ರಿಂದ 15 ನಿಮಿಷಗಳ ರಜೆಯನ್ನೂ ತಗೊಂಡಿಲ್ಲ ಎಂದು ಸಾರ್ವಜನಿಕವಾಗಿ ಸ್ವತಃ ಹೇಳಿಕೊಂಡಿರುವ ಪ್ರಧಾನಿಗಳ ಆಳ್ವಿಕೆಯಲ್ಲಿ ಅದು 150ಕ್ಕಾದರೂ ಏರಿರಬಹುದು ಎಂಬ ನಿರೀಕ್ಷೆ ಸಹಜವೇ. ಆದರೆ ವಾಸ್ತವವಾಗಿ ಅದು 50ರ ಕೆಳಗೇ ಇದೆ. ಈಗ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 28ರಲ್ಲಿ ಕನಿಷ್ಟ ಕೂಲಿಯನ್ನು ಕೊಡಲಾಗುತ್ತಿಲ್ಲ. ಇದಕ್ಕಾಗಿ ರಾಜ್ಯಗಳಿಗೆ ನೀಡುತ್ತಿದ್ದ ಅನುದಾನವನ್ನು ತೀವ್ರವಾಗಿ ಕಡಿತಮಾಡಲಾಗಿದೆ ಎಂದೂ ಹಲವು ರಾಜ್ಯಗಳು ದೂರಿವೆ. ಬಹುಶಃ ಬಡವರ ಸಂಕಟಗಳ ಪರಿಹಾರಕ್ಕೆ ಇದರಿಂದೇನೂ ಪ್ರಯೋಜನವಿಲ್ಲ ಎಂದು ಪ್ರಧಾನಿಗಳು ಭಾವಿಸಿರಬೇಕು.

ಈ ಕಾಯ್ದೆಯಡಿ ಕೇಂದ್ರ ಉದ್ಯೋಗ ಖಾತ್ರಿ ಮಂಡಳಿ(ಸಿಇಜಿಸಿ) ರಚಿಸಬೇಕು. ಸಹಜವಾಗಿಯೇ ಇದರ ಸದಸ್ಯರು ಆರ್ಥಿಕ ತಜ್ಞರು, ಸಮಾಜ ಶಾಸ್ತ್ರಜ್ಞರು, ಸಾಮಾಜಿಕ ಕಾರ್ಯಕರ್ತರು ಎಂದು ನಿರೀಕ್ಷಿಸಬಹುದು. ಆರಂಭದಲ್ಲಿ ಅದು ನಿಜವೂ ಆಗಿತ್ತು. ಉದಾಹರಣೆಗೆ, ಅರ್ಥಶಾಸ್ತ್ರದ ಪ್ರಾಧ್ಯಾಪಕ ಜೀನ್ ಡ್ರೀಝ್, ನಿವೃತ್ತ ಐಎಎಸ್ ಅಧಿಕಾರಿ ಮತ್ತು ಸಾಮಾಜಿಕ ಕಾರ್ಯಕರ್ತರಾದ ಅರುಣಾ ರಾಯ್, ನಿಖಿಲ್ ಡೇ ಇತ್ಯಾದಿ. ಆದರೆ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಮಾಡಿರುವ ಹೊಸ ನೇಮಕಗಳಲ್ಲಿ ಕೆಲವನ್ನು ನೋಡಿ:

* ಹಿತೇಶ್ ಸರ್ಕಾರ್, ಆರೆಸ್ಸೆಸ್ ಹಿಂದಿ ವಾರಪತ್ರಿಕೆ 'ಪಾಂಚಜನ್ಯ'ದ ಸಂಪಾದಕರು
* ಸಂಜಯ್ ಚತುರ್ವೇದಿ, ದಿವ್ಯಪ್ರೇಮ ಸೇವಾ ಮಿಶನ್‌ನ ಅಂಗಸಂಸ್ಥೆಯ ಸಂಯೋಜಕ, ಬಾಬಾ ರಾಂದೇವ್ ಅವರ ಪತಂಜಲಿ ಕೂಡ ಇದರ ಭಾಗೀದಾರರು.
* ಸುಧೀರ್ ಅಗರ್‌ವಾಲ್, ಬಾಬಾ ರಾಂದೇವ್ ಕೇಸ್‌ಗಳನ್ನು ನೋಡಿಕೊಳ್ಳುತ್ತಿದ್ದೇನೆ ಎಂದಿರುವ ವಕೀಲ
* ಜಿ.ವಾಸುದೇವ್, ವಿವೇಕಾನಂದ ಕೇಂದ್ರ, ಕನ್ಯಾಕುಮಾರಿ
* ವಿಕ್ರಾಂತ್ ಮುಂಡ್ಕೂರ್, ಬೆಂಗಳೂರಿನ ಹೆಚ್‌ಯುವಿಎ ಏರ್ ಟೆಕ್ನಾಲಜೀಸ್ ಕಂಪನಿಯ ಸಿಇಒ!

(ಕಮಲ್ ಮಿತ್ರ ಚೆನೊಯ್, ದಿ ಸಿಟಿಝನ್, ಜೂನ್4)

ಜೂನ್ 20ರಿಂದ ಒಂದು ವರ್ಷ ಇವರೆಲ್ಲ ಕೇಂದ್ರ ಉದ್ಯೋಗ ಖಾತ್ರಿ ಮಂಡಳಿಯ ಸದಸ್ಯರಾಗಿರುತ್ತಾರೆ.

ಇವರಿಗೂ ಗ್ರಾಮೀಣ ಉದ್ಯೋಗ ಖಾತ್ರಿಗೂ ಇರುವ ಸಂಬಂಧವಾದರೂ ಏನು ಎಂದು ಸಹಜವಾಗಿಯೇ ಪ್ರಶ್ನಿಸಬಹುದು. ಬಹುಶಃ ಇವರಾದರೂ ಬಡಜನರ ಸಂಕಟಗಳನ್ನು ಪರಿಹರಿಸಿ ಪ್ರಧಾನಿಗಳು ಇನ್ನಾದರೂ ಶಾಂತಿಯಿಂದ ನಿದ್ದೆ ಮಾಡಲು ಅವಕಾಶವಾಗಬಹುದು ಎಂದಿರಬಹುದೇ ಅಥವ ಈ ಕಾಯ್ದೆಯ ಮತ್ತು ಬಡವರ ಸಂಕಟದ ಬಗ್ಗೆ ಈ ಸರಕಾರದ ನಿಜವಾದ ನಿಲುವಿನ ದ್ಯೋತಕವೇ?



ವ್ಯಂಗ್ಯಚಿತ್ರ: ಕೀರ್ತಿಶ್. ಬಿಬಿಸಿ ನ್ಯೂಸ್

ದುಡಿಯುವ ಜನತೆಯ ತಲಾ ವರಮಾನಗಳು ಇಳಿದಿದ್ದರೂ ನಾಲ್ಕು ವರ್ಷಗಳ "ಸಾಧನೆ'ಗಳ ಸಂಭ್ರಮ!



ಮೋದಿ ಸರ್ಕಾರದ ಅವಧಿಯಲ್ಲಿ ದೇಶದ ಜನಸಂಖ್ಯೆಯ ಅರ್ಧ ಭಾಗಕ್ಕಿಂತಲೂ ಹೆಚ್ಚಿನ ಮಂದಿಯ ಬದುಕು, ಅದು ಅಧಿಕಾರಕ್ಕೆ ಬರುವ ಮುನ್ನ ಇದ್ದ ಪರಿಸ್ಥಿತಿಗೆ ಹೋಲಿಸಿದರೆ, ಈಗ ಸಂಪೂರ್ಣವಾಗಿ ಹದಗೆಟ್ಟಿದೆ ಎಂಬ ಅಂಶವು ಯಾವುದೇ ರೀತಿಯಿಂದ ನೋಡಿದರೂ ನಿಚ್ಚಳವಾಗಿದೆ. ಆದರೂ ಈ ನಾಲ್ಕು ವರ್ಷಗಳ "ಸಾಧನೆ"ಯನ್ನು ಸಂಭ್ರಮಿಸಬೇಕಾದರೆ ಒಂದು ರೀತಿಯ ಸೂಕ್ಷ್ಮಸಂವೇದನಾಹೀನತೆ ಬೇಕಾಗುತ್ತದೆ. ಇಂತಹ ಸಾಧ್ಯತೆ ಇರುವುದು ಮೋದಿ ಪಡೆಗೆ ಮಾತ್ರ. ಎನ್ನುತ್ತಾರೆ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅವರ The Modi Govt's "Achievements" ಲೇಖನದ ಭಾವಾನುವಾದ:

ಕೆ.ಎಂ.ನಾಗರಾಜ್

ಮೋದಿ ಸರ್ಕಾರವು ತನ್ನ ಅಧಿಕಾರದ ನಾಲ್ಕು ವರ್ಷ ಪೂರೈಸಿದ ಸಂದರ್ಭದಲ್ಲಿ ಅದ್ದೂರಿಯ ಸಂಭ್ರಮಾಚರಣೆ ಮಾಡುತ್ತಿದೆ. ಈ ನಾಲ್ಕು ವರ್ಷಗಳಲ್ಲಿ ಮೋದಿ ಸರ್ಕಾರವು ಹೋಲಿಕೆಗೆ ನಿಲುಕದ ರೀತಿಯ ಸಾಮಾಜಿಕ ಹಾಗೂ ರಾಜಕೀಯ ಅವನತಿಯ ಪ್ರಕ್ರಿಯೆ ಹರಿಯಬಿಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಈ ಅವಧಿಯಲ್ಲಿ ಅಪಾರ ಸಂಖ್ಯೆಯ ಭಾರತೀಯರಿಗೆ ಬಂದೊದಗಿದ ಪರಿಸ್ಥಿತಿಯ ಅವಲೋಕನವೇ ಇಲ್ಲಿನ ಉದ್ದೇಶ.

ಈ ಅವಲೋಕನ ಮಾಡುವಾಗ ಒಂದು ಅಡಚಣೆ ತಕ್ಷಣ ಎದುರಾಗುತ್ತದೆ. ಜೀವನ ಮಟ್ಟಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ಸಂಗ್ರಹಣೆಯ ಬಗ್ಗೆ ನಮ್ಮ ದೇಶದ ವ್ಯವಸ್ಥೆಯು ಇಡೀ ವಿಶ್ವದಲ್ಲೇ ಅತ್ಯುತ್ತಮವಾದದ್ದು ಮತ್ತು ವಿಶ್ವಾಸಾರ್ಹವಾದದ್ದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಐದು ವರ್ಷಗಳಿಗೊಮ್ಮೆ, ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಮೂಲಕ ಕುಟುಂಬಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸಲಾಗುತ್ತಿತ್ತು ಮತ್ತು ಈ ಸ್ಯಾಂಪಲ್ ಸಂಗ್ರಹಣೆಯ ಗಾತ್ರವು ವಿಶ್ವದ ಯಾವುದೇ ದೇಶಕ್ಕಿಂತ ಹೆಚ್ಚಿನದಾಗಿರುತ್ತಿತ್ತು. ಪ್ರೊ. ಪಿ.ಸಿ. ಮಹಲನೋಬಿಸ್ ಅವರ ಮಾರ್ಗದರ್ಶನದಲ್ಲಿ ಆರಂಭವಾದ ಈ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಗ್ರಹಿಸುತ್ತಿದ್ದ ಮಾಹಿತಿಯು ಜನರ ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಬೆಳಕು ಚೆಲ್ಲುತ್ತಿತ್ತು. ಮತ್ತು, ಈ ಮಾಹಿತಿಯನ್ನು ಆಧರಿಸಿ ಅರ್ಥಪೂರ್ಣ ಚರ್ಚೆಗಳೂ ನಡೆಯುತ್ತಿದ್ದವು. ಈ ಸರ್ವೆ ಸಂಗ್ರಹಿಸಿದ ಮಾಹಿತಿಯನ್ನು ಈಗ ಬಹಿರಂಗ ಪಡಿಸುತ್ತಿಲ್ಲ ಎಂಬುದು ಒಂದು ಕಡೆಯಾದರೆ, ಮತ್ತೊಂದೆಡೆಯಲ್ಲಿ, ಸರ್ವೆ ಕೆಲಸವನ್ನೇ ಈಗ ಕೈಗೆತ್ತಿಕೊಳ್ಳುತ್ತಿಲ್ಲ. ಹಾಗಾಗಿ, ನಿಖರ ಮಾಹಿತಿಯ ಕೊರತೆಯ ಹಿನ್ನೆಲೆಯಲ್ಲಿ ಮೋದಿ ಸರ್ಕಾರದ ಸಾಧನೆಗಳ ಬಗ್ಗೆ ಅವರು ಆಡುವ ಆಡಂಬರದ ಮಾತುಗಳ ಬಗ್ಗೆ ಆಕ್ಷೇಪ ಎತ್ತುವುದು ಬಹಳ ತ್ರಾಸದಾಯಕ ಕೆಲಸ.

ಕಣ್ಣಿಗೆ ಮಣ್ಣೆರಚುವ ರೀತಿಯ ಅಂಕಿ-ಅಂಶಗಳು ಎದುರಾಗುವ ಪರಿಸ್ಥಿತಿಯಲ್ಲೂ, ಅದೃಷ್ಟವಷಾತ್, ಬೇರೆ ಕೆಲವು ಅಧಿಕೃತ ಅಂಕಿ-ಅಂಶಗಳ ಮೂಲಕವೇ ಸತ್ಯ ಇಣುಕುತ್ತದೆ. ಅಂತಹ ಅಂಕಿ-ಅಂಶಗಳ ಮೂಲಕ, ಮೋದಿ ಸರ್ಕಾರದ ನಾಲ್ಕು ವರ್ಷಗಳ ಅಧಿಕಾರ ಏನನ್ನು ಸಾಧಿಸಿದೆ ಎಂಬುದನ್ನು ಲೆಕ್ಕ ಹಾಕಬಹುದು.

ನಮ್ಮ ಅರ್ಥ ವ್ಯವಸ್ಥೆಯ ವಿವಿಧ ವಲಯಗಳಿಂದ ಸೇರ್ಪಡೆಯಾದ ಒಟ್ಟು ಮೌಲ್ಯ (Gross Value Added-GVA) ಎಷ್ಟೆಂಬುದನ್ನು ಕೇಂದ್ರೀಯ ಅಂಕಿ-ಸಂಖ್ಯೆಗಳ ಸಂಸ್ಥೆಯು, ಇಂದಿನ ಬೆಲೆಗಳಲ್ಲಿ, ಒದಗಿಸುತ್ತದೆ. ಈ GVA ಮೊತ್ತದಿಂದ, "ಕೃಷಿ, ಅರಣ್ಯ, ಮೀನುಗಾರಿಕೆ, ಮತ್ತು ಗಣಿಗಾರಿಕೆಗಳು" ವಲಯದ ಬಾಬ್ತು, ನೈಜ ಬೆಲೆಗಳಿಗಿಂತ ಕೆಳಗಿನ ಮಟ್ಟದ ಬೆಲೆಗಳಲ್ಲಿ, ಸೇರಿದ ಒಟ್ಟು ಮೌಲ್ಯ (Nominal Gross Value Added - NGVA) ಎಷ್ಟೆಂಬುದನ್ನು ಲೆಕ್ಕಾಚಾರದ ಮೂಲಕ ಪಡೆಯಬಹುದು. ಕೃಷಿ ವಲಯ ಒಂದರಲ್ಲೇ ದೇಶದ ಸುಮಾರು ಅರ್ಧದಷ್ಟು ಮಂದಿ ದುಡಿಯುತ್ತಾರೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಹಾಗಾಗಿ, ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಮಂದಿಗೆ ಕೃಷಿ ವಲಯವು ಜೀವನೋಪಾಯ ಒದಗಿಸಿದೆ ಎಂದು ಧಾರಾಳವಾಗಿ ಹೇಳಬಹುದು. ದೇಶದ ಬಡವರ ಸಂಖ್ಯೆಯಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚು ಮಂದಿ ಜೀವನೋಪಾಯಕ್ಕಾಗಿ ಅವಲಂಬಿಸಿರುವುದು ಈ ಕೃಷಿ ವಲಯವನ್ನೇ. ಹಾಗಾಗಿ, ಈ ಬಡ ಜನರ ಪರಿಸ್ಥಿತಿ ಎಷ್ಟರ ಮಟ್ಟಿಗೆ ಸುಧಾರಿಸಿದೆ ಎಂಬ ಅಂಶವು ಯಾವುದೇ ಸರ್ಕಾರದ ಯಶಸ್ಸಿನ ಸತ್ವಪರೀಕ್ಷೆಯಾಗುತ್ತದೆ.

2014ರ ಮೇ ತಿಂಗಳ ಕೊನೆಯಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂತು. ಹಾಗಾಗಿ, ಇಡೀ 2014-15ರ ಹಣಕಾಸು ವರ್ಷವನ್ನು, ಹೆಚ್ಚು-ಕಮ್ಮಿ, ಈ ಸರ್ಕಾರದ ಮೊದಲ ವರ್ಷವೆಂದು ಪರಿಗಣಿಸಬಹುದು. ಆದ್ದರಿಂದ, ಮೌಲ್ಯಮಾಪನಕ್ಕಾಗಿ, 2013-14 ಹಣಕಾಸು ವರ್ಷವನ್ನು ಮೂಲ ವರ್ಷವೆಂದು ಪರಿಗಣಿಸಿ, ಅಲ್ಲಿಂದ ಹಿಡಿದು 2017-18 ರವರೆಗೆ, ಕೃಷಿ ವಲಯದ ಜನತೆಯ ಜೀವನ ಮಟ್ಟ ಎಷ್ಟರ ಮಟ್ಟಿಗೆ ಸುಧಾರಿಸಿದೆ ಎಂಬುದನ್ನು ಪರಿಶೀಲಿಸೋಣ.

ಕೇಂದ್ರೀಯ ಅಂಕಿ-ಸಂಖ್ಯೆಗಳ ಸಂಸ್ಥೆಯು ಒದಗಿಸುವ ದತ್ತಾಂಶದಲ್ಲಿ, ಕೃಷಿ ವಲಯುವು ಉತ್ಪಾದಿಸಿದ "ನೈಜ" ಒಟ್ಟು ಮೌಲ್ಯದ ಸೇರ್ಪಡೆಯ ಸಂಖ್ಯೆ ದೊರೆಯುತ್ತದೆ. ಆದರೆ, ಇದರಿಂದ ಕೃಷಿ ವಲಯದ ಉತ್ಪಾದನೆಯ "ನೈಜ" ಮೊತ್ತವಷ್ಟೇ ಗೊತ್ತಾಗುತ್ತದೆ. ಈ ಅಂಶದಿಂದ, ಈ ವಲಯದಲ್ಲಿ ದುಡಿಯುವವರ ಜೀವನ ಮಟ್ಟದ ಬಗ್ಗೆ ಯಾವ ಸುಳಿವೂ ಸಿಗುವುದಿಲ್ಲ. ಅದನ್ನು ತಿಳಿಯಲು, ಅವರು ಎಷ್ಟೆಲ್ಲಾ ಸರಕುಗಳನ್ನು ವಾಸ್ತವವಾಗಿ ಉತ್ಪಾದಿಸುತ್ತಾರೆ ಎಂಬುದನ್ನು ನಾವು ನೋಡಬೇಕಾಗಿಲ್ಲ. ಬದಲಿಗೆ, ಅವರು ತಮ್ಮ ಉತ್ಪತ್ತಿಯಿಂದ ಗಳಿಸಿದ ವರಮಾನದ ಮೂಲಕ ಎಷ್ಟೆಲ್ಲಾ ಸರಕುಗಳನ್ನು ಪಡೆಯುತ್ತಾರೆ ಎಂಬುದನ್ನು ಲೆಕ್ಕ ಹಾಕಬೇಕಾಗುತ್ತದೆ. ಅದಕ್ಕಾಗಿ, ಅಧಿಕೃತವಾಗಿ ಪ್ರಕಟಿಸುವ ಬಳಕೆದಾರ ಬೆಲೆ ಸೂಚ್ಯಂಕ ಬಳಸಿಕೊಂಡು, ಕೃಷಿ ವಲಯದಿಂದ ಸೇರ್ಪಡೆಯಾದ ಒಟ್ಟು ಮೌಲ್ಯ (NGVA) ಎಷ್ಟೆಂಬುದನ್ನು ಲೆಕ್ಕ ಹಾಕಬೇಕಾಗುತ್ತದೆ.

ಈ ರೀತಿಯಾಗಿ ಲೆಕ್ಕ ಹಾಕಿದಾಗ ಕಂಡುಬರುವ ಒಂದು ಮುಖ್ಯ ಅಂಶವೆಂದರೆ, 2013-14 ರಿಂದ 2017-18ರ ಅವಧಿಯಲ್ಲಿ, ಕೃಷಿ ಅವಲಂಬಿಸಿದ ಜನರ ನಿಜ ತಲಾ ವರಮಾನದಲ್ಲಿ ಶೇ. 2.02ರಷ್ಟು ಇಳಿಕೆ. ದೇಶದ ಜನ ಸಂಖ್ಯೆಯ ಅರ್ಧ ಭಾಗಕ್ಕಿಂತಲೂ ಹೆಚ್ಚಿನ ಮಂದಿಯನ್ನು ಸಲಹುತ್ತಿರುವ ಕೃಷಿ ವಲಯದಲ್ಲಿ, ಮೋದಿ ಸರ್ಕಾರದ ನಾಲ್ಕು ವರ್ಷಗಳ ಅವಧಿಯಲ್ಲಿ, ದುಡಿಯುವವರ ತಲಾ ವರಮಾನಗಳು ಇಳಿದಿವೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಮೋದಿ ಮತ್ತು ಅವರ ಹಿಂಬಾಲಕರು ಇಂತಹ ಒಂದು ಅವಧಿಯನ್ನು ಸಂಭ್ರಮಿಸುತ್ತಿರುವುದು, ಪರಿಸ್ಥಿತಿಯ ಒಂದು ದುರಂತಪೂರ್ಣ ಅಣಕವಾಗಿ ಕಾಣುತ್ತದೆ.

ಮೋದಿ ಸರ್ಕಾರದ ಅವಧಿಯಲ್ಲಿ ದೇಶದ ಜನಸಂಖ್ಯೆಯ ಅರ್ಧ ಭಾಗಕ್ಕಿಂತಲೂ ಹೆಚ್ಚಿನ ಮಂದಿಯ ಬದುಕು, ಅದು ಅಧಿಕಾರಕ್ಕೆ ಬರುವ ಮುನ್ನ ಇದ್ದ ಪರಿಸ್ಥಿತಿಗೆ ಹೋಲಿಸಿದರೆ, ಈಗ ಸಂಪೂರ್ಣವಾಗಿ ಹದಗೆಟ್ಟಿದೆ ಎಂಬ ಅಂಶವು ನಿಚ್ಚಳವಾಗಿದೆ. ಸಾಮಾನ್ಯವಾಗಿ, ಇಂತಹ ಹೋಲಿಕೆಗಳ ಫಲಿತಾಂಶವು, ಆಯ್ಕೆ ಮಾಡಿಕೊಂಡ ಮೂಲ ಮತ್ತು ಅಂತ್ಯ ವರ್ಷಗಳಿಗೆ ಸಂವೇದಿಯಾಗಿರುತ್ತದೆ; ನಾವು ಆಯ್ಕೆ ಮಾಡಿಕೊಂಡ 2013-14ರ ಮೂಲ ವರ್ಷವು ಒಳ್ಳೆಯ ಸುಗ್ಗಿಯ ವರ್ಷವಾಗಿತ್ತು ಮತ್ತು ಅದರಿಂದಾಗಿ ಆ ವರ್ಷವು ಉನ್ನತ ಆದಾಯದ ವರ್ಷವೂ ಆಗಿತ್ತೆಂದು ಕೆಲವರು ವಾದಿಸಬಹುದು. ಅಂತಹ ಟೀಕೆಗಳು ಎದುರಾಗುವ ಕಾರಣದಿಂದಾಗಿ, ಮತ್ತೊಂದು ರೀತಿಯ ಲೆಕ್ಕಾಚಾರವನ್ನೂ ಮಾಡಲಾಗಿದೆ. 2013-14ರ ಬದಲಾಗಿ, 2014-15 ವರ್ಷವನ್ನು ಮೂಲ ವರ್ಷವೆಂದು ಪರಿಗಣಿಸಿ ಲೆಕ್ಕ ಹಾಕಲಾಗಿದೆ. 2014-15 ವರ್ಷವು ಕೃಷಿಯ ಪಾಲಿಗೆ ಒಂದು ನಿಕೃಷ್ಟದ ವರ್ಷವೆಂದು ಎಲ್ಲರೂ ಒಪ್ಪುತ್ತಾರೆ. ಮೂಲ ವರ್ಷದ ವರಮಾನ ಕೆಳ ಮಟ್ಟದಲ್ಲಿದ್ದುದರಿಂದ, ನಂತರದ ವರ್ಷಗಳ ಸರಾಸರಿ ಸಂಖ್ಯೆ ಹಿಗ್ಗುತ್ತದೆ. ಹಾಗಾಗಿ, ಅದು ಮೋದಿಯವರ ಅವಧಿಯ ಬಗ್ಗೆ ಒಂದು ಅನುಕೂಲಕರ ಚಿತ್ರಣ ಕೊಡಬಲ್ಲದು.

2014-15 ವರ್ಷವನ್ನು ಮೂಲ ವರ್ಷವೆಂದು ಪರಿಗಣಿಸಿ ಹಿಂದೆ ಮಾಡಿದ ರೀತಿಯಲ್ಲೇ ಲೆಕ್ಕ ಹಾಕಿದಾಗಲೂ, 2014-15 ರಿಂದ 2017-18ರ ಅವಧಿಯಲ್ಲಿ, ಕೃಷಿ ವಲಯದಲ್ಲಿ ದುಡಿಯುವ ಜನರ ತಲಾ ವರಮಾನದಲ್ಲಿ ಶೇ.1.74ರಷ್ಟು ಇಳಿಕೆ ಕಂಡುಬರುತ್ತದೆ. ಹಾಗಾಗಿ, ಕೃಷಿ ಅವಲಂಬಿಸಿದ ಇಡೀ ಜನಸಂಖ್ಯೆಯ ತಲಾ ನೈಜ ವರಮಾನವು ಇಳಿದಿರುವುದು ಖಚಿತವಾಗಿದೆ. ಮೋದಿಯವರ ಅಧಿಕಾರದ ನಾಲ್ಕನೆಯ ವರ್ಷದ ಕೊನೆಯಲ್ಲಿ, ದೇಶದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಮಂದಿಗೆ ಜೀವನೋಪಾಯ ಒದಗಿಸುತ್ತಿರುವ ಬೇಸಾಯ ಮತ್ತು ಅದರ ಉಪ-ಕಸುಬಿನ ಚಟುವಟಿಕೆಗಳಿಂದ ಕೂಡಿದ ಕೃಷಿ ವಲಯದ ಜನರ ಜೀವನ ಮಟ್ಟವು, ಮೋದಿಯವರು ಅಧಿಕಾರ ವಹಿಸಿಕೊಂಡಾಗ ಇದ್ದ ಪರಿಸ್ಥಿತಿಗೆ ಹೋಲಿಸಿದರೆ, ಸ್ಪಷ್ಟವಾಗಿ ಕುಸಿದಿದೆ ಎಂಬ ಅಂಶವು ಪ್ರಶ್ನಾತೀತವಾಗಿದೆ.

ಈ ಇಳಿಕೆಯು ಬಹಳ ದೊಡ್ಡದಲ್ಲ. ನಿಜ. ಇಳಿಕೆಯಂತೂ ಇದೆ. ಅದರ ಜೊತೆಯಲ್ಲಿ, ಇನ್ನೂ ಎರಡು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಮೊದಲನೆಯದು, ಅರ್ಥ ವ್ಯವಸ್ಥೆಗೆ ಸೇರ್ಪಡೆಯಾದ ಮೌಲ್ಯ ವರ್ಧನೆಯಲ್ಲಿ, ಕೂಲಿ ಮತ್ತು ಸ್ವ-ಉದ್ಯೋಗಿಗಳ ವರಮಾನಗಳು ಮಾತ್ರವಲ್ಲದೆ, ಉತ್ಪಾದನಾ ಪ್ರಕ್ರಿಯೆಯಲ್ಲಿ ಉಂಟಾಗುವ ಮಿಗುತಾಯವೂ ಸೇರಿಕೊಳ್ಳುತ್ತದೆ. ಕೃಷಿ ವಲಯದ ಬಂಡವಾಳಿಗರ ಮತ್ತು ಭೂ ಮಾಲಿಕರ ತಲಾ ವರಮಾನ ಇಳಿಕೆಯಾಗಿಲ್ಲ ಎಂದು ಊಹಿಸಿಕೊಂಡರೆ, ಆ ಸಂದರ್ಭದಲ್ಲಿ, ಕೃಷಿ ವಲಯವನ್ನು ಅವಲಂಬಿಸಿದ ಸಣ್ಣ ರೈತರು, ಕೃಷಿ ಕಾರ್ಮಿಕರು ಮುಂತಾದ ಅಪಾರ ಮಂದಿಯ ತಲಾ ನೈಜ ವರಮಾನವು ಇಲ್ಲಿ ಸೂಚಿಸಿರುವುದಕ್ಕಿಂತಲೂ ಹೆಚ್ಚು ಇಳಿಕೆ ಆಗಿರಲೇಬೇಕಾಗುತ್ತದೆ.


ಎರಡನೆಯದಾಗಿ, ಶಿಕ್ಷಣ, ಆರೋಗ್ಯ ಮುಂತಾದ ಅನೇಕ ಅಗತ್ಯ ಸೇವೆಗಳ ಖಾಸಗೀಕರಣದ ಪರಿಣಾಮವಾಗಿ ಜೀವನ ಮಟ್ಟದ ಬೆಲೆ ಸೂಚ್ಯಂಕದಲ್ಲಿ ಆಗಿರುವ ಏರಿಕೆಯನ್ನೂ ಇಲ್ಲಿ ಪರಿಗಣಿಸಿಲ್ಲ. ಬಳಕೆದಾರ ಬೆಲೆ ಸೂಚ್ಯಂಕವು, ಒಂದಿಷ್ಟು ಸರಕುಗಳು ಮತ್ತು ಸೇವೆಗಳ ಬೆಲೆ ಏರಿಕೆಯನ್ನು ಮಾತ್ರ ಅಳೆಯುತ್ತದೆ. ಮೇಲಾಗಿ, ಮೂಲ ವರ್ಷದಲ್ಲಿ ದೊರಕುತ್ತಿದ್ದ ಕೆಲವಾರು ವಸ್ತುಗಳು ಪ್ರಸಕ್ತ ವರ್ಷದಲ್ಲಿ ಅದೇ ಪ್ರಮಾಣದಲ್ಲಿ/ಸಂಪೂರ್ಣವಾಗಿ ದೊರೆಕದೇ ಇರಬಹುದು. ಕೆಲವು ವಸ್ತುಗಳು ದುಬಾರಿಯಾಗಿರುತ್ತವೆ. ಈ ಯಾವ ಅಂಶವನ್ನೂ ಸೂಚ್ಯಂಕ ಪರಿಗಣಿಸುವುದಿಲ್ಲ.

ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. ಮೂಲ ವರ್ಷದಲ್ಲಿ, ಬಹುತೇಕ ಜನರು ಒಂದು ನಿರ್ದಿಷ್ಟ ಶಸ್ತ್ರಚಿಕಿತ್ಸೆಗೆ 5,000ರೂ ವಸೂಲಿ ಮಾಡುವ ಸರಕಾರಿ ಆಸ್ಪತ್ರೆಗಳಿಗೆ ಹೋಗಿದ್ದರು ಎಂದು ಭಾವಿಸಿಕೊಳ್ಳೋಣ. ಅದೇ ಶಸ್ತ್ರಚಿಕಿತ್ಸೆಗೆ ಪ್ರಸಕ್ತ ವರ್ಷದಲ್ಲಿಯೂ ಅಷ್ಟೇ ಖರ್ಚು ಎಂದುಕೊಳ್ಳೋಣ. ಅದೇ ರೀತಿಯಲ್ಲಿ, ಎಲ್ಲಾ ವಸ್ತು/ಸೇವೆಗಳ ಬೆಲೆಗಳೂ ಬದಲಾಗಿಲ್ಲ ಎಂದಾದರೆ, ಆಗ, ಬಳಕೆದಾರ ಬೆಲೆ ಸೂಚ್ಯಂಕದ ಪ್ರಕಾರ, ಮೂಲ ವರ್ಷ ಮತ್ತು ಪ್ರಸಕ್ತ ವರ್ಷಗಳ ನಡುವಿನ ಅವಧಿಯ ಹಣದುಬ್ಬರದ ದರ ಸೊನ್ನೆ ಆಗಿರುತ್ತದೆ. ಒಂದು ವೇಳೆ, ಈ ಅವಧಿಯಲ್ಲಿ, ಅನುದಾನ ಹಣದ ಕಡಿತ, ವೈದ್ಯರ ಕೊರತೆ ಮುಂತಾದ ಕಾರಣಗಳಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗಳು ನಡೆದೇ ಇಲ್ಲ ಎಂದಿಟ್ಟುಕೊಳ್ಳೋಣ. ಆಗ, ಎಲ್ಲರೂ ಖಾಸಗಿ ಆಸ್ಪತ್ರೆಗೇ ಹೋಗುತ್ತಾರೆ. ಆ ಖಾಸಗಿ ಆಸ್ಪತ್ರೆಯಲ್ಲಿ ಅದೇ ಶಸ್ತ್ರಚಿಕಿತ್ಸೆಗೆ 50,000 ರೂ ವೆಚ್ಚ ವಸೂಲಿ ಮಾಡುತ್ತಾರೆ. ಹಾಗಾಗಿ, ಜೀವನ ನಿರ್ವಹಣೆಯ ವೆಚ್ಚ ವಿಪರೀತ ಹೆಚ್ಚಾಗುತ್ತದೆ. ಹಾಗಿದ್ದರೂ, ಅಧಿಕೃತ ಬಳಕೆದಾರ ಬೆಲೆ ಸೂಚ್ಯಂಕದ ಪ್ರಕಾರ ಬೆಲೆ ಏರಿಕೆ ಸೊನ್ನೆಯೇ ಆಗಿರುತ್ತದೆ.

ಶಿಕ್ಷಣ ಮತ್ತು ಇತರೆ ಅನೇಕ ಸೇವೆಗಳ ಖಾಸಗೀಕರಣದ ಪರಿಣಾಮಗಳಿಗೂ ಇದೇ ವಿದ್ಯಮಾನ ಅನ್ವಯವಾಗುತ್ತದೆ. ಆದ್ದರಿಂದ, ಅಗತ್ಯ ಸೇವೆಗಳು ಖಾಸಗೀಕರಣಗೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ ಅಧಿಕೃತ ಬಳಕೆದಾರ ಬೆಲೆ ಸೂಚ್ಯಂಕವು, ಯಾವ ಮಟ್ಟದಲ್ಲಿ ಜೀವನ ನಿರ್ವಹಣೆಯ ವೆಚ್ಚಗಳು ವಾಸ್ತವಿಕವಾಗಿ ಹೆಚ್ಚುತ್ತವೆಯೋ ಅವುಗಳನ್ನು, ಅನಿವಾರ್ಯವಾಗಿ, ತಗ್ಗಿಸಿ ಹೇಳುತ್ತದೆ. ಈ ಕಾರಣದಿಂದಾಗಿ, ಕೃಷಿ ಅವಲಂಬಿತ ಜನತೆಯ ಜೀವನ ನಿರ್ವಹಣೆಯ ವೆಚ್ಚದ ಏರಿಕೆಗೆ ಸಂಬಂಧಿಸಿದಂತೆ ಸೂಚ್ಯಂಕದಲ್ಲಿ ವ್ಯಕ್ತವಾಗುವ ಅಂಕಿ-ಅಂಶಗಳು ವಾಸ್ತವಿಕವಲ್ಲ. ಹಾಗಾಗಿ, ಅವರ ತಲಾ ವರಮಾನದ ಇಳಿಕೆಯು, ಅಧಿಕೃತ ಬಳಕೆದಾರ ಬೆಲೆ ಸೂಚ್ಯಂಕದ ನೆಲೆಯಲ್ಲಿ ನಾವು ಅಂದಾಜಾಗಿ ಹಾಕಿದ ಲೆಕ್ಕಕ್ಕಿಂತಲೂ ಅಧಿಕವಾಗಿರುವುದು ಸ್ಪಷ್ಟವಾಗುತ್ತದೆ.

ಇನ್ನೊಂದು ಮಾತು. ಅಗತ್ಯ ಸೇವೆಗಳ ನಿರಂತರ ಖಾಸಗೀಕರಣದ ವಿದ್ಯಮಾನದ ಹೊಣೆಯನ್ನು ಮೋದಿ ಸರ್ಕಾರ ಒಂದರ ಮೇಲೆಯೇ ಹೊರಿಸುವಂತಿಲ್ಲ ಎಂದು ಕೆಲವರು ಮಂಡಿಸುವ ವಾದವು ಸರಿಯಾಗಿಯೇ ಇದೆ. ಇಂತಹ ಖಾಸಗೀಕರಣವು ನವ-ಉದಾರವಾದದ ಒಂದು ಪ್ರಮುಖ ಲಕ್ಷಣ. ಈ ಪ್ರಕ್ರಿಯೆಯು ಮೋದಿ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಆರಂಭವಾಗಿತ್ತು. ಆದರೆ, ಮೋದಿಯವರ ಆಡಳಿತದಲ್ಲಿ ಅಗತ್ಯ ಸೇವೆಗಳ ಖಾಸಗೀಕರಣವು ಹಿಂದೆಂದಿಗಿಂತಲೂ ಹೆಚ್ಚಿನ ಹುರುಪು, ವೇಗ, ಬಲ ಮತ್ತು ಪ್ರೋತ್ಸಾಹ ಪಡೆದುಕೊಂಡಿದೆ. ಸಾಮಾನ್ಯವಾಗಿ ಹೇಳುವುದಾದರೆ, ಈ ಎಲ್ಲಾ ಅಂಶಗಳೂ ಹಿಂದಿನ ಮತ್ತು ಇಂದಿನ ಸರ್ಕಾರಗಳಿಗೆ ಸಮಾನವಾಗಿ ಅನ್ವಯವಾಗುತ್ತವೆ. ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ, ಕೃಷಿ ಅವಲಂಬಿತ ಜನತೆಯ ತಲಾ ವರಮಾನದ ಇಳಿಕೆಯು ಅಂದಾಜು ಮಾಡಿದ್ದಕ್ಕಿಂತಲೂ ಅಧಿಕವಾಗಿದೆ ಎಂಬ ನಮ್ಮ ನಿರ್ಣಯದ ಮೇಲೆ ಇಂತಹ ಅಭಿಪ್ರಾಯಗಳಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ. ಇಲ್ಲಿ ಪ್ರಸ್ತುತವಾಗುವ ವಿಷಯ ಯಾವುದೆಂದರೆ, ಅಧಿಕೃತ ಬಳಕೆದಾರ ಬೆಲೆ ಸೂಚ್ಯಂಕವು ಜೀವನ ನಿರ್ವಹಣೆಯ ವೆಚ್ಚಗಳನ್ನು ವಾಸ್ತವಿಕವಾಗಿ ಇರುವುದಕ್ಕಿಂತ ತಗ್ಗಿಸಿ ಹೇಳುತ್ತದೆ ಎಂಬುದು. ಯಾವ ಸರ್ಕಾರ ಹೆಚ್ಚು ತಗ್ಗಿಸಿ ಹೇಳಿದೆ ಎಂಬುದು ಬಹಳ ಮುಖ್ಯವಲ್ಲ.

ದೇಶದ ದುಡಿಯುವ ಜನತೆಯ ಅರ್ಧ ಭಾಗಕ್ಕಿಂತಲೂ ಹೆಚ್ಚಿನವರ ತಲಾ ವರಮಾನಗಳು ಇಳಿದಿರುವ ಈ ನಾಲ್ಕು ವರ್ಷಗಳ "ಸಾಧನೆ"ಯನ್ನು ಸಂಭ್ರಮಿಸಲು ಒಂದು ರೀತಿಯ ಸೂಕ್ಷ್ಮ-ಪರಿಜ್ಞಾನಹೀನತೆ ಬೇಕಾಗುತ್ತದೆ. ಇಂತಹ ಸಾಧ್ಯತೆ ಇರುವುದು ಮೋದಿ ಪಡೆಗೆ ಮಾತ್ರ.



ರೈತರ ಚಳುವಳಿ ಪ್ರಚಾರದ ತಂತ್ರ ಎಂದಿದ್ದಾರೆ ಕೃಷಿ ಮಂತ್ರಿಗಳು!
ವ್ಯಂಗ್ಯಚಿತ್ರ; ಗೋಕುಲ್, ಡೆಕ್ಕನ್ ಕ್ರಾನಿಕಲ್



ಜನತಾ ಪರ್ಯಾಯದತ್ತ ಎರಡು ವರ್ಷಗಳ ಪ್ರಗತಿಯ ವರದಿ – ಜನತೆಯ ಮುಂದಿಟ್ಟ ಎಲ್‌ಡಿಎಫ್ ಸರಕಾರ



ಕೇರಳದ ಸಿಪಿಐ(ಎಂ) ನೇತೃತ್ವದ ಎಡ–ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್) ಸರಕಾರ ಎರಡು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಸರಕಾರ ಒಂದು ಪ್ರಗತಿ ವರದಿಯನ್ನು ಮೇ 31ರಂದು ಬಿಡುಗಡೆ ಮಾಡಿದೆ. ಇದರ ಮೂಲಕ ಎರಡು ವರ್ಷಗಳಲ್ಲಿ ಮಾಡಿರುವ ಕೆಲಸದ ವರದಿಯನ್ನು ಜನಗಳಿಗೆ ಒಪ್ಪಿಸಲಾಗುತ್ತಿದೆ. ರಾಜ್ಯಪಾಲರು ಇದನ್ನು ಬಿಡುಗಡೆ ಮಾಡಿದರು.

ಕಳೆದ ಬಾರಿ, ಮೊದಲ ವರ್ಷದ ಪ್ರಗತಿಯ ವರದಿಯಲ್ಲಿ ಎಲ್‌ಡಿಎಫ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಇಟ್ಟಿದ್ದ 600 ಪ್ರಸ್ತಾವನೆಗಳನ್ನು 35 ಮಹತ್ವದ ವಿಧಗಳಾಗಿ ವಿಂಗಡಿಸಿ ಆ ಬಗ್ಗೆ ವರದಿ ಕೊಡಲಾಗಿತ್ತು.

ಆದರೆ ಈ ಎರಡು ವರ್ಷಗಳ ವರದಿಯಲ್ಲಿ ಈ ಎಲ್ಲ 600 ಪ್ರಸ್ತಾವನೆಗಳೂ ಎಷ್ಟರ ಮಟ್ಟಿಗೆ ಜಾರಿಯಾಗಿವೆ ಎಂಬುದನ್ನು ಜನಗಳು ವಿಶ್ಲೇಷಿಸಬಹುದಾದ ರೀತಿಯಲ್ಲಿ ನಿರೂಪಿಸಲಾಗಿದೆ ಎಂದು ಎಲ್‌ಡಿಎಫ್ ವಕ್ತಾರರು ಹೇಳಿದ್ದಾರೆ.

ಸಾರ್ವಜನಿಕ ವಲಯದ ಪುನಶ್ಚೇತನ: ಹಿಂದಿನ ಯುಪಿಎ ಮತ್ತು ಯುಡಿಎಫ್ ಸರಕಾರಗಳ ಅಡಿಯಲ್ಲಿ ನಲುಗಿದ್ದ ಸಾರ್ವಜನಿಕ ವಲಯದ ಪುನಶ್ಚೇತನ ಎಲ್‌ಡಿಎಫ್ ಪ್ರಣಾಳಿಕೆಯ ಪ್ರಮುಖ ಅಂಶವಾಗಿತ್ತು. ಎಲ್‌ಡಿಎಫ್ ಸರಕಾರ ಅಧಿಕಾರಕ್ಕೆ ಬಂದ ಹಿಂದಿನ ವರ್ಷ ಈ ವಲಯದ ನಿವ್ವಳ ನಷ್ಟ 131.87 ಕೋಟಿ ರೂ. ಈ ಸರಕಾರದ ಮೊದಲ ವರ್ಷ ಮುಗಿಯುವ ವೇಳೆಗೆ ಅದು 80.67 ಕೋಟಿರೂ.ಗಿಳಿಯಿತು, 14 ಉದ್ದಿಮೆಗಳು ಲಾಭ ಮಾಡಲಾರಂಭಿಸಿದವು. ಈಗ ಎರಡು ವರ್ಷಗಳು ಮುಗಿಯುವ ವೇಳೆಗೆ ಸಾರ್ವಜನಿಕ ವಲಯದ ಒಟ್ಟು ನಷ್ಟ ಮಾಯವಾಗಿ 106.91 ಕೋಟಿ ರೂ.ಗಳ ನಿವ್ವಳ ಲಾಭ ಆಗಿದೆ.

ಉದ್ಯೋಗ ನಿರ್ಮಾಣ : 5 ವರ್ಷಗಳಲ್ಲಿ 25ಲಕ್ಷ ಉದ್ಯೋಗಗಳ ನಿರ್ಮಾಣದ ಭಾಗವಾಗಿ ಐಟಿ, ಪ್ರವಾಸೋದ್ಯಮ ವಲಯಗಳಲ್ಲಿ ವಿದ್ಯಾವಂತ ಯುವಜನರಿಗೆ 10 ಲಕ್ಷ ಉದ್ಯೋಗಗಳ ಸೃಷ್ಟಿಯ ಆಶ್ವಾಸನೆಯನ್ನು ಪ್ರಣಾಳಿಕೆ ಕೊಟ್ಟಿತ್ತು. ಮೊದಲ ವರ್ಷದ ಅಂತ್ಯದಲ್ಲಿ ಪ್ರವಾಸೋದ್ಯಮ ,ಐ ಟಿ ಸಂಬಂಧಿತ ವಲಯಗಳನ್ನು ಬಿಟ್ಟು ಬೇರೆ ವಲಯಗಳಲ್ಲಿ 2,13,745 ಉದ್ಯೋಗಗಳ ಸೃಷ್ಟಿಯಾಗಿದ್ದರೆ, ಈ ವರ್ಷ ಇನ್ನಷ್ಟು ಯೋಜನೆಗಳು ಪೂರ್ಣಗೊಂಡಿದ್ದು ಮತ್ತೆ ಕನಿಷ್ಟ 2ಲಕ್ಷ ಉದ್ಯೋಗಾವಕಾಶಗಳು ನಿರ್ಮಾಣಗೊಂಡಿರುವ ನಿರೀಕ್ಷೆಯಿದೆ. ಐಟಿ ಕ್ಷೇತ್ರದ ವಿಸ್ತರಣೆಗೆ ಅವಕಾಶವನ್ನು ಒಂದೂವರೆ ಪಟ್ಟು ಹೆಚ್ಚಿಸಲಾಗಿದೆ.

ಸ್ಟಾರ್ಟ್ ಅಪ್ ಅಥವ ನವೋದ್ಯಮ : ಇದಕ್ಕೆ ಪ್ರೋತ್ಸಾಹ ಎಲ್‌ಡಿಎಫ್ ಪ್ರಣಾಳಿಕೆಯ ಪ್ರಾಥಮಿಕ ಅಜೆಂಡಾವಾಗಿದ್ದು ಈ ಕ್ಷೇತ್ರದಲ್ಲಿ ರಾಜ್ಯದ ಸಾಧನೆ, ವಿಶೇಷವಾಗಿ ಜೆನ್‌ರೊಬೊಟಿಕ್ಸ್ ಎಂಬ ವಲಯದಲ್ಲಿ ಅಂತರ್ರಾಷ್ಟ್ರೀಯ ಗಮನ ಸೆಳೆದಿದೆ.

ಇದೇ ರೀತಿಯಲ್ಲಿ ಈ ಕಾಲಂಗಳಲ್ಲಿ ಈ ಹಿಂದೆ ಪ್ರಕಟಿಸಿರುವಂತೆ ಕನಿಷ್ಟ ಕೂಲಿ ಪರಿಷ್ಕರಣೆ, ಶಿಕ್ಷಣ ರಂಗದಲ್ಲಿ ಹೈಟೆಕ್ ಕ್ಲಾಸ್ ರೂಂಗಳು, 'ಶಿಕ್ಷಣ ಪುನಶ್ಚೇತನ ಮಿಶನ್', ಕೃಷಿರಂಗದ ಪುನಶ್ಚೇತನದ ಕ್ರಮವಾಗಿ ತರಕಾರಿ ಮತ್ತು 'ಸಾವಯವ' ಕೃಷಿಗೆ ಹೆಚ್ಚಿನ ಪ್ರೋತ್ಸಾಹ, 'ಕೇರಳ ಆರ್ಗಾನಿಕ್' ಎಂಬ ಬ್ರಾಂಡ್ ನಿರ್ಮಿಸಿ ರೈತರು ಬೆಳೆದ ತರಕಾರಿಗಳಿಗೆ ಮಾರುಕಟ್ಟೆ, ಆರೋಗ್ಯ ವಲಯದಲ್ಲಿ 'ಆರ್ದ್ರ ಮಿಶನ್', ಒಬ್ಬರು ಅಥವ ಇಬ್ಬರು ಡಾಕ್ಟರುಗಳು ನಡೆಸುವ ಕಡಿಮೆ ವೆಚ್ಚದಲ್ಲಿ ಆರೋಗ್ಯಸೇವೆಗಳನ್ನು ಒದಗಿಸುವ ಸಣ್ಣ ಆಸ್ಪತ್ರೆಗಳಿಗೆ ಪ್ರೋತ್ಸಾಹ ಮುಂತಾದ ಕ್ರಮಗಳನ್ನು ಆರಂಭಿಸಲಾಗಿದೆ.

ಸಾಂಸ್ಕೃತಿಕ ರಂಗದಲ್ಲಿ, 'ನನಗೆ ಜಾತಿಯಿಲ್ಲ' ಎಂಬ ಸಮಾಜ ಸುಧಾರಕ ಶ್ರೀನಾರಾಯಣ ಗುರು ಘೋಷಣೆಯನ್ನು ಆಚರಿಸುವ ಸುಮಾರು 6000 ಸಾರ್ವಜನಿಕ ಸಭೆಗಳು ಈ ಎರಡು ವರ್ಷಗಳ ಸಾಧನೆಗಳಲ್ಲಿ ಸೇರಿವೆ. ಹಿಂದಿನ ಎಲ್‌ಡಿಎಫ್ ಸರಕಾರಗಳೇ ಆರಂಭಿಸಿದ, ಈಗ ಅಂತರ್ರಾಷ್ಟ್ರೀಯ ಖ್ಯಾತಿ ಪಡೆದಿರುವ ಚಿತ್ರೋತ್ಸವ ಮತ್ತು ಕೊಚಿ–ಮುಜಿರಿಸ್ ಬಯೆನಾಲೆ ಉತ್ಸವಗಳಿಗೆ ಖಾಯಂ ಸ್ಥಳಗಳನ್ನು ಒದಗಿಸಲು ಕ್ರಮಗಳನ್ನು ಆರಂಭಿಸಲಾಗಿದೆ.

ಕೊಚಿ ಮೆಟ್ರೋ ರೈಲಿನ ಆರಂಭ ಈ ಸರಕಾರದ ಇನ್ನೊಂದು ಸಾಧನೆ. ಸ್ವಚ್ಛತೆ, ಪಾರ್ಕಿಂಗ್ ಮತ್ತು ಟಿಕೆಟ್ ವಿತರಣೆಯ ಕೆಲಸಗಳ ಉಸ್ತುವಾರಿಯನ್ನು 'ಕುಟುಂಬಶ್ರೀ' ವ್ಯವಸ್ಥೆಗೆ ವಹಿಸಿರುವುದು, ಮೆಟ್ರೋರೈಲಿನ ಸಿಬ್ಬಂದಿಯಲ್ಲಿ 80% ಮಹಿಳೆಯರೇ ಇರುವುದು ಇನ್ನೊಂದು ವೈಶಿಷ್ಟ್ಯ.

ಈ ವರದಿ ಎಲ್‌ಡಿಎಫ್ ಪ್ರಣಾಳಿಕೆಯಲ್ಲಿ ಪ್ರಸ್ತಾವಿಸಿರುವ ಇತರ ಪ್ರಮುಖ ಮತ್ತು ಅಷ್ಟೇನೂ ಪ್ರಮುಖವಲ್ಲದ ಕಾರ್ಯಕ್ರಮಗಳ ಜಾರಿಯ ಕಾಲಮಿತಿಗಳನ್ನೂ ಸ್ಪಷ್ಟವಾಗಿ ನಮೂದಿಸಿದೆ.

ಒಟ್ಟಿನಲ್ಲಿ "ಒಂದು ನವ ಕೇರಳ, ಜಾತ್ಯತೀತ, ಭ್ರಷ್ಟಾಚಾರ–ಮುಕ್ತ ಮತ್ತು ಅಭಿವೃದ್ಧ ಕೇರಳ" ಎಂಬ ಎಲ್‌ಡಿಎಫ್ ಚುನಾವಣಾ ಪ್ರಣಾಳಿಕೆಯ ಘೋಷಣೆಯ ಸಾಕಾರದತ್ತ, ಕೇರಳದ ಜನತಾ ಪರ್ಯಾಯದತ್ತ ,ದಾಪುಗಾಲಿನ ಹೆಜ್ಜೆಗಳನ್ನು ಇಡಲಾಗುತ್ತಿದೆ ಎಂದು ಈ ವರದಿಯಿಂದ ಬಿಂಬಿತವಾಗುತ್ತಿದೆ.

ಎ.ವಿಜಯರಾಘವನ್ ಎಲ್‌ಡಿಎಫ್ ಸಂಯೋಜಕರು

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿರುವ ಎ.ವಿಜಯರಾಘವನ್ ಅವರನ್ನು ಎಲ್‌ಡಿಎಫ್‌ನ ಹೊಸ ಸಂಯೋಜಕರಾಗಿ ಮಾಡಲಾಗಿದೆ. ಎಲ್‌ಡಿಎಫ್‌ನ ಸಮನ್ವಯ ಸಮಿತಿ 12 ವರ್ಷಗಳ ಕಾಲ ಈ ಕರ್ತವ್ಯವನ್ನು ನಿರ್ವಹಿಸಿರುವ ವೈಕೊಂ ವಿಶ್ವಂ ಅವರ ಅನಾರೋಗ್ಯದಿಂದಾಗಿ ಈ ಕೆಲಸವನ್ನು ವಿಜಯರಾಘವನ್ ಅವರಿಗೆ ವಹಿಸಲು ನಿರ್ಧರಿಸಿದೆ. ವಿಜಯರಾಘವನ್ ಮಾಜಿ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರೂ ಆಗಿದ್ದಾರೆ.



ಟಿಎಂಸಿ ಗೂಂಡಾಗಳು ಪಂಚಾಯತು ಚುನಾವಣೆಗಳಲ್ಲಿ ಎಡರಂಗ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದಂತೆ ಮಾಡಲು ನೆಟ್ಟಿದ್ದ ಬಾಂಬನ್ನು ಆಕಸ್ಮಿಕವಾಗಿ ಮುಟ್ಟಿದ ಹೌರಾ ಸಮೀಪದ ಹಳ್ಳಿಯ ಏಳು ವರ್ಷ ವಯಸ್ಸಿನ ಬಾಲಕಿ ಪೌಲಮಿ ತನ್ನ ಕೈ ಕಳೆದುಕೊಂಡಳು. ಜನವಾದಿ ಮಹಿಳಾ ಸಂಘಟನೆ ಮತ್ತು ಎಸ್‌ಎಫ್ ಐ ಆಕೆಯ ನೆರವಿಗೆ ಧಾವಿಸಿದ್ದು 50ಸಾವಿರ ರೂ.ಗಳನ್ನು ಸಂಗ್ರಹಿಸಿ ಆಕೆಯ ಶುಶ್ರೂಷೆಗೆಂದು ಆಕೆಯ ಕುಟಂಬಕ್ಕೆ ನೀಡಿವೆ.(ಫೋಟೋದಲ್ಲಿ)

ಈ ನಡುವೆ, ಟಿಎಂಸಿ ಹಿಂಸಾಚಾರ ಮುಂದುವರೆದಿದ್ದು, ಇತ್ತೀಚೆಗೆ ಪಂಚಾಯತು ಚುನಾವಣೆಗಳನ್ನು ಗೆದ್ದ ಸಿಪಿಐ(ಎಂ)ನ ವಿದ್ಯಾರ್ಥಿ ಮುಖಂಡ ಅತಬುಲ್ ಇಸ್ಲಾಮ್ ಮತ್ತು ಕುಟುಂಬದವರ ಮೇಲೆ ಹಲ್ಲೆ ಮಾಡಿದ್ದಾರೆ. ಆತನ ಸೋದರಮಾವ ಗುಂಡೇಟಿನಿಂದ ಸತ್ತಿದ್ದು, ಈತ ಮತ್ತು ತಂದೆ ಆಸ್ಪತ್ರೆಯಲ್ಲಿ ಗಂಭೀರ ಪರಿಸ್ಥಿತಿಯಲ್ಲಿದ್ದಾರೆ.

ಮುಂಬೈ–ಅಹಮದಾಬಾದ್ ಬುಲೆಟ್ ರೈಲಿನ ವಿರುದ್ಧ ಸಮಾವೇಶ

"ಕಾರ್ಪೋರೇಟ್–ಪರ, ರೈತ–ವಿರೋಧಿ ಪ್ರಾಜೆಕ್ಟಿಗೆ ಒಂದಂಗುಲ ಭೂಮಿಯನ್ನೂ ಕೊಡೆವು"

ಮೋದಿ ಸರಕಾರದ ಪ್ರಿಯ ಶ್ರೀಮಂತ–ಪರ ಅಹಮದಾಬಾದ್–ಮುಂಬೈ ಬುಲೆಟ್ ಟ್ರೆನ್ ಪ್ರಾಜೆಕ್ಟ್ ಪ್ರಸ್ತಾವಿತ ದಾರಿಯುದ್ದಕ್ಕೂ ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ವಿನಾಶಕಾರಿ ಭೂಸ್ವಾಧೀನಕ್ಕೆ ಎಡೆ ಮಾಡಿಕೊಡುತ್ತದೆ ಎಂದು ಇದನ್ನು ವಿರೋಧಿಸುವ ಸಮಾವೇಶವೊಂದು ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ಜೂನ್ 3ರಂದು ನಡೆಯಿತು. ಭೂಮಿ ಅಧಿಕಾರ್ ಆಂದೋಲನ್ ಇದನ್ನು ಅಖಿಲ ಬಾರತ ಕಿಸಾನ್ ಸಭಾ, ಕಷ್ಟಕಾರೀ ಸಂಘಟನಾ, ಶೋಷಿತ್ ಜನ ಆಂದೋಲನ, ಎನ್‌ಎಪಿಎಂ, ಗುಜರಾತ್ ಖೆದುತ್‌ಸಮಾಜ್ ಮತ್ತಿತರ ಸಂಘಟನೆಗಳ ಸಹಕಾರದೊಂದಿಗೆ ಏರ್ಪಡಿಸಿತ್ತು. ಬುಲೆಟ್ ಟ್ರೇನ್ ಪ್ರಾಜೆಕ್ಟನ್ನು ಬಹಿರಂಗವಾಗಿ ವಿರೋಧಿಸುವ ಎಲ್ಲ ರಾಜಕೀಯ ಪಕ್ಷಗಳನ್ನೂ ಆಹ್ವಾನಿಸಲಾಗಿತ್ತು.

ದೊಡ್ಡ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದ ಈ ಸಮಾವೇಶವನ್ನು ಉದ್ದೇಶಿಸಿ ಎಐಕೆಎಸ್ ಅಧ್ಯಕ್ಷರೂ ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಆಗಿರುವ ಡಾ.ಅಶೋಕ ಧವಳೆ ಮತ್ತು ಗುಜರಾತಿನ ಹಿರಿಯ ಸಿಪಿಐ(ಎಂ) ಮುಖಂಡ ಅರಣ್ ಮೆಹ್ತ ಮತ್ತಿತರ ಮುಖಂಡರು ಮಾತನಾಡಿದರು.

ಮಾತನಾಡಿದ ಎಲ್ಲರೂ ಈ ಬುಲೆಟ್ ರೈಲು ಯೋಜನೆಯನ್ನು ಮತ್ತು ಮುಂಬೈ–ವಡೋದರಾ ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆಯನ್ನು ಖಡಾಖಂಡಿತವಾಗಿ ವಿರೋಧಿಸುವುದಾಗಿ ಘೋಷಿಸಿದರು. ತಂತಮ್ಮ ಕ್ಷೇತ್ರಗಳ ಶಾಸಕರು ಮತ್ತು ಸಂಸತ್ ಸದಸ್ಯರು ಕೂಡ ಇವನ್ನು ವಿರೋಧಿಸುವಂತೆ ಕೇಳಲಾಗುವುದು ಎಂದರು.

ಮೋದಿ ಆಡಳಿತದ ಈ ಕಾರ್ಪೊರೇಟ್–ಪರ ಮತ್ತು ರೈತ–ವಿರೋಧಿ ಪ್ರಾಜೆಕ್ಟ್‌ಗಳಿಗೆ ಒಂದಂಗುಲ ಭೂಮಿಯನ್ನೂ ಕೊಡುವುದಿಲ್ಲ ಎಂಬ ನಿರ್ಣಯವನ್ನು ಈ ಸಮಾವೇಶ ಸರ್ವಾನುಮತದಿಂದ ಅಂಗೀಕರಿಸಿತು.

ಸರಿಯಾಗಿ ಒಂದು ತಿಂಗಳ ಹಿಂದೆ ಇದೇ ಜಿಲ್ಲೆಯ ದಹಾಣುನಲ್ಲಿ ಸಿಪಿಐ(ಎಂ) ಮತ್ತು ಎಐಕೆಎಸ್ ಏರ್ಪಡಿಸಿದ್ದ 35,000 ಮಂದಿ ಭಾಗವಹಿಸಿದ್ದ ನಿರ್ಧಾರ್ ರ್‍ಯಾಲಿ ಈ ರೈತ–ವಿರೋಧಿ ಪ್ರಾಜೆಕ್ಟ್‌ಗಳನ್ನು ವಿರೋಧಿಸುವ ಪ್ರತಿಜ್ಞೆ ಕೈಗೊಂಡಿತ್ತು.





ಫ್ರಾನ್ಸ್ : 50 ವರ್ಷಗಳ ನಂತರ ಮತ್ತೆ ಉಕ್ಕುತ್ತಿರುವ ಮೇ 1968ರ ಚೇತನ– ಸೂಸಾನ್ ರಾಮ್

ಮೇ ತಿಂಗಳಲ್ಲಿ 50 ವರ್ಷಗಳ ಹಿಂದೆ ಫ್ರಾನ್ಸ್ ಹತ್ತಿ ಉರಿದಿತ್ತು. ವಿಶ್ವದ ಅತ್ಯಂತ ಮುಂದುವರೆದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ "ಅಸಾಧ್ಯ"ವೆಂದು ಬಗೆಯಲಾಗಿದ್ದ "ಕೆಳಗಿನಿಂದ" ಕ್ರಾಂತಿಯ ಸಾಧ್ಯತೆ ಎಲ್ಲಾ ಆಕ್ರೋಶ, ರಭಸ ಮತ್ತು ಸಂಭ್ರಮಗಳೊಂದಿಗೆ ಆಸ್ಫೋಟಗೊಂಡಿತ್ತು. ಲಕ್ಷಾಂತರ ವಿದ್ಯಾರ್ಥಿಗಳು, ಕಾರ್ಮಿಕರು ರಸ್ತೆಗಿಳಿದು ಕಾರ್ಖಾನೆಗಳು ಮುಚ್ಚಿ ಕ್ಯಾಂಪಸುಗಳನ್ನು ವಿದ್ಯಾರ್ಥಿಗಳನ್ನು ಆಕ್ರಮಿಸಿಕೊಂಡು ಫ್ರಾನ್ಸ್‌ನಲ್ಲಿ ಹಿಂದೆಂದು ಕಾಣದ ರೀತಿಯಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ನಾಂದಿಯಾಯಿತು. ಅಂದಿನ ಸರ್ಕಾರದ ನೇತೃತ್ವ ವಹಿಸಿದ್ದ ಚಾರ್ಲ್ಸ್ ಡಿಗಾಲೆಯವರು ದಿಗ್ಭ್ರಮೆಯಿಂದ ತತ್ತರಿಸಿದ್ದರು.

ಇಂದು ಫ್ರಾನ್ಸ್‌ನ ಉದ್ದಗಲಕ್ಕೂ ಅರ್ಧಶತಮಾನದ ಹಿಂದಿನ ಚಾರಿತ್ರಿಕ ಘಟನೆಯನ್ನು ಪುನಾಸೃಷ್ಟಿ ಮಾಡುತ್ತಾ ಕೆಲಸ ನಿಲ್ಲಿಸಿ ರಸ್ತೆಗಿಳಿಸಿದ್ದಾರೆ. ಮತ್ತೊಮ್ಮೆ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಗಳನ್ನು ಆಕ್ರಮಿಸಿಕೊಂಡಿದ್ದಾರೆ. ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಮಿಕರು ಮುಷ್ಕರದಲ್ಲಿ ತೊಡಗಿದ್ದಾರೆ ಮತ್ತು ವಿಶಾಲವಾದ ಜನ ಸಮೂಹವನ್ನೂ ಸೆಳೆಯುತ್ತಿದ್ದಾರೆ. ನಿವೃತರು ಪೆನ್‌ಶನ್ ಕಾಪಾಡಿಕೊಳ್ಳಲು, ಆರೋಗ್ಯ ಕ್ಷೇತ್ರದ ನೌಕರರು, ಏರ್ ಫ್ರಾನ್ಸ್‌ನ ಪೈಲಟ್‌ಗಳು ತಮ್ಮ ದುಸ್ಥಿತಿಗಾಗಿ ಉರಿದು ಬೀಳುತ್ತಿದ್ದಾರೆ. ಬಂಡವಾಳಶಾಹಿ ವಿರೋಧಿ ಎಡ ಶಕ್ತಿಯ ಪ್ರಭಾವ ಕಾರ್ಮಿಕ ಸಂಘಟನೆಗಳ ಹೋರಾಟದ ಶಕ್ತಿ ಹೆಚ್ಚಿಸಿದೆ ಮತ್ತು ಮೊಳಗುತ್ತಿರುವುದು ಒಂದೇ ಘೋಷಣೆ "ಹೋರಾಟಗಳ ಸಂಗಮ"

'ಪ್ರಾಜೆಕ್ಟ್ ಮಾಕ್ರೋನ್' ಗೆ ಸವಾಲು

ಜಗದ ಸುತ್ತ

ಅನು: ಎಂ.ಜಿ.ವೆಂಕಟೇಶ್

ಇದಕ್ಕಿಂತ ಒಳ್ಳೆಯ ಅವಕಾಶ ಇರಲಾರದು. ಈ ತಿಂಗಳು ಅಧ್ಯಕ್ಷ ಮಾಕ್ರೋನ್ ಅವರ ಅಧಿಕಾರವಧಿ ಪ್ರಥಮ ವಾರ್ಷಿಕ. ಈ ಅವಧಿಯಲ್ಲಿ ತೀವ್ರವಾದ ನವ ಉದಾರವಾದಿ ಕಾರ್ಯಸೂಚಿಯನ್ನು ಜಾರಿಗೆ ತರಲು ಮೆಕ್ರೋನ್ ಸ್ವಲ್ಪವೂ ಹಿಂಜರಿದಿಲ್ಲ. 'ಪ್ರಾಜೆಕ್ಟ್ ಮಾಕ್ರೋನ್' ಉದ್ದೇಶ ಫ್ರೆಂಚ್ ಬಂಡವಾಳವನ್ನು ಯೂರೋಪ್ ಯೂನಿಯನ್ ನಲ್ಲಿ ಸೇರಿಸುವ ಹೊಸ ವ್ಯೂಹದ ಭಾಗವಾಗಿ ಫ್ರೆಂಚ್ ಅರ್ಥವ್ಯವಸ್ಥೆಯನ್ನು ಪುನರ್ ನಿರ್ಮಾಣ ಮಾಡುವುದು. ಅವರ ಹೊಸ ಆರ್ಥಿಕ ವ್ಯೂಹವನ್ನು ನವ ಉದಾರವಾದಿ ಪರ, ಕಾರ್ಮಿಕ ವಿರೋಧಿ ಮತ್ತು ರಾಷ್ಟ್ರೀಯವಾದಿ ಲಕ್ಷಣವೆಂದು ಪರಿಗಣಿಸಬಹುದು. ಆಂತರಿಕವಾಗಿ ಥ್ಯಾಚರ್ ರೀತಿಯ ಮಾದರಿಯನ್ನು ಫ್ರಾನ್ಸ್‌ನಲ್ಲಿ ಪುನರಾವರ್ತಿಸುವ ಪ್ರಯತ್ನ ನಡೆದಿದೆ. ಶ್ರೀಮಂತರಿಗೆ ತೆರಿಗೆ ವಿನಾಯಿತಿ, ಬಡವರಿಗೆ ರಿಯಾತಿಗಳ ಕಟ್, ಕಾರ್ಮಿಕರು ದಶಕಗಳ ಹೋರಾಟದ ಫಲವಾಗಿ ಪಡೆದುಕೊಂಡಿದ್ದ ಕಾರ್ಮಿಕ ಹಕ್ಕುಗಳ ದಮನ, ಚೆನ್ನಾಗಿ ನಡೆಯುತ್ತಿರುವ ಸಾರ್ವಜನಿಕ ಉದ್ಯಮಗಳ ಖಾಸಗೀಕರಣ. ಮಾಕ್ರೋನ್ ವಿದ್ಯಾರ್ಥಿಗಳ ಸಮರಶೀಲ ಹೋರಾಟವನ್ನು ಅವರಿಗೆ ಉನ್ನತ ಶಿಕ್ಷಣಕ್ಕೆ ಅವಕಾಶ ವಂಚಿತರನ್ನಾಗಿಸಿ ಹತ್ತಿಕ್ಕ ಬಹುದೆಂಬ ಭ್ರಮೆಯಲ್ಲಿದ್ದಾರೆ.

ಕಳೆದ ಒಂದು ವರ್ಷದಲ್ಲಿ "ಪ್ರಾಜೆಕ್ಟ್ ಮಾಕ್ರೋನ್", "ಮೂರನೇ ದಾರಿ ಚಳುವಳಿ" (LREM – ಮಾಕ್ರೋನ್ ಪಕ್ಷದ ಹೆಸರು)ಯ ಚುನಾವಣಾ ವಿಜಯಗಳ ಮುಖಾಂತರ ಹಲವಾರು ವಿಜಯಗಳನ್ನು ಪಡೆಯಲಾಗಿದೆ. ಜೂನ್ 2017 ರ ಚುನಾವಣೆಯಲ್ಲಿ ಎಷ್ಟೋ ಸುತ್ತಿನ ಮತದಾನದ ಬಳಿಕ ಅಧ್ಯಕ್ಷರಿಗೆ ದೊರಕಿರುವ ಜನಾದೇಶ ಕೇವಲ ಶೇ.16% ರಷ್ಟೇ. ಪಾರ್ಲಿಮೆಂಟ್‌ನಲ್ಲಿ ಅವರು ಬಹುಮತ ಪಡೆದಿರುವುದು 10 ಮತದಾರರ ಪೈಕಿ 6 ಮತದಾರರು ಭಾಗವಹಿಸಿಲ್ಲದ ಚುನಾವಣೆಯಲ್ಲಿ.

ಮಾಕೋನ್ ಮೇಲೇರುವಿಕೆ ಮತದಾರರಿಗೆ ಮುಖ್ಯವಾಹಿನಿ ರಾಜಕಾರಣದಲ್ಲಿರುವ ಅತೃಪ್ತಿಯಿಂದಾಗಿಯಲ್ಲ. ಬದಲಾಗಿ, ಅದಕ್ಕೆ ನಿಜವಾದ ಕಾರಣ ಮುಖ್ಯವಾಹಿನಿ ರಾಜಕಾರಣದ ಬಗ್ಗೆ ಅಸಡ್ಡೆ ಮತ್ತು ಅವರ ಪ್ರತಿಸ್ಪರ್ಧಿ ಮೆಕ್ಕಿನ್ ಲೆನ್ ಪೆನ್ ಬಗ್ಗೆ ಮತದಾರರ ಅಸಹ್ಯ, ಜುಗುಪ್ಸೆ. ರಾಷ್ಟ್ರೀಯ ಅಸೆಂಬ್ಲಿಯ 577 ಸ್ಥಾನಗಳ ಪೈಕಿ ಐಖಇಒ 350 ಸ್ಥಾನ ಪಡೆದಿರುವುದರಿಂದ ಮಾಕ್ರೋನ್‌ರವರಿಗೆ ಅವರ ಕಾರ್ಯಕ್ರಮ ಕಾರ್ಯಗತಗೊಳಿಸಲು ಸುಲಭವಾಗಿದೆ. ಆದರೆ ಅವರ ಆಡಳಿತದ ಕ್ಷೀಣಿಸುತ್ತಿರುವ ಪ್ರಜಾಸತ್ತಾತ್ಮಕ ನೆಲೆ ಆಗಾಗ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಬಲವಾದ ವಿರೋಧ ಎದುರಾದಾಗ ಮಾಕ್ರೋನ್‌ರ ಪ್ರವೃತಿ ಚರ್ಚೆಯನ್ನು ಕೊನೆಗಾಣಿಸಿ ತನ್ನ ಆಯ್ಕೆಯನ್ನು ಬಲಾತ್ಕಾರದಿಂದ ಹೇರುವುದು ಆಗಿದೆ. ಕಳೆದ ವರ್ಷದಲ್ಲಿ 1958 ರ ಸಂವಿಧಾನ ಅನುಚ್ಛೇದ 40ರ ನಿರಂತರ ಉಪಯೋಗದಿಂದ ಅವರ ಇಚ್ಛೆಯನ್ನು ಜಾರಿಗೊಳಿಸಲಾಗಿದೆ.

ಮಾಕ್ರೋನ್ ರವರ "ಶುದ್ಧಿಕರಣದ ಪೊರಕೆ"ಗೆ ಗುರಿಯಾಗಿದ್ದು ಕಾರ್ಮಿಕರ ರಕ್ಷಣೆ ಮತ್ತು ಸ್ಥಿತಿಗತಿಗಳ ಬಗೆಗಿನ ಫ್ರೆಂಚ್ ಕಾನೂನುಗಳು. ಕ್ಷೇತ್ರವಾರು ಕಾರ್ಮಿಕ ವರ್ಗದ ಹಕ್ಕು ಮತ್ತು ರಕ್ಷಣಾ ಕಾನೂನಿನ ಪ್ರಾಧಾನ್ಯತೆ; ಹೆಚ್ಚುವರಿ ಕಾರ್ಮಿಕರ ನಿರ್ವಹಣೆ ಬಗ್ಗೆ ಇರುವ ಕಾನೂನು ಕ್ರಮಗಳ ಮತ್ತು ಟ್ರಿಬ್ಯೂನಲ್ ಗಳ ನಿಯಮಾವಳಿ, ಹಾಗೂ ಕೇಂದ್ರ ಕಾರ್ಮಿಕ ಸಂಘಟನೆಗಳ ಪಾತ್ರ – ಈ ಮೂರು ಸಾರ್ವತ್ರಿಕವಾಗಿ ಒಪ್ಪಿತ ನೀತಿಗಳ ಮೇಲೆ ಕಳೆದ ಸೆಪ್ಟೆಂಬರ್‌ನಲ್ಲಿ ಸುಗ್ರೀವಾಜ್ಞೆಗಳ ಮುಖಾಂತರ ಮಾಕ್ರೋನ್ ಪ್ರಹಾರ ನಡೆಸಿದರು. ಇದಕ್ಕೆ ವಿರುದ್ಧವಾಗಿ ಸಮರೋಪಾದಿಯಲ್ಲಿ ಸಮರಶೀಲ ಟಿ.ಯು. ಒಕ್ಕೂಟ ಸಿಜಿಟಿ ನಡೆಸಿದ ಹೋರಾಟದ ಸ್ಫೂರ್ತಿಯಿಂದ ಸಾವಿರಾರು ಜನ ಬೀದಿಗಿಳಿದರೂ, ಕಾರ್ಮಿಕ ಸಂಘಟನೆಗಳ ಅನೈಕತೆ, ಪ್ರಬಲ ಕಾರ್ಮಿಕ ಸಂಘಟನೆಯಾದ ಸಿಎಫ್‌ಡಿಟಿ ಭಾಗವಹಿಸದೇ ಇದ್ದುದರಿಂದ ಮತ್ತು ಎಡಪಂಥೀಯರ ಒಳಗೆ ಭಿನ್ನಾಭಿಪ್ರಾಯದಿಂದ ಕ್ಷೀಣಿಸಿತು.

54 ಲಕ್ಷ ಸಾರ್ವಜನಿಕ ಉದ್ಯಮಗಳ ಕಾರ್ಮಿಕರ ಮೇಲೆ ಯುದ್ಧ

ಇದರಿಂದ ಬಲಗೊಂಡ ಮಾಕ್ರೋನ್ 54 ಲಕ್ಷ ಸಾರ್ವಜನಿಕ ಉದ್ಯಮಗಳ ಕಾರ್ಮಿಕರ ಮೇಲೆ ಯುದ್ಧ ಸಾರಿದರು. ಮೊದಲ ಘಟ್ಟದಲ್ಲಿ 1.2 ಲಕ್ಷ ಸಾರ್ವಜನಿಕ ಉದ್ಯಮದ ಹುದ್ದೆಗಳನ್ನು ಕಡಿತಗೊಳಿಸಿ ಈಗಾಗಲೇ 20% ರಷ್ಟಿರುವ ಕಾಂಟ್ರಾಕ್ಟ್ ನೌಕರರ ಸಂಖ್ಯೆಯನ್ನು ಹೆಚ್ಚಿಸಿದರು. ಫೆಬ್ರವರಿಯಲ್ಲಿ 80 ವರ್ಷದ ಇತಿಹಾಸವಿರುವ ಫ್ರೆಂಚ್ ರೈಲ್ವೆಯ ಸಾವಿರಾರು ನೌಕರರನ್ನು ತೆಗೆದುಹಾಕಲು ಆರಂಭಿಸಿದರು.

ರೈಲ್ವೆಯ ಭವಿಷ್ಯದ ಬಗ್ಗೆ ನಡೆಸಿದ್ದ "ಸ್ವತಂತ್ರ ಅಧ್ಯಯನ" ವರದಿಯ ಶಿಫಾರಸು ಜಾರಿಗೆ ಕಾನೂನಿನ ಚೌಕಟ್ಟು ಒದಗಿಸುವುದು ಮಾಕ್ರೋನ್ ರವರ ನಿಜವಾದ ಉದ್ದೇಶವಾಗಿತ್ತು. ಇದರ ಮತ್ತು ಯುರೋಪಿಯನ್ ಕೂಟದ '4 ನೇ ರೈಲ್ವೇ ಪ್ಯಾಕೇಜ್' ಪ್ರಕಾರ ದೇಶೀಯ ಸಾಗಾಣಿಕೆ ಮಾರುಕಟ್ಟೆಯನ್ನು ಖಾಸಗಿ ಸ್ಪರ್ಧೆಗೆ ತೆರೆಯಬೇಕಿತ್ತು. ಫೆಬ್ರವರಿ 15 ರಂದು ಪ್ರಧಾನಮಂತ್ರಿಯವರಿಗೆ ಕೊಟ್ಟ ವರದಿಯ ಪ್ರಕಾರ ಎಸ್‌ಎನ್‌ಇಎಫ್ (ಫ್ರೆಂಚ್ ರೈಲ್ವೇ) ಯನ್ನು ವಾಣಿಜ್ಯ ಸಂಸ್ಥೆಯಾಗಿ ಮಾರ್ಪಾಡಿಸುವುದು ಮುಖ್ಯ ಶಿಫಾರಸು. ಆದರೆ ನಿಜವಾದ ಉದ್ದೇಶ ಹೊಸ ಸಾಮಾಜಿಕ ಕಾಂಟ್ರಾಕ್ಟ್ ಮುಖಾಂತರ ಎನ್‌ಎನ್‌ಸಿಎಫ್ ನೌಕರರ ದಶಕಗಳ ಹೋರಾಟದ ಫಲವಾದ 1,40,000 ನೌಕರರ "ಕೆಮಿನಾಟ್" (ನೌಕರರ ಸಂಘಟನೆ)ನ ಪ್ರಾಬಲ್ಯವನ್ನು ಅಳಿಸುವುದಾಗಿತ್ತು.

ಫ್ರಾನ್ಸ್‌ನ್ನು ಪ್ರತಿರೋದದ ಅಲೆ ಆವರಿಸಿದ್ದು ಇದು ಕಾರ್ಮಿಕ ಸಂಘಟನೆ ಮತ್ತು ರ್‍ಯಾಡಿಕಲ್ ಎಡ ಸಂಘಟನೆಗಳ ಐಕ್ಯತೆಯ ಫಲದಿಂದ ಸಾಧ್ಯವಾಗಿದೆ. ಜೀನ್ ಲಕ್ ಮೆಲನ್‌ರನ್ ಕಳೆದ ವರ್ಷ ಅಜ್ಞಾತರಾಗಿದ್ದವರು. ಇಂದು ಜನಪ್ರಿಯರಾಗಿ 20% ವೋಟುಗಳನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಮೊದಲ ಸುತ್ತಿನಲ್ಲಿ ಪಡೆದಿರುವುದು ವ್ಯಾಪಕ ಎಡ–ಪ್ರಜಾಸತತ್ಥಾತ್ಮಕ ಐಕ್ಯತೆಯ "ಪಾಪುಲರ್ ಫ್ರಂಟ್" ಸ್ಥಾಪನೆಗೆ ಇಂಬು ನೀಡಿದೆ ಮತ್ತು ಫ್ರಾನ್ಸ್‌ನ ದೀರ್ಘ ಬೇಸಗೆ ಈಗಷ್ಟೇ ಆರಂಭವಾಗಿದೆ.

ಫೆಬ್ರವರಿ ಕೊನೆಯ ಹೊತ್ತಿಗೆ ಅಧ್ಯಕ್ಷ ಮತ್ತು ಪ್ರಧಾನ ಮಂತ್ರಿಯವರು ಅವರ ನಿಜವಾದ ಗುರಿ ಕೆಮಿನಾಟ್ ನಾಶಪಡಿಸುವುದಾಗಿತ್ತೆಂದು ಒಪ್ಪಿಕೊಂಡರು.

ಫ್ರೆಂಚ್ ಕಾರ್ಮಿಕ ವರ್ಗ ಹೋರಾಟದ ಚರಿತ್ರೆಯ ಪುಟ ತಿರುಗಿಸಿದಾಗ "ಕೆಮಿನಾಟ್" ತಮ್ಮ ವರ್ಗ ಪ್ರಜ್ಞೆಯಿಂದ ಸಾಮಾಜಿಕ, ಕಾರ್ಮಿಕ ಹೋರಾಟದ ಮುಂಚೂಣಿಯಲ್ಲಿರುವುದು ಕಂಡುಬರುತ್ತದೆ. 1968 ರಲ್ಲಿ ವಿದ್ಯಾರ್ಥಿಗಳಿಗೆ ಬೆಂಬಲಸೂಚಿಸಿ ಮುಷ್ಕರದಲ್ಲಿ ತೊಡಗಿದ್ದರು. 1995 ರಲ್ಲಿ ಕೆಮಿನಾಟ್‌ಗಳು ಹಲವಾರು ಮುಷ್ಕರಗಳ ಕೇಂದ್ರ ಸ್ಥಾನದಲ್ಲಿದ್ದು, ಪ್ರಧಾನಮಂತ್ರಿಯವರ ಅಂದಿನ ಸಾರ್ವಜನಿಕ ಉದ್ಯಮಗಳ ಮೇಲಿನ ಖಾಸಗೀಕರಣದ ಪ್ರಹಾರವನ್ನು 1995 ರ ಡಿಸೆಂಬರ್ 12 ರಂದು 10 ಲಕ್ಷ ಕಾರ್ಮಿಕರ ಮುಷ್ಕರ ಸಂಘಟಿಸಿದ್ದರಿಂದ ಹಿಂದೆಗೆಯುವಂತಾಯಿತು.

ರೈಲ್ವೇ ಕಾರ್ಮಿಕರ ತಿರುಗೇಟು

ಥ್ಯಾಚರ್‌ರವರು ಗಣಿ ಕಾರ್ಮಿಕರ ಮೇಲೆ ನಡೆಸಿದ ಸಮರದ ರೀತಿಯಲ್ಲೇ ಕೆಮಿನಾಟ್ಸ್‌ನ್ನು ಒಂದೇ ಏಟಿಗೆ ಮುಗಿಸುವ ರೀತಿಯಲ್ಲಿ ಯುವ ಅಧ್ಯಕ್ಷರು ಆಲೋಚಿಸಿ, ತನ್ಮೂಲಕ ಬೃಹತ್ ಪ್ರಹಾರವನ್ನು ಸಾರ್ವಜನಿಕ ಉದ್ಯಮಗಳ ಮೇಲೆ ಮಾಡುವ ಇಚ್ಛೆ ಹೊಂದಿರುತ್ತಾರೆ.

"ಕಾರ್ಮಿಕರ ಕಾನೂನು ಸುಧಾರಣೆ" ನಡೆಸಿದ ಯಶಸ್ವಿನಿಂದ ಬೀಗುತ್ತಿರುವ ಮಾಕ್ರೋನ್, ಈ ನೀತಿಯನ್ನು ವಿರೋಧಿಸುವವರ ಅನೈಕ್ಯತೆ ಮತ್ತು ಎಡ ಮತ್ತು ಕಾರ್ಮಿಕ ಸಂಘಟನೆಯಲ್ಲಿನ ವಿಂಗಡನೆಗಳಿಂದ ಗೆಲ್ಲುವ ಹಂಬಲದಲ್ಲಿದ್ದಾರೆ. ಇಲ್ಲೇ ಅವರ ಲೆಕ್ಕಾಚಾರ ತಪ್ಪಾಗಿರುವುದು. ಕಳೆದ ವಾರಗಳಲ್ಲಿ ಎಲ್ಲ ಕಾರ್ಮಿಕ, ಎಡ ಶಕ್ತಿಗಳು ಒಂದುಗೂಡುತ್ತಿದ್ದು, ಒಗ್ಗಟ್ಟಿನ ಕಾರ್ಯಾಚರಣೆ ಮಾಡುತ್ತಿವೆ.

ಮಾರ್ಚ್ 21 ರಂದು ಪ್ಯಾರಿಸ್‌ನಲ್ಲಿ ಮಹತ್ವದ ಬೆಳವಣಿಗೆ ನಡೆದಿದ್ದು ಅದರಲ್ಲಿ 12 ಎಡ ಸಂಘಟನೆಗಳ ಪ್ರತಿನಿಧಿಗಳು ಸೇರಿ ಪತ್ರಕರ್ತರ ಪ್ರಶ್ನೆಗಳಿಗೆ ಮುಖಾಮುಖಿಯಾದರು. ಅದರಲ್ಲಿ ಸದರಿಯಂತೆ ಮೈಕ್ ಹಿಡಿದವರಲ್ಲಿ ಫ್ರಾನ್ಸ್ ಇನ್‌ಸೌಮೈಸ್ ("ಯಾರಿಗೂ ಬಗ್ಗದ ಫ್ರಾನ್ಸ್" – ಈಗ ಅತ್ಯಂತ ದೊಡ್ಡ ಮತ್ತು ಪ್ರಭಾವ ಶಾಲಿ ಎಡ ಶಕ್ತಿ), ನೋವೋ ಪಾರ್ಟಿ ಆಂಟಿ ಕ್ಯಾಪಿಟಲಿಸ್ಟಿಕ್ (ಎನ್‌ಪಿಎ), ಕಮ್ಯೂನಿಸ್ಟ್ ಪಕ್ಷ ಮತ್ತು ಯೂರೋಪ್ ಏಕೋಲಜಿ ಗುಂಪುಗಳ ನಾಯಕರಿದ್ದರು.

ಅಂದು ಎಲ್ಲರೂ ಸಾರ್ವಜನಿಕ ಉದ್ಯಮ ರಕ್ಷಣೆಗೆ ಜಂಟಿ ಕಾರ್ಯಾಚರಣೆಗೆ ತಮ್ಮ ಸಂಘಟನೆಗಳ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

ಕಾರ್ಮಿಕ ಸಂಘಟನೆಗಳ ಮಟ್ಟದಲ್ಲಿ ಸಹ ಒಗ್ಗಟಿನ ಹವಾ ಬೀಸುತ್ತಿದೆ. ರೈಲ್ವೆ ನೌಕರರ ಎಲ್ಲ ಫೆಡರೇಶನ್‌ಗಳ ಪ್ರತಿನಿಧಿಗಳು ಸೇರಿ ಒಪ್ಪಂದಕ್ಕೆ ಬಂದು ಎರಡು ದಿನಗಳ ಸರಣಿ ಮುಷ್ಕರಕ್ಕಾಗಿ ವೇಳಾಪಟ್ಟಿ ಸಿದ್ಧಪಡಿಸಿವೆ. ಅದರಲ್ಲಿ ಎರಡು ದಿನಗಳ ಮುಷ್ಕರ, ಮೂರು ದಿನಗಳ ಸಾಮಾನ್ಯ ಕಾರ್ಯಾಚರಣೆಯಿರುತ್ತದೆ. ಎಪ್ರಿಲ್ 3 ರಂದು ಪ್ರಾರಂಭಿಸಿದ 'ಸರಣಿ' ಮುಷ್ಕರದ ಬಿಸಿ ಪ್ರಯಾಣಿಕರಿಗೂ, ಸರಕು ಸಾಗಾಣಿಕೆಗೂ ತಟ್ಟಿದ್ದು ತತ್ಪರಿಣಾಮವಾಗಿ ಆರ್ಥಿಕ ಬಿಕ್ಕಟಿನಿಂದ ವ್ಯಾಪಾರಿ ಮತ್ತು ಕೈಗಾರಿಕಾ ವರ್ತುಲಗಳಿಗೆ ಎಚ್ಚರಿಕೆ ನೀಡಿವೆ.


ಈ ಮಧ್ಯೆ ಏರ್ ಫ್ರಾನ್ ಕೆಲಸಗಾರರು ಮುಷ್ಕರದಿಂದ ಮಾಲೀಕರಿಗೆ 30 ಕೋಟಿ ಯೂರೋಗಳ ನಷ್ಟವಾಗಿರುತ್ತದೆ. ಶೇರು ಮಾರುಕಟ್ಟೆ ಕುಸಿದಿದ್ದು ಹೊಸ ಕಳಪೆ ವೇತನ ಏರಿಕೆಯನ್ನು ಕಾರ್ಮಿಕರು ತಿರಸ್ಕರಿಸಿ, ಕಂಪನಿಯ ಎಂ.ಡಿ. ರಾಜಿನಾಮೆ ನೀಡಬೇಕಾಗಿ ಬಂದಿದೆ.

ಕಾರ್ಮಿಕ ಶಕ್ತಿಯ ಪ್ರಖರತೆ ದೇಶದ ಉದ್ದಗಲಕ್ಕೂ ವ್ಯಾಪಿಸಿದೆ. ರೈಲ್ವೆ ನೌಕರರು ರಸ್ತೆಗಳನ್ನು ಆಕ್ರಮಿಸಿಕೊಂಡು ಟೋಲ್‌ಗಳಲ್ಲಿ ಕಾರುಗಳನ್ನು ಉಚಿತವಾಗಿ ಬಿಡುತ್ತಿದ್ದಾರೆ ಮತ್ತು ಮುಷ್ಕರ ನಿಧಿಗಾಗಿ ವಂತಿಕೆಯನ್ನು ಸಂಗ್ರಹಿಸುತ್ತಿದ್ದಾರೆ. ಆನ್‌ಲೈನ್ ರೈಲ್ವೆ ನೌಕರರ ಮುಷ್ಕರ ನಿಧಿ ಮೂಲಕ ದಶಲಕ್ಷ ಯುರೋಗಳನ್ನು ಸಂಗ್ರಹಿಸಿರುವುದು, ಬಲಿಷ್ಠ ಸರ್ಕಾರ ಮತ್ತು ಮುಖ್ಯವಾಹಿನಿ ಮಾಧ್ಯಮಗಳು ಕೆಮಿನಾಟ್ಸ್ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಪಡಿಸುವ ಪ್ರಯತ್ನಗಳಿಗೆ ಬದಲಾಗಿ ಬಲವಾದ ಸಾರ್ವಜನಿಕ ಅಭಿಪ್ರಾಯ ಮೂಡುತ್ತಿರುವ ಪ್ರತೀಕವಾಗಿದೆ.

"ಪಾಪುಲರ್ ಫ್ರಂಟ್"ನತ್ತ

ಪ್ರತಿರೋದ ವಿವಿಧ ಹಂತಗಳಲ್ಲಿ ವಿವಿಧ ರೂಪಗಳಲ್ಲಿ ಪ್ರಕಟವಾಗುತ್ತಿದ್ದು ಮೇ ತಿಂಗಳ ಮೊದಲಿನಲ್ಲಿ ದೇಶದ ಮನಸ್ಥಿತಿ ಮೊಕ್ರೋನ್ ಆಡಳಿತದ ಮೊದಲ ವಾರ್ಷಿಕ ಸಮಾರಂಭವನ್ನು ಅಣಕಿಸುವ ಪಾರ್ಟಿಗೆ ಅಗೌರವ ಸೂಚಿಸುವ ಮೂಲಕ ವ್ಯಕ್ತವಾಗಿತ್ತು. ಪ್ರದರ್ಶನಗಳು, ರಸ್ತೆ ಬಂದ್, ಮಾಕ್ರೋನ್ ವಿರೋಧಿ ಚಟುವಟಿಕೆ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗಳಲ್ಲಿ ರಾರಾಜಿಸುತ್ತಿದೆ. 1968 ರ ವಿದ್ಯಾರ್ಥಿ ಚಳುವಳಿಯ ಜನ್ಮ ಸ್ಥಳವಾದ ನಾನ್‌ಟೇರ್‌ನಲ್ಲಿ ರಸ್ತೆ ತಡೆ ವಾರಗಟ್ಟಲೆ ನಡೆದಿದ್ದು ಪರೀಕ್ಷೆ ನಡೆಯುವುದನ್ನು ತಡೆದಿದ್ದು ಬದಲಿಗೆ ಪ್ರಗತಿಪರ ಅಧ್ಯಾಪಕರು ವಿದ್ಯಾರ್ಥಿಗಳಿಗೆ "ಉತ್ತಮ ರಾಜಕೀಯ ದರ್ಜೆ" ನೀಡುವುದಾಗಿ ತೀರ್ಮಾನಿಸಿರುತ್ತಾರೆ.

ಮೇ 26 ಗಮನಿಸಬೇಕಾದ ದಿನವಾಗಿದ್ದು, ಫ್ರಾನ್ಸ್‌ನ್ನು ಪ್ರತಿರೋದದ ಅಲೆ ಆವರಿಸಿದ್ದು ಇದು ಕಾರ್ಮಿಕ ಸಂಘಟನೆ ಮತ್ತು ರ್‍ಯಾಡಿಕಲ್ ಎಡ ಸಂಘಟನೆಗಳ ಐಕ್ಯತೆಯ ಫಲದಿಂದ ಸಾಧ್ಯವಾಗಿದೆ. ಜೀನ್ ಲಕ್ ಮೆಲನ್‌ರನ್ ಕಳೆದ ವರ್ಷ ಅಜ್ಞಾತರಾಗಿದ್ದವರು. ಇಂದು ಜನಪ್ರಿಯರಾಗಿ 20% ವೋಟುಗಳನ್ನು ಅಧ್ಯಕ್ಷೀಯ ಚುನಾವಣೆಯಲ್ಲಿ ಮೊದಲ ಸುತ್ತಿನಲ್ಲಿ ಪಡೆದಿರುವುದು ವ್ಯಾಪಕ ಎಡ–ಪ್ರಜಾಸತತ್ಥಾತ್ಮಕ ಐಕ್ಯತೆಯ "ಪಾಪುಲರ್ ಫ್ರಂಟ್" ಸ್ಥಾಪನೆಗೆ ಇಂಬು ನೀಡಿದೆ. ಕ್ರಾಂತಿಕಾರಿ ಹೊಸ ಸಾಧ್ಯತೆಗಳ ಫ್ರಾನ್ಸ್‌ನ ದೀರ್ಘ ಬೇಸಗೆ ಈಗಷ್ಟೇ ಆರಂಭವಾಗಿದೆ.



JANASHAKTHI KANNADA VARA PATRIKE JUNE 11-17, 2018 Price: Rs. 10/- Date of Publication: 8 JUNE 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕೇರಳದಲ್ಲಿ ನಿಫಾ ಹತೋಟಿ ಹೇಗೆ ಸಾಧ್ಯವಾಯಿತು?

(ಇದು ದಿ ಹಿಂದೂ ಪತ್ರಿಕೆಯಲ್ಲಿ ಬಂದ ವರದಿ ಮೇಲೆ ಆಧಾರಿತ ಬರಹ)

ಒಂದು ವರ್ಷದ ಹಿಂದೆ ಗೊರಕಪುರದಲ್ಲಿ ಎನ್‌ಸೆಫೆಲೈಟಿಸ್ ನಿಂದಾಗಿ ನೂರಾರು ಮಕ್ಕಳ ಸಾವುಗಳ ಸುದ್ದಿ ಇಂದಿಗೂ ನೆನಪಿನಿಂದ ಆಳಿಸಿಲ್ಲ. ಅದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸರ್ಕಾರ ಎಷ್ಟು ನಿರ್ಲಕ್ಷ ತೋರಿಸುತ್ತದೆ ಎಂದು ಹೇಳಲು ಒಳ್ಳೆ ಉದಾಹರಣೆ. ಆದರೆ ಕೇರಳದ ನಿಫಾ ವೈರಸ್ ಸಮಸ್ಯೆಯನ್ನು ಕೇರಳದ ಆರೋಗ್ಯ ವ್ಯವಸ್ಥೆ ನಿಭಾಯಿಸಿದ ವಿಧಾನವನ್ನು ಅವಲೋಕಿಸಿದರೆ ನೀವೇ ತೀರ್ಮಾನಕ್ಕೆ ಬರಬಹುದು.

ಡಾ. ಪ್ರಕಾಶ ಸಿ. ರಾವ್

2018 ಮೇ ತಿಂಗಳಲ್ಲಿ ನಿಫಾ ವೈರಸ್ ರೋಗ ಕೇರಳದಲ್ಲಿ ಸುದ್ದಿ ಮಾಡಿದ್ದರೂ. ಇಡೀ ಭಾರತದಲ್ಲಿ ಆತಂಕ ಹುಟ್ಟಿಸಿತ್ತು. ಅದೊಂದು ಮಾರಕ ರೋಗ, ಅದೊಂದು ವೈರಸ್ ರೋಗವಾಗಿದ್ದು, ಮಲೇಶಿಯಾ ಹಾಗೂ ಸಿಂಗ್‌ಪೂರ್‌ನಲ್ಲಿ 1998 ರಲ್ಲಿ ಕಂಡುಬಂದಿತ್ತು. ಅಲ್ಲಿ ಅದು ಹರಡಿದಂತೆ 1 ಲಕ್ಷ ಹಂದಿಗಳಿಗೆ ಯುಥೇನೇಶಿಯಾ ವಿಧಾನದಿಂದ ಸಾಯಿಸಲಾಗಿತ್ತು. ಅದು ಬಾಂಗ್ಲಾದೇಶದಲ್ಲೂ ಕಂಡು ಬಂದಿದೆ.

ಈ ರೋಗ ಗಾಳಿಯಿಂದ ಒಬ್ಬರಿಂದ ಒಬ್ಬರಿಗೆ ಹರಡದಿದ್ದರೂ ಸ್ಪರ್ಶದಿಂದ (ರೋಗಿಯ ಸುತ್ತ ಮುತ್ತಲು ಇರುವವರಿಗೆ) ಬಾವಲಿ ಕಚ್ಚಿ ತಿಂದ ಹಣ್ಣನ್ನೂ ಮಾನವ/ಹಂದಿ ತಿನ್ನುವುದರಿಂದ ಆ ವ್ಯಕ್ತಿ ಹಾಗೂ ಹಂದಿಗೆ ರೋಗ ತಗುಲುತ್ತದೆ. ಭಾರತದಲ್ಲಿ ಇದೊಂದು ಸಾಂಕ್ರಾಮಿಕ ರೋಗವಾಗಿ ಹರಡದಿದ್ದುದಕ್ಕೆ ಕೇರಳದ ವೈದ್ಯ ವ್ಯವಸ್ಥೆಯ ಜಾಗರೂಕತೆ ಹಾಗೂ ವೈದ್ಯ ಸಂಶೋಧನೆ ವಿಭಾಗದ ಚಾಕಚಕತೆಯೇ ಕಾರಣ.

ಒಂದು ವರ್ಷದ ಹಿಂದೆ ಗೊರಕಪುರದಲ್ಲಿ ಎನ್‌ಸೆಫೆಲೈಟಿಸ್ ನಿಂದಾಗಿ ನೂರಾರು ಮಕ್ಕಳ ಸಾವುಗಳ ಸುದ್ದಿ ಇಂದಿಗೂ ನೆನಪಿನಿಂದ ಆಳಿಸಿಲ್ಲ. ಅದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸರ್ಕಾರ ಎಷ್ಟು ನಿರ್ಲಕ್ಷ ತೋರಿಸುತ್ತದೆ ಎಂದು ಹೇಳಲು ಒಳ್ಳೆ ಉದಾಹರಣೆ. ಆದರೆ ಕೇರಳದ ನಿಫಾ ವೈರಸ್ ಸಮಸ್ಯೆಯನ್ನು ಕೇರಳದ ಆರೋಗ್ಯ ವ್ಯವಸ್ಥೆ ನಿಭಾಯಿಸಿದ ವಿಧಾನವನ್ನು ಅವಲೋಕಿಸಿದರೆ ನೀವೇ ತೀರ್ಮಾನಕ್ಕೆ ಬರಬಹುದು.

ಇಳವರದ ಮೊಹಮ್ಮದ ಸಬೀತ್ ಕೋಳಿಕೋಡಿನ ಬೇಬಿ ಮೆಮೋರಿಯಲ್ ಆಸ್ಪತ್ರೆಗೆ ಸೇರಿಸಿದಾಗ, ಅವರಿಗೆ ಮಿದುಳಿನ ಜ್ವರ ಇದೆಯೆಂದು ಕಂಡು ಬಂದಿತ್ತು. ಅವನ ಪರಿಸ್ಥಿತಿ ಪ್ರತಿ ಗಂಟೆಗೆ ಕೆಡುತ್ತ ಬಂದಿತ್ತು. ಮಿದುಳಿನ ಜ್ವರ ಉಂಟುಮಾಡುವ ಹಲವಾರು ಹಲವಾರು ರೋಗಗಳ ವಿಭಾಗದಲ್ಲಿ ಇದು ಯಾವುದೆಂದು ಗುರುತಿಸಲು ಪ್ರಾರಂಭಿಸಲಾಯಿತು. (ಉದಾ: ರೇಬೀಸ್, ಜ್ಯಾಂಡೀಸ್, ಎನ್‌ಸೆಫೆಲೆಟ್ರಿನ್, ಲೆಪಲ್ಪಿಸ್ಪೈರಾ, ಹಾಸ್‌ಸ್ಕೀಸ್ಸೆ) ವಿಷಸೇವನೆ ಇತ್ಯಾದಿ. ಅಲ್ಲಿಯ ನರರೋಗ ತಜ್ಞ, ಮೆದುಳು ಜ್ವರಕ್ಕೆ ಹೊಸ ವೈರಸ್ ಕಾರಣ ಎಂಬ ತೀಮಾನಕ್ಕೆ ಬಂದು ಸಬೀತ್ ಅವರ ರಕ್ತವನ್ನು ಕರ್ನಾಟಕದ ಮಣಿಪಾಲ ಸೆಂಟರ್ ಫಾರ್ ವೈರಲ್ ರಿಸರ್ಚ್ (MCVR) ಸಂಸ್ಥೆಗೆ ಕಳುಹಿಸಿದರು. ಒಅಗಿಖ ಕೇಂದ್ರದ ಅರುಣ್ ಕುಮಾರ್ ಅವರು ಈ ತರಹದ ವಿದುಳು ಜ್ವರದ ರೋಗದ ಪರೀಕ್ಷೆ ಮಾಡುವಲ್ಲಿ ನಿಸ್ಸೀಮರು ಹಾಗೆ ಇತರ ಪ್ರಕರಣಗಳಲ್ಲಿ ಈಗಾಗಲೇ ತಮ್ಮ ದಕ್ಷತೆಯನ್ನು ತೋರಿಸಿದ್ದರು.



ಅರುಣ ಕುಮಾರ್ ಅವರ ತಂಡ ಹಿಂದೆ ಅಮೇರಿಕಾದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಸಂಸ್ಥೆಯಿಂದ ತರಬೇತಿ ಪಡೆದಿತ್ತು. ಈ ಕೇಂದ್ರ ಭಾರತದಲ್ಲಿನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (NIV) ಬಿಟ್ಟರೆ ವೈರಸ್ ರೋಗದ ಸಂಶೋಧನೆ ಮಾಡುವ ಎರಡನೇ ಕೇಂದ್ರವಾಗಿತ್ತು. ಅಲ್ಲಿ ಅರುಣಕುಮಾರ್ ಅವರು ರಿಯಲ್ ಟೈಮ್ ಪಾಲಿಮರಸ್ಟ್ ಚೇನ್ ರಿಯಾಕ್ಷನ್ (Real time polymerast chain reaction) ಮಾಡಿ ಅವರ ತಂಡ ಸಬೀತ್, ಅವರ ತಂದೆ ಹಾಗೂ ಸೋದರ ಅತ್ತೆ ಅವರಿಗೆ ನಿಫಾ ರೋಗ ಇರುವುದಾಗಿ ತಿಳಿಸಿದರು. ಇದು ಮೊದಲ ನಿರ್ಣಾಯಕ ಹೆಜ್ಜೆ. ಈ ರೋಗ ಕೋಳಿಕೋಡಿನಲ್ಲಿ 19 ಜನರಲ್ಲಿ ಕಂಡು ಬಂದಿದ್ದು, ಅದರಲ್ಲಿ 17 ಜನರನ್ನು ಬಲಿತೆಗೆದು ಕೊಂಡಿದೆ. ಆದ್ದರಿಂದ ಕೂಡಲೆ N95 ಮುಖ ಪಟ್ಟಿ (MASK) ಯನ್ನೂ ಕೋಳಿಕೋಡ್‌ನಲ್ಲಿ ಎಲ್ಲರಿಗೆ ದೊರಕುವಂತೆ ಸರ್ಕಾರ ವ್ಯವಸ್ಥೆ ಮಾಡಿತು. ಅದೇ ಸಮಯದಲ್ಲಿ ಸರ್ಕಾರ ಈ ರೋಗ ಹಣ್ಣುಗಳಿಂದ ಹರಡುತ್ತದೆ ಎಂದು ತಿಳಿಸಿದ್ದರಿಂದ ಅಲ್ಲಿ ಜನರು ಕೂಡಲೆ ಹಣ್ಣು ಖರೀದಿಸುವುದನ್ನೂ ನಿಲ್ಲಿಸಿದರು. ಈ ರೀತಿ ಕೂಡಲೆ ರೋಗ ಕಂಡು ಹಿಡಿದು, ಈ ರೋಗ ತಡೆಗಟ್ಟಲು ಎಲ್ಲ ಪ್ರಯತ್ನಗಳು ಪ್ರಾರಂಭವಾದವು.

ಭಾರತದೇ ಈ ರೀತಿಯ ಸಾಂಕ್ರಾಮಿಕ ಮಿದುಳಿನ ಜ್ವರ 10,000 ಜನರಿಗೆ ತಗುಲಿದರು ಅವರಲಿಯೂ ಜ್ವರ ಪತ್ತೆಯಾವುದೇ ಇಲ್ಲದಿರುವುದು ದುರಂತವೇ ಆಗಿದೆ.

2005 ರ ಅಂತರಾಷ್ಟ್ರಿಯ ಆರೋಗ್ಯ ನೀತಿ ಪ್ರಕಾರ, ಸರ್ಕಾರ ಈ ರೋಗವನ್ನು ವಿಶ್ವ ಆರೋಗ್ಯ ಸಂಸ್ಥೆಗೆ ವರದಿ ಮಾಡಬೇಕಾಗುತ್ತದೆ. ಆದ್ದರಿಂದ. NIV ಕೂಡ ಕೇಂದ್ರ ಪರೀಕ್ಷೆಗಳನ್ನೂ ಮಾಡಿ ಮೇ 20 ರಂದು ವರದಿ ನೀಡಿತು. ಆದರೆ ರಾಜ್ಯ ಸರ್ಕಾರ ಅವರಿಗಾಗಿ ಕಾದು ಕೂಡಲಿಲ್ಲ. ಜಿಲ್ಲಾ ಮೆಡಿಕಲ್ ಅಧಿಕಾರಿಯವರಿಗೆ ಎಂಟು ಜನರ ತಜ್ಞರ ಒಂದು ತಂಡ ಸಬೀತ್ ಅವರ ಪೆರಾಂಬಾಗಲ್ಲಿನ ಮನೆಗೆ ಮೇ 18 ರಂದೇ ಬೇಟಿ ಕೊಟ್ಟ ತಂಡ ಅಲ್ಲಿಯ ಸೊಳ್ಳೆಗಳನ್ನು ಹಿಡಿದು ಪರೀಕ್ಷೇಗೆ ಕಳುಹಿಸಿದರು. ನಿಫಾ ಸೊಳ್ಳೆಯಿಂದ ಹರಡುವುದಿಲ್ಲವಾದರೂ ಆ ಜಾಗರೂಕತೆಯ ನಿರೀಕ್ಷೆ ಇಂಥ ಸಮಯಕ್ಕೇ ಅಗತ್ಯವಾಗುತ್ತದೆ. ರಾಜ್ಯದ ಆರೋಗ್ಯ ಮಂತ್ರಿ ಕೆ.ಕೆ. ಶೈಲಜಾ ಅಂದು ಈ ಎಲ್ಲ ತನಿಖಾ ತಂಡದ ಮೇಲ್ವಿಚಾರಣೆ ಮಾಡುತ್ತ ಬಂದು – ರೋಗಿಯನ್ನು ಬೇರ್ಪಡಿಸುವುದು, ಮುಖಪಟ್ಟಿ (Face Mask) ನೀಡುವುದು, ಹೊಗೆ (fogging) ಹಾಕುವುದು ಇತ್ಯಾದಿ. ಇವರು ಇಷ್ಟು ಬೇಗನೆ ಈ ಕಾರ್ಯದಲ್ಲಿ ನಿರತರಾದರೂ ರಾಜ್ಯದ ಆರೋಗ್ಯ ನಿರ್ದೇಶಕರ ಪ್ರಕಾರ ಇದು ಅವರು ಎಲ್ಲ ಸಮಯದಲ್ಲಿ ಕೈಗೊಳ್ಳುವ ಸಾಮಾನ್ಯ ಕ್ರಮಗಳಂತೆ.

ಸಬೀತ್ ಅವರಿಗೆ ನಿಫಾ ಇದ್ದುದರಿಂದ ಅವರು ಮರಣವನ್ನಪ್ಪಿದರು. ಅವರಿಂದ ರೋಗ ಇನ್ನೊಬ್ಬರಿಗೂ ಬಂದಿತ್ತು ಹಾಗೂ ಅವರೂ ಮರಣವನ್ನಪ್ಪಿದರು. ಒಟ್ಟು 1400 ಜನರಿಗೆ ಜ್ವರ ಕಂಡು ಬಂದಿದ್ದರಿಂದ ಅವರ ಆರೋಗ್ಯದ ಮೇಲ್ವಿಚಾರಣೆಗಯನ್ನೂ ಸರ್ಕಾರದಿಂದ ಮಾಡಲಾಯಿತು. ಈ ಕಾರ್ಯಚರಣೆಯಿಂದ ನಿಫಾ ರೋಗ ಹರಡುವುದನ್ನು ತಪ್ಪಿಸಲಾಯಿತು. ರಾಜ್ಯ ನಿಫಾದಿಂದ ಮುಕ್ತ ಎಂದು ಹೇಳಲು 42 ದಿನ ಸಮಯ ಅಗತ್ಯ ಹಾಗೂ ಈ ಸಮಯದಲ್ಲಿ ಅಲ್ಲಿನ ತಜ್ಞರು ಬಾವಲಿಗಳಲ್ಲಿ, ಪ್ರಾಣಿಯಲ್ಲಿ, ಜನರಲ್ಲಿ ಈ ರೋಗ ಮನೆಮಾಡಿದೆಯೇ ಎಂದು ಕಂಡು ಹಿಡಿಯಲು ಮುಂದಾಗಿದ್ದಾರೆ. ಈ ನಿರೀಕ್ಷೆ ಮಾಡಲು ಜನರ, ಪ್ರಾಣಿಗಳ (ಹಂದಿ) ರಕ್ತ ಪರೀಕ್ಷೆ, ಬಾವಲಿಗಳ ರಕ್ತ ಹಾಗೂ ಮೂತ್ರ. ಪರೀಕ್ಷೆ ಇತ್ಯಾದಿ. ಈ ಪ್ರಕರಣದಲ್ಲಿ ಸಬೀತ್ ಅವರ ಮರಣಕೆ ಕಾರಣ ಹಣ್ಣಿನಿಂದ ಅವರಿಗೆ ಹರಡಿದ ನಿಫಾ. ಕೇರಳದ ಆರೋಗ್ಯ ಇಲಾಖೆಯ ತೀವ್ರ ಗತಿಯ ಹತೋಟಿ ಕ್ರಮದಿಂದ ನೀಫಾ ರೋಗವನ್ನೂ ಹತೋಟಿಗೆ ತರಲಾಗಿದ್ದು ಶ್ಲಾಘನೀಯ.

ದೌರ್ಜನ್ಯ ವಿರೋಧಿಸಿ ಪಾದಯಾತ್ರೆ ನಡೆಸಲು ಮುಂದಾದ ದಲಿತ ಮುಖಂಡರ ಬಂಧನದ ಖಂಡನೆ

ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲೂಕಿನ ಗೋನಾಳು ಗ್ರಾಮದ ದಲಿತ ಯುವಕನೋರ್ವನ ಕೈ ಕತ್ತರಿಸಿದ ಆರೋಪಿಗಳನ್ನು ತಕ್ಷಣವೇ ಬಂಧಿಸಬೇಕು. ಗ್ರಾಮದಲ್ಲಿ ಶಾಂತಿಯನ್ನು ಕಾಪಾಡಬೇಕು. ಇಂತಹ ಘಟನೆಗೆ ಕಾರಣವಾದ ಅಂಶಗಳನ್ನು ತನಿಖೆಗೊಳಪಡಿಸಬೇಕು. ಅಲ್ಲಿನ ಮರಳು ಮಾಫಿಯಾ ಚಟುವಟಿಕೆಗಳನ್ನು ತನಿಖೆಗಳಿಗೊಪಡಿಸಿ ಕಾನೂನಿನ ಕ್ರಮ ವಹಿಸಬೇಕು ಎಂದು ಒತ್ತಾಯಿಸಿ 05/06/2018 ರಂದು ಸದರಿ ಗ್ರಾಮದಿಂದ ಶಾಂತಿಯುತ ಪಾದಯಾತ್ರೆ ನಡೆಸಲು ಮುಂದಾಗಿದ್ದ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯದ ಅದ್ಯಕ್ಷರಾದ ಬಿ. ಮಾಳಮ್ಮ ಮತ್ತು ಇತರೇ ಮುಖಂಡರು ಹಾಗೂ ಪ್ರತಿಭಟನಾಕಾರರನ್ನು ಅಲ್ಲಿನ ಪೋಲಿಸರು ಬಂಧಿಸಿದ ಕ್ರಮವನ್ನು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಮತ್ತು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಇದೊಂದು ಪ್ರಜಾಸತ್ತಾತ್ಮಕ ಹಕ್ಕುಗಳ ದಮನ ಮಾಡುವ ಕ್ರಮ ವಾಗಿದೆ. ಜಿಲ್ಲಾ ಆಡಳಿತ ಹಾಗೂ ಪೋಲೀಸರ ಅತಿರೇಕದ ಈ ಕ್ರಮವನ್ನು ಖಂಡಿಸಿ ಎಲ್ಲಾ ತಾಲೂಕುಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ತಕ್ಷಣವೇ ಬಂದಿಸಿದ ಎಲ್ಲರನ್ನು ಬೇಷರತ್ ಆಗಿ ಬಿಡುಗಡೆ ಮಾಡಬೇಕು. ಜಿಲ್ಲಾ ಆಡಳಿತ ಮತ್ತು ಪೋಲೀಸರ ಈ ಪ್ರಜಾಪ್ರಭುತ್ವ ವಿರೋದಿ ಅತಿರೇಕದ ಮೇಲೆ ರಾಜ್ಯ ಸರಕಾರ ಕ್ರಮ ವಹಿಸುವಂತೆ ಒತ್ತಾಯಿಸಲಾಗಿದೆ.



ಮಂಡ್ಸೌರ್ ರೈತ ಹುತಾತ್ಮರ ಸ್ಮರಣೆಯಲ್ಲಿ ಪ್ರತಿಭಟನೆ

'ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಗೊಳಿಸಿ', 'ರೈತರ ಸಂಪೂರ್ಣ ಸಾಲಮನ್ನಾ ಮಾಡುವ ಕಾಯ್ದೆ ಜಾರಿ' ಮಾಡುವಂತೆ ರೈತರು ಮತ್ತು ಕಾರ್ಮಿಕರು ಘೋಷಣೆ ಕೂಗಿ ಸರ್ಕಾರವನ್ನು ಒತ್ತಾಯಿಸಿದರು.
ಮಂಡ್ಸೌರ್ ರೈತ ಹುತಾತ್ಮರ ಸ್ಮರಣೆಯ ಅಂಗವಾಗಿ, ಜೂನ್ 6 ರಂದು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ), ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಹಯೋಗದಲ್ಲಿ 'ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ' ಹಾಗೂ 'ಋಣ ಮುಕ್ತ ಕಾಯ್ದೆ'ಗಾಗಿ ಬುಧವಾರ, ರೇಸ್‌ಕೋರ್ಸ್ ರಸ್ತೆಯ ಮೌರ್ಯ ಹೊಟೇಲ್ ಹತ್ತಿರ ಪ್ರತಿಭಟನಾ ಧರಣಿ ನಡೆಸಿತು.



ಉಚಿತ ಬಸ್ ಪಾಸ್ ನೀಡಲು ಒತ್ತಾಯಿಸಿ KSRTC ಜೂನ್ 15 ರಂದು SFI ಮುತ್ತಿಗೆ

ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವಂತೆ ಜೂನ್ ಮತ್ತು ಜುಲೈ 2017 ರಂದು ಎಸ್.ಎಫ್.ಐ. ವ್ಯಾಪಕ ಪ್ರತಿಭಟನೆ ನಡೆಸಿತ್ತು. ನಮ್ಮ ಹೋರಾಟದ ಭಾಗವಾಗಿ ಹಿಂದಿನ ಕಾಂಗ್ರೆಸ್ ಸರಕಾರ ಬಜೆಟ್ ನಲ್ಲಿ ಉನ್ನತ ಶಿಕ್ಷಣದ ವರೆಗೆ ಉಚಿತ ಬಸ್ ಘೋಷಿಸಿತ್ತು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (KSRTC) 17.04.2018 ರಂದು ಸಭೆ ನಡೆಸಿ ಸಭೆಯ ನಡಾವಳಿಯನ್ನು ಆರ್ಥಿಕ ಇಲಾಖೆಗೆ ಉಚಿತ ಬಸ್ ಕುರಿತು ಪತ್ರವನ್ನು ಬರೆದಿತ್ತು. ಆದರೆ ಸಮ್ಮಿಶ್ರ ಸರಕಾರದ ನಿರ್ಲಕ್ಷ್ಯದಿಂದಾಗಿ ವಿದ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರಾಗುವ ಸನ್ನಿವೇಶ ನಿರ್ಮಾಣವಾಗುತ್ತಿದೆ.

ಹಾಗಾಗಿ ಸಮ್ಮಿಶ್ರ ಸರಕಾರದ ಕ್ರಮ ವಿರೋಧಿಸಿ ಹಾಗೂ ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಉಚಿತ ಬಸ್ ಪಾಸ್ ನೀಡುವಂತೆ ಒತ್ತಾಯಿಸಿ ಬುಧವಾರದಿಂದಲೇ ತಾಲ್ಲೂಕ ಮಟ್ಟದಲ್ಲಿ ಎಸ್.ಎಫ್.ಐ. ಹೋರಾಟ ನಡೆಸುತ್ತಿದೆ. ಸರಕಾರ ಇಲ್ಲಿಯವರೆಗೆ ಸ್ಪಂದಿಸುವ ಪ್ರಯತ್ನ ನಡೆಸಲಿಲ್ಲ. ಸಮ್ಮಿಶ್ರ ಸರಕಾರದ ಈ ವಿದ್ಯಾರ್ಥಿ ವಿರೋಧಿ ನೀತಿ ವಿರೋಧಿಸಿ ಜೂನ್ 15 ರಂದು ಶಾಂತಿನಗರದಲ್ಲಿರುವ KSRTC ಮುಖ್ಯ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಸ್.ಎಫ್.ಐ. ರಾಜ್ಯಾಧ್ಯಕ್ಷ ವಿ.ಅಂಬರೀಶ್, ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**